ಪುಸ್ತಕ ಪ್ರಪಂಚ

ಸಂಪುಟ ೫೦ ಮೇ ೨೦೦೦ ಸಂಚಿಕೆ ೮



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council,Mysore-

Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ಕ್ಲಿಂಟನ್ ಭೇಟಿಯ ಫಲಾಫಲ

ಈಗ ಜಗತ್ತೆಂದರೆ ಅಮೆರಿಕ, ಅಮೆರಿಕ ಎಂದರೆ ಜಗತ್ತು. ಸೋವಿಯಟ್ ಒಕ್ಕೂಟ ಕಿತ್ತುಹೋಗಿ, ರಷ್ಯಾದ ಶಕ್ತಿ ಕುಸಿದನಂತರ ಅಮೆರಿಕ ಜಗತ್ತಿನ ಮಹಾಸಾಮ್ರಾಜ್ಯವಾಗಿದೆ. ಅಲ್ಲಿಯ ಅಧ್ಯಕ್ಷ ರಾಜಕೀಯ ಪೋಪ್ ಆಗಿದ್ದಾರೆ. ಎಲ್ಲ ರಾಷ್ಟ್ರಗಳು ಆ ಕಡೆಗೆ ಕಣ್ಣಾಗಿವೆ. ವಾಷಿಂಗ್‌ಟನ್ ರಾಜಕೀಯ ಜರೂಸಲೆಮ್ ಮಕ್ಕಾ ಆಗಿದೆ. ರಾಷ್ಟ್ರನಾಯಕರಿಗೆ ಅದೊಂದು ಯಾತ್ರಾಕ್ಷೇತ್ರವಾಗಿದೆ. ಆತ್ಮಗೌರವವಿರುವ ಕೆಲವು ರಾಷ್ಟ್ರಗಳು ಅದರ ಹಿರಿಯಣ್ಣತನವನ್ನು ಕಂಡು ಒಳಗೊಳಗೆ ಕುದಿಯುತ್ತಿವೆ. ಜಗತ್ತನ್ನಾಳುತ್ತಿರುವ ಡಾಲರ್ ನಾಣ್ಯಕ್ಕೆ ಬದಲಾಗಿ ಯೂರೋನಾಣ್ಯ ತಲೆಯೆತ್ತುತ್ತಿದೆ. ಚೀನಾ ಅಮೆರಿಕಾಕ್ಕೆ ಸವಾಲಾಗಲು ಯತ್ನಿಸುತ್ತಿದೆ. ಮುಸ್ಲಿಮ್ ರಾಷ್ಟ್ರಗಳಂತು ಅಮೆರಿಕಾವನ್ನು ಸಂಶಯ ದೃಷ್ಟಿಯಿಂದ ನೋಡುತ್ತಿವೆ. ಅಮೆರಿಕ ಜಗತ್ತಿನ ಯಾಜಮಾನ್ಯವನ್ನು ಉಳಿಸಿಕೊಳ್ಳಲು, ಎಲ್ಲ ರಾಷ್ಟ್ರಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು, ಸಕಲ ರಾಜತಂತ್ರಗಳನ್ನು, ಡಾಲರ್ ನಾಣ್ಯವನ್ನು, ಭೇದೋಪಾಯ ದಂಡೋಪಾಯುಗಳನ್ನು ಬಳಸುತ್ತಿದೆ. ಅನ್ಯರಾಷ್ಟ್ರ ಅಣುಬಾಂಬುಗಳನ್ನು ತಯಾರಿಸಬಾರದು, ತಾನು ಮಾತ್ರ ಜಗತ್ತನ್ನೆಲ್ಲ ಭಸ್ಮಮಾಡುವಂಥ ಬಾಂಬು ಬಣಬೆಯನ್ನೊಟ್ಟಿಕೊಳ್ಳಬಹುದೆನ್ನುವ ಅದರ ಧಾಟಿಯಲ್ಲಿಯೇ ಸರ್ವಾಧಿಕಾರದ ಧೋರಣೆಯಿದೆ. ತನ್ನಲ್ಲಿರುವ ರಾಶಿಯನ್ನು ನಾಶಗೊಳಿಸಿ, ತದನಂತರ ಅನ್ಯರಿಗೆ ಬುದ್ಧಿವಾದ ಹೇಳಿದ್ದರೆ, ಅದರ ಮಾತಿನಲ್ಲಿ ತೂಕವಿರುತ್ತಿತ್ತು. ಹಲವು ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಮೂಗುತೂರಿಸುತ್ತಿರುವುದು, ರಾಷ್ಟ್ರಗಳ ನಡುವೆ ವೈಷಮ್ಯ ತಂದುಹಾಕುವುದು ಅದರ ರಾಜತಂತ್ರವಾಗಿದೆ.

ಯಾವ ದೃಷ್ಟಿಯಿಂದ ಪರಿಕಿಸಿದರೂ, ಅಮೆರಿಕ ಮಹಾರಾಷ್ಟ್ರವೆಂಬುದರಲ್ಲಿ ಅನುಮಾನವಿಲ್ಲ. ಕೆಂಪು ಇಂಡಿಯನ್ನರ ಸಮಾಧಿಯ ಮೇಲೆ, ಕರಿಯರ ಗುಲಾಮಿತನದ ಬಂಡವಾಳದ ಮೇಲೆ ಆ ರಾಷ್ಟ್ರ ವರ್ಧಿಸಿತೆಂಬುದಂತು ಸತ್ಯ. ಅದೀಗ ಹಳತಾಗಿದೆ, ಚರಿತ್ರೆಯ ಸಂಗತಿಯಾಗಿದೆ. ಅದು ವಲಸಿಗರ ನಾಡೆಂಬ ಬಿರುದಿಗೆ ಅರ್ಹವಾಗಿದೆ. ಈಗಲೂ ಪ್ರತಿವರ್ಷ ಸಹಸ್ರ ಸಹಸ್ರಮಂದಿ ವಲಸಿಗರು ಅಲ್ಲಿಗೆ ಧಾವಿಸುತ್ತಿದ್ದಾರೆ. ಅವರೆಲ್ಲರೂ ಅಲ್ಲಿಯ ಜನಜೀವನದಲ್ಲಿ ಬೆರೆಯುತ್ತಿದ್ದಾರೆ; ಅಲ್ಲಿಯ ಕಾನೂನನ್ನು ಮುಖ್ಯವಾಗಿ ಸರ್ವಾನ್ವಯ ಶಾಸನವನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ ; ಎಲ್ಲರೂ ಸೇರಿಕೊಂಡು ಅಮೆರಿಕನ್ ಎಂದು ಕರೆಯಬಹುದಾದ ಜನಾಂಗಾತೀತವಾದ ಮಿಶ್ರಸಂಸ್ಕೃತಿಯನ್ನು ರೂಪಿಸುತ್ತಿದ್ದಾರೆ. ಅಲ್ಲಿ ಯಾವುದಕ್ಕೂ ಕೊರತೆಯಿಲ್ಲ ; ಸಂಪತ್ತಿದೆ, ಉದ್ಯೋಗವಿದೆ, ಸುಖಸೌಲಭ್ಯಗಳಿವೆ, ಸ್ವಾತಂತ್ರ್ಯವಿದೆ.ತಾರತಮ್ಯವಿಲ್ಲ; ಮುಕ್ತವಾತಾವರಣವಿದೆ. ಭೌತಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಎಲ್ಲ ದೃಷ್ಟಿಗಳಿಂದಲೂ ಅಲ್ಲಿ ದೊಡ್ಡತನವಿದೆ. ಆದರೆ ವಿದೇಶೀಯ ವ್ಯವಹಾರಗಳಲ್ಲಿ ಮಾತ್ರ ಅದನ್ನು ನಂಬಲಾಗದು. ತಮ್ಮ ದೇಶವೇ ಕೇಂದ್ರವಾದ ಸಂಕುಚಿತ ದೃಷ್ಟಿಯಿಂದ ಅಪ್ರಾಮಾಣಿಕತೆಯಿಂದ ಅನ್ಯಾಯದಿಂದ ವರ್ತಿಸುವುದುಂಟು. ತನಗೆ ನೆಲೆನೀಡುವ ಪಾಕಿಸ್ತಾನ ಏನು ತಪ್ಪು ಮಾಡಿದರೂ ಕಿವುಡ ಕುರುಡರಂತೆ ತೆಪ್ಪಗಿರುತ್ತಾರೆ. ಒಸಾಮ ಬಿನ್ ಲೇಡನ್ ಆಫ್ರಿಕಾದ ರಾಷ್ಟ್ರವೊಂದರಲ್ಲಿ ತಮ್ಮವರನ್ನು ಕೊಲ್ಲುವ ತನಕ, ಭಯೋತ್ಪಾದಕರ ಬಗ್ಗೆ ಕಠಿನವಾಗಿ ಮಾತಾಡಲಿಲ್ಲ. ಕಾಶ್ಮೀರದ ಮೇಲೆ ಹರಿಹಾಯುತ್ತಿರುವ ಭಯೋತ್ಪಾದಕರ ಉದ್ಯಮವನ್ನು ಜಿಹಾದ್ ಎಂದು ಮಿಲಿಟರಿ ಅಧಿಕಾರಿ ಮುಷ್ರಾಫ್ ಕರೆದಾಗ, ಅಮೆರಿಕ ಅವನನ್ನು ಛೇಡಿಸಲಿಲ್ಲ, ಕಾಶ್ಮೀರದ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಲು ಸಿದ್ಧವಾಗಿರುವುದಾಗಿ ಮೇಲಿಂದ ಮೇಲೆ ಘೋಷಿಸುತ್ತಿದೆ. ಆ ಮಧ್ಯಸ್ಥಿಕೆಯಿಂದ ನ್ಯಾಯ ದೊರಕುತ್ತದೆಂದು ಭಾರತ ನಂಬಿಲ್ಲ.

ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಬಿಲ್ ಕ್ಲಿಂಟನ್ ೨೦೦೦ನೆಯ ವರ್ಷದ ಫೆಬ್ರುವರಿ ಮೂರನೆಯ ವಾರದಲ್ಲಿ ಭಾರತಕ್ಕೆ ಭೇಟಿ ನೀಡುತ್ತಾರೆ . ಆ ಭೇಟಿ ಮಹಾಘಟನೆಯೆಂಬಂತೆ ಕೆಲವರು ನಂಬಿಕೊಂಡಂತೆ ಕಾಣುತ್ತದೆ. ಆ ಭೇಟಿಗಾಗಿ ಅಮೆರಿಕದ ಬೊಕ್ಕಸಕ್ಕೆ ಐವತ್ತು ಮಿಲಿಯ ಡಾಲರ್ (ಸುಮಾರು ೪೩. ೫ ಕೋಟಿ ರೂಪಾಯಿ) ಖರ್ಚು ತಗುಲಿತೆಂದು ಅಂದಾಜು ಮಾಡಲಾಗಿದೆ. ಇಂಡಿಯಾ ಸರ್ಕಾರಕ್ಕೆಷ್ಟು ಖರ್ಚಾಗಿದೆಯೊ ಗೊತ್ತಿಲ್ಲ. ಕೋಟ್ಯಂತರ ರೂಪಾಯಿ ಖರ್ಚಾಗಿರಬಹುದು. ಜಗತ್ತಿನ ಮಹಾರಾಷ್ಟ್ರವೊಂದರ ಅಧ್ಯಕ್ಷ ಅತಿಥಿಯಾಗಿ ಬಂದಾಗ ಅದೆಲ್ಲ ಅನಿವಾರ್ಯ.

ಅಮೆರಿಕದ ಅಧ್ಯಕ್ಷರು ಇಂಡಿಯಾದ ರಾಷ್ಟ್ರಪತಿ ಪ್ರಧಾನಿಗಳೊಡನೆ ಚರ್ಚೆ ನಡೆಸುವಾಗ, ವ್ಯವಹಾರ ಕುದುರಿಸುವಾಗ ಸಮಾನಸ್ಕಂದರಂತೆ ವರ್ತಿಸಿರಬೇಕೆಂದು ತೋರುತ್ತದೆ. ಸ್ವಾತಂತ್ರ್ಯಾನಂತರದ ಅರ್ಧಶತಮಾನದಲ್ಲಿ ಇಂಡಿಯಾ ಸಾಧಿಸಿರುವ ಮಹತ್ಕಾರ್ಯ ಸಿದ್ಧಿಗಳನ್ನು ಕ್ಲಿಂಟನ್ ಬಾಯ್ತುಂಬ ಹೊಗಳಿದರು. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಇಂಡಿಯಾ ನಡಸಿರುವ ಸಾಧನೆ ಜಗತ್ತಿಗೆ ಮಾರ್ಗದರ್ಶಕವಾಗಿದೆಯೆಂದು ಹೇಳಿದರು. ನಾನಾ ಜನಾಂಗೀಯ ಮತೀಯ ಜಾತೀಯ ಸಮಸ್ಯೆಗಳನ್ನು ಬಗೆಹರಿಸಿರುವಲ್ಲಿ ಯಶಸ್ವಿಯಾಗಿದೆಯೆಂದವರು ಹೇಳಿರುವಲ್ಲಿ ಇಂಡಿಯಾ ಹೆಮ್ಮೆಪಟ್ಟುಕೊಳ್ಳಬಹುದಾದ ಸಂಗತಿ ನಿಜ. ವಾಣಿಜ್ಯ ಸಂಬಂಧವಾದ ವಿಘ್ನಗಳನ್ನು ತಡೆಗಟ್ಟಬೇಕೆಂದು, ಜಾಗತೀಕರಣಕ್ಕೆ ಸಮ್ಮತಿ ನೀಡಬೇಕೆಂದು, ಅಣ್ವಸ್ತ್ರ ತಯಾರಿಕೆಯ ಬಗ್ಗೆ ಸಂಯಮವಿರಬೇಕೆಂದು, ಸಿಟಿಬಿಟಿಗೆ ಸಹಿಮಾಡಬೇಕೆಂದು ಕ್ಲಿಂಟನ್ ಸೂಚಿಸಿದರು.

ಮಹಾತ್ಮಗಾಂಧಿಯವರ ಜೀವನ ಸಂದೇಶಗಳು ಈಗಲೂ ಜಗತ್ತಿಗೆ ಬೇಕು ಎಂದು ಹೇಳಿದ ಅವರು ಮಗಳೊಂದಿಗೆ ರಾಜ್ ಘಾಟಿಗೆ ಹೋಗಿ, ಸಮಾಧಿಗೆ ಗೌರವ ಸಲ್ಲಿಸಿದರು. ನಮ್ಮಲ್ಲಿಯೂ ಭದ್ರತಾ ಸಿಬ್ಬಂದಿ ಇರುವಾಗ ಅಧ್ಯಕ್ಷರ ಸಾವಿರಾರು ಮಂದಿ ರಕ್ಷಣಾ ಸಿಬ್ಬಂದಿ ಮೊದಲೇ ಇಂಡಿಯಾಕ್ಕೆ ಬಂದಿತ್ತೆಂಬುದು ಗಮನಾರ್ಹ ಸಂಗತಿ.

ಪಾಕಿಸ್ತಾನ ಹತೋಟಿ ರೇಖೆಯ ಹಿಂದಕ್ಕೆ ಸರಿಯಬೇಕೆಂದವರು ನುಡಿಯುವಾಗಲೆ ಕಾಶ್ಮೀರ ಸಮಸ್ಯೆಯನ್ನು ಬೇಗ ಬಗೆಹರಿಸಿಕೊಳ್ಳಬೇಕು, ಆ ಬಗೆಗಿನ ಚರ್ಚೆಯನ್ನು ಮತ್ತೆ ಆರಂಭಿಸಬೇಕೆಂದು ಅವರು ಹೇಳಿದ್ದರಲ್ಲಿ ವಿರೋಧಾಭಾಸವಿದ್ದೇ ಇದೆ. ಅಂತರರಾಷ್ಟ್ರೀಯ ಗಡಿರೇಖೆಯನ್ನು ಬೇಷರತ್ತಾಗಿ ಒಪ್ಪಿಕೊಳ್ಳಬೇಕೆಂದು ಹೇಳಬಹುದಿತ್ತಲ್ಲವೆ? ಮುಗ್ಧರ ಬಲಿಯನ್ನು ತಪ್ಪಿಸುವ ಸಲುವಾಗಿ, ಕಲಹ ನಿಲ್ಲಬೇಕೆಂದದ್ದು ಸರಿ. ಆದರೆ ಕಲಹಕ್ಕೆ ಕಾಲು ಕೆರೆಯುವವರಾರು? ಹಳೆಯ ಕಹಿಯನ್ನೆಲ್ಲ ಮರೆತು ಹೊಸದಾಗಿ ಸಂಧಾನ ಆರಂಭಿಸುವಂತೆ ಅವರು ಸಲಹೆ ಮಾಡಿದರು. ಅದು ಯಾರಾದರೂ ಹೇಳುವಂಥಾದ್ದೇ. ಕಾಶ್ಮೀರದಲ್ಲಿ ಹಿಂಸೆಯನ್ನು ಪ್ರಚೋದಿಸುವ ಜನ ಪಾಕಿಸ್ತಾನ ಸರ್ಕಾರದಲ್ಲಿದ್ದಾರೆಂಬುದನ್ನವರು ಒಪ್ಪಿಕೊಂಡರೂ ಕಾಶ್ಮೀರದ ಸ್ಥಾನಮಾನ ನಿರ್ಧಾರದಲ್ಲಿ ಜನಮತಗಣನೆ ಬೇಡವೆಂದದ್ದು ಕ್ಲಿಂಟನ್‌ರ ವಿವೇಕಕ್ಕೆ ಪರಿಪಕ್ವಾನುಭವಕ್ಕೆ ಸಾಕ್ಷಿಯಾಗಿದೆ.

ತಮ್ಮ ಘನತೆ ವರ್ಚಸ್ಸುಗಳಿಗೆ ಭಂಗವಾಗದಂತೆ, ಅಮೆರಿಕ ಅಧ್ಯಕ್ಷರ ಸ್ಥಾನಮಾನಗಳಿಗೆ ತಕ್ಕಂತೆ ಇಂಡಿಯಾದ ರಾಷ್ಟ್ರಪತಿ ಮತ್ತು ಪ್ರಧಾನಿಗಳು ನಡೆದುಕೊಂಡದ್ದು ಹೆಮ್ಮೆಯ ಸಂಗತಿ. ಪಾಕಿಸ್ತಾನದ ಬಗೆಗಿನ ತಮ್ಮ ನಿಲವನ್ನು ಸರಿಯಾಗಿಯೇ ಸಮರ್ಥಿಸಿಕೊಂಡಿದ್ದಾರೆ. ದೇಶದ ಭದ್ರತೆಗಾಗಿ ಕನಿಷ್ಠ ಪ್ರಮಾಣದ ಶಸ್ತ್ರಾಸ್ತ್ರ ಸೈನ್ಯ ಸಜ್ಜಿಕೆಗಳಿರಬೇಕೆಂಬುದನ್ನು ಸುಸ್ಪಷ್ಟವಾಗಿ

ಅನುಮಾನಕ್ಕವಕಾಶವಿಲ್ಲದಂತೆ ವಿವರಿಸಿದ್ದಾರೆ. ಪೋಖ್ರಾನ್ ಪ್ರಯೋಗ ನಡಸಿದಾಗ, ಜಗತ್ತಿನ ರಾಷ್ಟ್ರಗಳು ಆರ್ಥಿಕ ದಿಗ್ಬಂಧನ ಹೇರಿದಾಗಲೂ ಇಂಡಿಯಾ ನೆಚ್ಚುಗೆಡದೆ ದಿಕ್ಕುಗೆಡದೆ ಅಂದಿನ ಅಗ್ನಿದಿವ್ಯದಿಂದ ಮುಕ್ತವಾದದ್ದೇ ಅದರ ಕೀರ್ತಿ ದಿಗ್ದಿಗಂತವಾಗಿ ಹಬ್ಬಲು ಕಾರಣವಾಗುತ್ತದೆ. ಅದ್ದರಿಂದಲೇ ಅಮೆರಿಕ ಇಂಡಿಯಾದ ಸ್ನೇಹಹಸ್ತಕ್ಕಾಗಿ ಕೈಚಾಚಿತೆಂದು ಹೇಳಬಹುದಾಗಿದೆ. ಈ ಬೆಳವಣಿಗೆಯನ್ನು ಭಾರತೀಯರು ಗಮನಿಸಬೇಕಾಗಿದೆ.

ತಮಗೆ ಪ್ರಾಣಭೀತಿಯಿದ್ದರೂ, ಪಾಕಿಸ್ತಾನ ಭಯೋತ್ಪಾದಕರ ತವರು ನೆಲೆಯಾಗಿದ್ದರೂ, ಪ್ರಜಾಪ್ರಭುತ್ವದ ಸಮಾಧಿಯ ಮೇಲೆ ಸೇನಾಡಳಿತ ಸಂಸ್ಥಾಪಿತವಾಗಿದ್ದರೂ, ತಾವು ಇಂಡಿಯಾಕ್ಕೆ ಬಂದ ದಿನವೇ ಅನಂತನಾಗ ಜಿಲ್ಲೆಯ ಛತ್ತೀಸಿಂಗ್‌ಪುರದಲ್ಲಿ ೩೫ ಮಂದಿ ಸಿಖ್ಖರ ಕೊಲೆಯಾಗಿದ್ದರೂ, ಕ್ಲಿಂಟನ್ ಪಾಕಿಸ್ತಾನದ ಸೇನಾ ಆಡಳಿತಗಾರರನ್ನು ಒಂದೆರಡು ಗಂಟೆ ಭೇಟಿಮಾಡಲೊಪ್ಪಿಕೊಂಡದ್ದಕ್ಕೆ ರಾಜತಾಂತ್ರಿಕ ಕಾರಣಗಳಿರಬೇಕೆಂದು ತೋರುತ್ತದೆ. ಅಮೆರಿಕೆಯ ರಾಜಕೀಯ ಕುತಂತ್ರಕ್ಕೆ ಇದೊಂದು ಸಾಕ್ಷಿ. ಅವರಲ್ಲಿಗೆ ಹೋದದ್ದರಿಂದ ಮಾಜಿಪ್ರಧಾನಿ ನವಾಜ್ ಶರೀಫರಿಗೆ ಮರಣದಂಡನೆ ತಪ್ಪಿದಂತಾಯಿತು. ಕಾಶ್ಮೀರದ ಸಮಸ್ಯೆಯನ್ನು ರಾಜಕೀಯ ನೀತಿಯಿಂದ ಬಗೆಹರಿಸಿಕೊಳ್ಳಬೇಕೇ ಹೊರತು, ಭಯೋತ್ಪಾದನೆ ಮತ್ತು ಯುದ್ಧದ ಮೂಲಕವಲ್ಲವೆಂಬುದನ್ನವರು ಹೇಳಿದ್ದೇನೊ ನಿಜ. ಅವರ ಆ ಸಲಹೆಯನ್ನು ಮೊದಲು ಪುರಸ್ಕರಿಸಿ, ಹುರಿಯತ್ ಹುರಿಯಾಳುಗಳ ನಾಯಕರನ್ನು ಭಾರತ ಬಿಡುಗಡೆ ಮಾಡುತ್ತದೆ. ಒಸಾಮ ಪಾಕಿಸ್ತಾನಕ್ಕೆ ಬಂದರೆ, ಅವನನ್ನು ಅಮೆರಿಕೆಗೆ ಒಪ್ಪಿಸುವುದಾಗಿ ಮುಷ್ರಾಫ್ ಕ್ಲಿಂಟನ್ನರಿಗೆ ವಾಗ್ದಾನ ಮಾಡಿದ್ದಾರೆ. ವಾಗ್ದಾನ ಕಷ್ಟವೆ? ಒಸಾಮ ಪಾಕಿಸ್ತಾನಕ್ಕೆ ರಾಜಾರೋಷಾಗಿ ಬಂದರೆ ತಾನೆ, ಅವನನ್ನು ಅಮೇರಿಕಕ್ಕೆ ಒಪ್ಪಿಸುವ ಪರಿಸ್ಥಿತಿ ಉದ್ಭವವಾಗುವಂಥದು?

ತಮ್ಮ ಭೇಟಿಯಿಂದಾಗಿ ಭಾರತ-ಅಮೆರಿಕಗಳ ಸಂಬಂಧಕ್ಕೆ ಹೊಸ ಅಸ್ತಿವಾರ ಹಾಕಿದಂತಾಗಿದೆ. ನೂತನ ಸಂಬಂಧಗಳನ್ನು ಕುದುರಿಸಲು ಹೊಸ ಅವಕಾಶವನ್ನು ತೆರೆದಂತಾಗಿದೆಯೆಂದು ಕ್ಲಿಂಟನ್ ಜಂಟಿ ಸಂಸತ್ ಸಭೆಯಲ್ಲಿ ಘೋಷಿಸಿದರು. ಸ್ನೇಹ ವಾತಾವರಣದಲ್ಲಿ ನಡೆದ ಅಲ್ಲಿಯ ಇಲ್ಲಿಯ ನಾಯಕರ ಮಾತುಕತೆ ಹಾಗೂ ಘೋಷಣೆಗಳ ಸಾರ್ಥಕತೆ ಅವು ಮುಂದೆ ನೀಡುವ ಫಲವನ್ನವಲಂಬಿಸಿದೆಯೆಂಬುದಂತು ನಿಜ. ನಿರೀಕ್ಷೆಗೆ ಮೀರಿದ ಫಲ ನೀಡಲೆಂಬುದೇ ಅಲ್ಲಿಯ -ಇಲ್ಲಿಯ, ಎಲ್ಲೆಲ್ಲಿಯ ಸಜ್ಜನರ ಸದ್ಭಾವನೆಯೆಂದಿಷ್ಟೇ ಈಗ ಹೇಳಬಹುದು.

ವಾಜಪೇಯಿ ಕ್ಲಿಂಟನ್‌ರ ಭೇಟಿಯಿಂದ ಮಾತ್ರವೇ ಭಾರತ ಸಮೃದ್ಧವಾಗುತ್ತದೆಂದು ಹೇಳಲಾಗದು. ಮುಂದಿನ ಏಳೆಂಟು ತಿಂಗಳಲ್ಲಿ ತಾವು ಅಧ್ಯಕ್ಷಸ್ಥಾನ ಬಿಡುವುದರೊಳಗೆ ಅವರೇನು ಸಾಧಿಸಬಹುದು ? ಅವರು ನಿರ್ಗಮಿಸಿದರೂ ಅಧ್ಯಕ್ಷ ಸ್ಥಾನ ಮಾತ್ರ ನಿರಂತರವಾದದ್ದಲ್ಲವೆ ? ಇರಲಿ, ಒಂದು ನಾಡಿನ ಅಭಿವೃದ್ಧಿಗೆ ಅದರ ಯಶಸ್ಸಿಗೆ ಅಲ್ಲಿಯ ಜನರೇ ಕಾರಣರೆಂಬುದಕ್ಕೆ ಅಮೆರಿಕಾ ದೇಶವೇ ಸಾಕ್ಷಿ. ಅಲ್ಲಿಗೆ ವಲಸೆ ಹೋಗಿರುವ ಭಾರತೀಯರನ್ನು ಕೇಳಿದಾಗ ಗೊತ್ತಾಗುತ್ತದೆ, ಅಲ್ಲಿಯ ಸ್ಥಿತಿಗತಿ, ಅಭ್ಯುದಯ ಕಾರಣಗಳು. ಅವರು ಹೇಳಿದ ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ನಮೂದಿಸಲಾಗಿದೆ : 'ಇಲ್ಲಿಯೂ (ಅಮೆರಿಕೆಯಲ್ಲಿ) ಭ್ರಷ್ಟಾಚಾರವಿದೆ. ಸಮೃದ್ಧ ದೇಶವಾದ್ದರಿಂದ ಸಾಮಾನ್ಯರಿಗದರ ಭೀತಿ ತಟ್ಟುವುದಿಲ್ಲ. ಸುಮಾರು ಇಪ್ಪತ್ತು ದೊಡ್ಡ ಶ್ರೀಮಂತ ವಾಣಿಜ್ಯ ಕೈಗಾರಿಕೆಗಳು ದೇಶವನ್ನು ನಡಸುತ್ತಿವೆ. ಇಲ್ಲಿಯ ಜನ

ದಿನಾಲೂ ೧೦-೧೨ ಗಂಟೆ ದುಡಿಯುತ್ತಾರೆ. ಸೋಮಾರಿಗಳನ್ನಾಗಲಿ, ಹರಟೆಗಾರರನ್ನಾಗಲಿ ನಾವು ಕಂಡಿಲ್ಲ.

'ಹೊರಗಿನಿಂದ ಜನರನ್ನೇಕೆ ಆಮದು ಮಾಡಿಕೊಳ್ಳುತ್ತಾರೆ, ಗೊತ್ತೆ? ತರಬೇತಿ ಹೊಂದಿದ ಜನರಿಗಿಂತ ಹೆಚ್ಚು ಉದ್ಯೋಗಗಳಿವೆ. ಹೊರಗಿನಿಂದ ಜನರನ್ನು ಕರೆತಂದರೆ, ತರಬೇತಿಗೆ ಖರ್ಚುಮಾಡುವ ಹಣ ಉಳಿಯುತ್ತದೆ. ಖಾಲಿ ಹುದ್ದೆಗಳನ್ನು ಬಹುಕಾಲ ಆ ಜನ ಇರಗೊಡರು. ಇರುವುದಾದರೆ, ಉತ್ಪತ್ತಿಕಡಿಮೆಯಾಗಿ, ಹಣದುಬ್ಬರ ಹೆಚ್ಚುತ್ತದೆ. ಮಾರುಕಟ್ಟೆ ನೀತಿಯೇ ವ್ಯಾಪಾರಿಗಳನ್ನು ನಿಯಂತ್ರಿಸುತ್ತದೆ '. ಅನೇಕ ವ್ಯಾಪಾರಿಗಳು ಪಾಪರಾಗಿರುವುದುಂಟು. ಲಂಚರುಷುವತ್ತಿಗೂ ನಾಣ್ಯ ಚಲಾವಣೆಗೂ ಸಂಬಂಧವಿದೆ. ಇಲ್ಲ ನಗದು ವ್ಯವಹಾರ ಕಡಮೆ. ಎಲ್ಲ ವಹಿವಾಟುಗಳೂ ಕ್ರೆಡಿಟ್ ಕಾರ್ಡ್ ಮತ್ತು ಚೆಕ್ಕು ಮೂಲಕ ನಡೆಯುತ್ತವೆ. ನಗದು ವ್ಯವಹಾರ ಭ್ರಷ್ಟಾಚಾರವನ್ನು ಪೋಷಿಸುತ್ತದೆ.

'ಎಲ್ಲಿ ದುಡಿಮೆ ಅಗ್ಗವೊ, ಅಂಥ ಕಡೆಗಳಿಂದ ಕೆಲವು ಸರಕುಗಳನ್ನು ತರಿಸಿಕೊಳ್ಳುತ್ತಾರೆ. ಉದಾಹರಣೆಗೆ, ಉಡುಪುಗಳು. ಭಾರತದಿಂದ ಬರುವ ಸಾಮಾನಿನ ಬಗ್ಗೆ ಇಲ್ಲಿಯವರಿಗೆ ಸಂಶಯ. ಏಕೆಂದರೆ ಅವುಗಳಲ್ಲಿ ಕಲಬೆರಕೆ ಜಾಸ್ತಿ. ಇಲ್ಲಿ ಗುಣಮಟ್ಟಕ್ಕೆ ಬೆಲೆ ಕೊಡುತ್ತಾರೆ.'

'ಇಲ್ಲಿ ಸಾರ್ವಜನಿಕ ಎಂದರೆ ಜಾತಿ ಮತ ಜನಾಂಗ ಭೇದವಿಲ್ಲದೆ ಅನುಸರಿಸಬೇಕಾದ ಕಾನೂನಿದೆ. ಅದನ್ನು ಎಲ್ಲರೂ ಅನುಸರಿಸಬೇಕು ಒಲ್ಲದವರು ದೇಶ ಬಿಟ್ಟು ಹೋಗಬೇಕು. ಇಂಥ ಕಾನೂನು ಭಾರತದಲ್ಲಿದೆಯೆ?'

ಆ ದೇಶದ ಸಂಪದಭ್ಯುದಯಕ್ಕೆ ಇವು ಕೇವಲ ಕೆಲವು ನಿಶಾನೆಗಳು. ಇಂಡಿಯಾದೇಶದ ಅನಭಿವೃದ್ಧಿಗೆ ಜನಸಂಖ್ಯೆಯ ಸ್ಫೋಟವೇ ಕಾರಣವೆಂದು ನಾಯಕರೆಲ್ಲ ಮೇಳರಾಗ ತೆಗೆಯುತ್ತಾರೆ. ಅದೂ ಒಂದು ಸಣ್ಣ ಕಾರಣವಾಗಬಹುದು. ಮಾನವ ಶಕ್ತಿಯ ಮಹತ್ತನ್ನರಿಯಲಾರದ ಜನ ಹಾಗೆ ಹೇಳುತ್ತಾರೆ. ಮಾನವ ಶಕ್ತಿಯನ್ನು ಬಳಸಿ ಕೊಳ್ಳಬಲ್ಲ ನಾಯಕತ್ವವಿದ್ದರೆ, ದೇಶದ ಸ್ಥಿತಿಗತಿಗಳೇ ಬದಲಾವಣೆಯಾಗುತ್ತವೆಂದು ನಿಸ್ಸಂಶಯವಾಗಿ ಹೇಳಬಹುದು. ಚೀನಾದಲ್ಲಿ ಜನಸಂಖ್ಯೆ ಸ್ಫೋಟಗೊಂಡಿಲ್ಲವೆ?

ಸಣ್ಣ ಪುಟ್ಟ ಭಾಷೆಗಳ ಸ್ಥಿತಿಗತಿ

ಮೈಸೂರಿನ ಭಾರತೀಯ ಭಾಷಾ ಕೇಂದ್ರದ ನಿರ್ದೇಶಕರಾದ ಡಾ. ಓ. ಎನ್. ಕೌಲ್ ಸಭೆಯೊಂದರಲ್ಲಿ 'ಬಹುಭಾಷಿಕತೆ ಮತ್ತು ಸಣ್ಣ ಭಾಷೆಗಳ ವಿನಾಶ' ವನ್ನು ಕುರಿತು ಹಲವು ಯಥಾರ್ಥ ಸಂಗತಿಗಳನ್ನು ಹೊರಗೆಡಹಿದ್ದಾರೆ. ಮೊದಲ ಮೂರು ತರಗತಿಗಳಲ್ಲಿಯೂ ಮಾತೃ ಭಾಷೆಯಲ್ಲಿಯೇ ಕಲಿಸಬೇಕು, ಅನಂತರ ಪ್ರಾದೇಶಿಕ ಭಾಷೆಯಲ್ಲಿ ಬೋಧನೆ ಮುಂದುವರಿಸಬೇಕೆಂಬ ನಿಯಮವನ್ನು ಸರಿಯಾಗಿ ಪಾಲಿಸುತ್ತಿಲ್ಲ; ಆಂಗ್ಲ ಮಾಧ್ಯಮ ದೇಶೀಯ ಭಾಷೆಗಳಿಗೆ ಅಪಾಯಕರವಾಗಿವೆ. ೧೯೯೩ರ ವರದಿಯೊಂದರ ಪ್ರಕಾರ ಜಗತ್ತಿನಲ್ಲಿ ೬೭೦೦ ಭಾಷೆಗಳಿವೆ. ಅವುಗಳಲ್ಲಿ ಕಾಲು ಭಾಗದಷ್ಟು ಮುಂದಿನ ಎರಡು ದಶಕಗಳಲ್ಲಿ ಅಳಿಸಿಹೋಗುತ್ತವೆ. ಆಫ್ರಿಕಾದಲ್ಲಿ ಎರಡು ಸಾವಿರ ಭಾಷೆಗಳು ನಾಶವಾಗಿವೆ. ಬಹುಸಂಖ್ಯಾತ ಭಾಷೆ ಪ್ರಬಲವಾದಾಗ, ಶಿಕ್ಷಣಕ್ಕೆ ಬಳಸದಿದ್ದಾಗ , ಪದ ಸಾಮಗ್ರಿ ಕಡಮೆಯಿದ್ದಾಗ, ಮಾತಾಡುವವರೇ ಇಲ್ಲದಾಗ ಸಣ್ಣ ಭಾಷೆ ಅಳಿದುಹೋಗುತ್ತದೆ. ಆರ್ಥಿಕ ರಾಜಕೀಯ ಕಾರಣಗಳಿಂದ ಸಣ್ಣ ಭಾಷೆಗಳು ಅಪಾಯದ

ಪಟ್ಟಿಗೆ ಸೇರುವ ಸಂಭವವುಂಟು. ಇಂಡಿಯಾದಲ್ಲಿ ಕೋಟ್ಯಂತರ ಜನ ಬಳಸುವ ಭಾಷೆಗಳುಂಟು, ನೂರಾರು ಜನ ಬಳಸುವ ಭಾಷೆಗಳುಂಟು. ಪ್ರತಿಯೊಂದು ರಾಜ್ಯದಲ್ಲಿಯೂ ಪ್ರಾದೇಶಿಕ ಭಾಷೆಯುಂಟು. ಎಲ್ಲ ಭಾಷೆಗಳ ಉಳಿವಿಗೆ ಸರ್ಕಾರ ಮತ್ತು ಜನರ ಬೆಂಬಲ ಬೇಕು -ಇದು ಅವರ ಭಾಷಣದ ಸಾರಾಂಶ(ಹಿಂದೂ: ೧೧.೪.೨೦೦೦)

ಎಲ್ಲ ಭಾಷೆಗಳನ್ನುಳಿಸಿಕೊಳ್ಳಬೇಕೆನ್ನುವ ಅವರ ಕಾತರತೆ ಭಾಷಾವಿದರಿಗೆ ಅರ್ಥವಾಗುತ್ತದೆ. ಆದರೆ ಜಾಗತೀಕರಣದ ಈ ದಿನಗಳಲ್ಲಿ ಮಹತ್ವಪೂರ್ಣವಾದ ಪ್ರಾದೇಶಿಕ ಭಾಷೆಗಳನ್ನುಳಿಸಿಕೊಳ್ಳುವುದು ಸಾಧ್ಯವೆ, ಯೋಚಿಸಬೇಕಾಗಿದೆ. ಒಂದು ಕುಟುಂಬದ ಕ್ಷೇಮಕ್ಕಾಗಿ ಒಬ್ಬ ವ್ಯಕ್ತಿಯನ್ನು, ದೇಶದ ಕ್ಷೇಮಕ್ಕಾಗಿ ಒಂದು ಕುಟುಂಬವನ್ನು ತ್ಯಜಿಸಬೇಕಾದೀತು ಎಂಬ ಪೂರ್ವಾಚಾರ್ಯರ ಸಲಹೆಯನ್ನು, ಯೋಗ್ಯವಾದದ್ದು ಬದುಕುತ್ತದೆಂಬ ಡಾರ್ವಿನ್ನನ ಸಿದ್ಧಾಂತವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾಗಿದೆ. ಪ್ರಾದೇಶಿಕ ಭಾಷೆಯನ್ನೇ ಉಳಿಸಿಕೊಳ್ಳುವುದು ಕಷ್ಟವಾಗಿರುವಾಗ ಕೊರಗ ಭಾಷೆಯನ್ನುಳಿಸಿಕೊಳ್ಳುವುದು ಸಾಧ್ಯವೆ ?

ಸಣ್ಣಪುಟ್ಟ ಭಾಷೆಗಳನ್ನುಳಿಸಿಕೊಳ್ಳಲು ನೇರವಾಗಿ ಸಾಧ್ಯವಿಲ್ಲದಿದ್ದರೂ, ಪರೋಕ್ಷವಾಗಿ ಸಾಧ್ಯವೆಂದು ತೋರುತ್ತದೆ. ಕೇವಲ ಆಡುಮಾತಿನಲ್ಲುಳಿದಿರುವ, ಲಿಪಿಯಿಲ್ಲದ ಭಾಷೆಗಳಿಗೆ ಹೊಸಲಿಪಿಯನ್ನು ಸೃಷ್ಟಿಸಬಾರದೆ ಎಂದು ಯಾರೋ ಕೇಳಿದಾಗ, ಕೂಡದು, ಅಕ್ಕಪಕ್ಕದ ಅಥವಾ ದೊಡ್ಡ ಭಾಷೆಗಳ ಲಿಪಿಗಳನ್ನೇ ಬಳಸಿಕೊಳ್ಳಬಹುದೆಂದು ಉತ್ತರಿಸುತ್ತಾರೆ, ಗಾಂಧೀಜಿ. ಸಣ್ಣಪುಟ್ಟ ಭಾಷೆಗಳ ಭವಿಷ್ಯ ಹೇಗಿರಬೇಕೆಂಬುದನ್ನು ಅವರೇ ಸ್ಪಷ್ಟಪಡಿಸಿದಂತಿದೆ.

ಸಣ್ಣ ಭಾಷೆಗಳು ಅಳಿಯುವ ಮುನ್ನ ಆ ಭಾಷೆಗಳ ವ್ಯಾಕರಣವನ್ನು ಶಬ್ದಕೋಶವನ್ನು ಸಿದ್ಧಪಡಿಸುವ ಮೂಲಕ ರಕ್ಷಿಸಬೇಕು. ಅವನ್ನು ನೆರೆಹೊರೆಯಲ್ಲಿ ಪ್ರಸಿದ್ಧವಾಗಿರುವ ಲಿಪಿಯಲ್ಲಿಯೇ ಸಂಸ್ಕರಿಸಬೇಕು. ಉದಾಹರಣೆಗೆ ಸೋಲಿಗ ಭಾಷೆಯ ವ್ಯಾಕರಣವನ್ನು ಶಬ್ದಕೋಶವನ್ನು ಕನ್ನಡಲಿಪಿಯಲ್ಲಿಯೇ ತಯಾರಿಸಬೇಕು. ವಿವರಣೆಯನ್ನು ಕನ್ನಡ ಭಾಷೆಯಲ್ಲಿಯೇ ಕೊಡಬೇಕು. ಮಾದರಿಗಾಗಿ ಇತ್ತೀಚಿನ ತುಳು ನಿಘಂಟನ್ನು ಗಮನಿಸಬಹುದು. ಇವುಗಳ ಜತೆಗೆ ಪ್ರತಿಯೊಂದು ಭಾಷೆಯಲ್ಲಿ ಅಡಕವಾಗಿರುವ ಜಾನಪದ ಸಂಗತಿಗಳ ನಿಘಂಟನ್ನು ಸಿದ್ಧಪಡಿಸಬೇಕು. ಅಷ್ಟೇ ಅಲ್ಲ, ಇವೆಲ್ಲವನ್ನು ಪ್ರತಿನಿಧಿಸುವಂಥ ವಸ್ತು ಸಂಗ್ರಹಾಲಯವನ್ನು ರೂಪಿಸಬೇಕು. ದೊಡ್ಡ ಭಾಷೆಗಳ ವಿದ್ವಾಂಸರು, ಲೇಖಕರು ಮತ್ತು ವಿದ್ಯಾರ್ಥಿಗಳು ಈ ಶಬ್ದಕೋಶಗಳಲ್ಲಿರುವ ಸಾಮಗ್ರಿಯನ್ನು ಧಾರಾಳವಾಗಿ ತಮ್ಮ ಭಾಷೆಯೊಳಗೆ ಸೇರಿಸಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಭಾರತೀಯ ಭಾಷಾ ಕೇಂದ್ರ ಮಾಡಬೇಕಾದ, ಮಾರ್ಗದರ್ಶನ ಮಾಡಬೇಕಾದ, ಪ್ರೇರಣೆ, ಪ್ರಚೋದನೆ, ಪ್ರೋತ್ಸಾಹಗಳ ಮೂಲಕ ಮಾಡಿಸಬೇಕಾದ ಕೆಲಸ ಅಗಾಧವಾಗಿದೆ. ಪ್ರಾದೇಶಿಕ ಭಾಷಾ ಸಂಸ್ಥೆಗಳು, ಸಂಸ್ಕೃತಿ ಪ್ರಸಾರ ಇಲಾಖೆಗಳು, ಅಕಾಡೆಮಿಗಳು, ವಿಶ್ವವಿದ್ಯಾನಿಲಯುಗಳು, ಸಾಹಿತ್ಯ ಪರಿಷತ್ತುಗಳು ಈ ಕೆಲಸವನ್ನು ಶೀಘ್ರವಾಗಿ ಕೈಗೆತ್ತಿ ಕೊಳ್ಳಬೇಕಾಗಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಇಂಥ ಕೆಲಸಕ್ಕೆ ಉದಾರವಾಗಿ ಧನಸಹಾಯ ಮಾಡುವ ಮೂಲಕ ಅಪಾಯಸ್ಥಿತಿಯಲ್ಲಿರುವ ಸಣ್ಣಪುಟ್ಟ ಭಾಷಾ ಸಂಸ್ಕೃತಿಗಳನ್ನು ಪರೋಕ್ಷವಾಗಿ ಉಳಿಸಿಕೊಳ್ಳಬಹುದಾಗಿದೆ.

ವೃದ್ಧಾಶ್ರಮಗಳ ಅನಿವಾರ್ಯತೆ

ಜೀವರಾಶಿಯುಲ್ಲಿ ಬಾಲ್ಯ ಯೌವನ ಪ್ರೌಢಾವಸ್ಥೆಗಳನಂತರ ವಾರ್ಧಿಕ್ಯ ಸೂಚಿಸೆ ನಿಸರ್ಗಸಹಜ, ಅನಿವಾರ್ಯ ಮೊದಲ ಮೂರು ಅವಸ್ಥೆಗಳು ಉತ್ಸಾಹದ, ಭರವಸೆಯ, ಸ್ವರ್ಣಸ್ವಪ್ನಗಳ ಸ್ವರ್ಗಾವಧಿಯಾದರೆ, ಕೊನೆಯ ಅವಸ್ಥೆ ನಿರಾಶೆಯ, ದುಃಖದ, ಆತ್ಮಗೌರವ ಹಾನಿಯ ನರಕಾವಧಿಯಾಗುತ್ತದೆ. ವಾರ್ಧಿಕ್ಯದಲ್ಲಿ ಮನುಷ್ಯ ದ್ವಿತೀಯ ಬಾಲ್ಯವನ್ನ ನುಭವಿಸುತ್ತಾನೆಂದು ಹೇಳುವುದುಂಟು. ವೃದ್ಧಾಪ್ಯದಲ್ಲಿ ಅವನಿಗೆ ಸಮಾಜದ ರಕ್ಷಣೆ ಅಗತ್ಯವೆಂಬು ದೊಂದೇ ಅದರ ಅರ್ಥ. ಜೊಲ್ಲು ಸುರಿತ, ತೊದಲ್ನುಡಿ, ಹಲ್ಲಿಲ್ಲದ ನಗು, ಮಂಡಿಗಾಲು ಚಲನೆ ಮೊದಲಾದ ನೂರಾರು ಬಾಲಲೀಲೆಗಳು ಇಡೀ ಸಮಾಜದ ಗಮನವನ್ನು ಸೆಳೆಯುತ್ತವೆ. ಆದರೆ ವಾರ್ಧಿಕ್ಯದ ಅಂಥದೇ ಚೇಷ್ಟೆಗಳು ಆಕರ್ಷಕ ಲೀಲೆಗಳಾಗದೆ, ತಿರಸ್ಕಾರದ, ಅಸಹ್ಯದ ಪಾಪಗಳಾಗುತ್ತವೆ.

ಮಿಡುಕಾಟ, ಬರಿಮಾಗಿ, ತಲೆದೂಗಿ, ಉಸಿರೆಳೆದಾಟ, ಹೆಳವು, ಕುಗ್ಗು ಕುಸಿ, ಪೆಚ್ಚು ಎಂದು ಶೇಕ್ಸ್‌ಪಿಯರ್ ಮುಪ್ಪನ್ನು ಬಣ್ಣಿಸುತ್ತಾನೆ (Youth and age : ಅನು: ಶ್ರೀ) ಇನ್ನೂ ಅದ್ಭುತವಾಗಿ ಬಸವಣ್ಣನವರು ಮುಪ್ಪನ್ನು ರಂಗಿಸುತ್ತಾರೆ.

> ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡು ಹೋಗದ ಮುನ್ನ,
> ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
> ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ;
> ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ
> ಪೂಜಿಸು ಕೂಡಲ ಸಂಗಮದೇವನ.

ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲ ಇಡೀ ಜಗತ್ತಿನ ಸಾಹಿತ್ಯದಲ್ಲಿಯೇ ಇದು ಅಪೂರ್ವ, ಅಪರೂಪದ ರಚನೆ. ಕಣ್ಣುಮನ ಹೃದಯಗಳಿಗೆ ಕಟ್ಟುವಂಥ, ಮುಟ್ಟುವಂಥ ಚಿತ್ರ ಇಲ್ಲಿದೆ. ಮುಪ್ಪಿನ ಈ ಲಕ್ಷಣಗಳ ಜತೆಗೆ 'ಕಣ್ಣು ಮಂಜಾಗಿ, ಕಿವಿಮಂದವಾಗಿ, ಮರೆವು ಸುಳಿಯುವ ಮುನ್ನ' ಎಂಬ ಚಿಹ್ನೆಗಳನ್ನು ಸೇರಿಸಿಕೊಂಡರೆ ಈ ಚಿತ್ರ ಪೂರ್ಣಗೊಳ್ಳುತ್ತದೆ.

ಬಾಲ್ಯದಲ್ಲಿ ಮನುಷ್ಯನ ಸಕಲಶಕ್ತಿಗಳು ವಿಕಾಸ ಮುಖವಾಗಿದ್ದರೆ, ವೃದ್ಧಾಪ್ಯದಲ್ಲಿ ಅವೆಲ್ಲವೂ ವಿನಾಶಾಭಿಮುಖವಾಗಿರುತ್ತವೆ. ಅವನಿಗೀಗ ದುಡಿಯುವ ಶಕ್ತಿಯಿಲ್ಲ, ಅಧಿಕಾರದ ಮುಷ್ಟಿ ಇಲ್ಲ, ಸಂಪಾದನೆಯ ದಾರಿಯಿಲ್ಲ. ಅದರಿಂದಾಗಿ ಜೇನುಗೂಡಿನಂತೆ ಮುತ್ತುತ್ತಿದ್ದ ನೆಂಟರಿಷ್ಟರು ಅವನಿಂದ ದೂರ ಸರಿಯುತ್ತಾರೆ. ಯೌವನ ಪ್ರೌಢಾವಸ್ಥೆಯ ಕಾಲದಲ್ಲಿ ಅವನ ಬಾಯಿಂದುದುರುತ್ತಿದ್ದ ತುಂತುರು ಮಾತುಗಳಿಗೆ, ಕೈ ಕಣ್ಣುಗಳಿಂದ ಮೂಡುತ್ತಿದ್ದ ಸನ್ನೆಗಳಿಗೆ ಕಾಯುತ್ತಿದ್ದ ಜನ ಮಂಗಮಾಯವಾಗುತ್ತಾರೆ. ದೈಹಿಕಬಲ ಕುಸಿದರೂ, ಮಾನಸಿಕ ಬಲ ಅರೆಗಡೆಯಾಗದಿರುವಾಗ, ಅವನು ಸಹಜವಾಗಿಯೇ ಕಿರಿಯರ ಉಪಯೋಗಕ್ಕಾಗಿ ತನ್ನ ಆಲೋಚನೆಗಳನ್ನೂ ಪಕ್ವಾನುಭವಗಳನ್ನೂ ಒದಗಿಸಲು ಪ್ರಯತ್ನಿಸುತ್ತಾನೆ. ಭಾವಪೂರದ, ಆಲೋಚನಾ ಪ್ರವಾಹದ ಒತ್ತಡವನ್ನು ತಡೆಯಲು ಸಾಧ್ಯವಿಲ್ಲ. ಕೊನೆಯುಸಿರಿರುವ ತನಕ ಯಾವ ಮೂಲಕವಾದರೂ ಸಮಾಜಕ್ಕೆ ಕಿಂಚಿತ್ ಸೇವೆಯನ್ನು ಸಲ್ಲಿಸುವ ಹಂಬಲ ಅವನದು. ಬಾಲ್ಯಾರಭ್ಯ ದುಡಿದವನು ಕೊನೆಗಾಲದಲ್ಲಿ ತೆಪ್ಪಗಿರಲು ಸಾಧ್ಯವೆ? ಕಿರಿಯರು ದಾರಿತಪ್ಪಿದಾಗ,

ಅದನ್ನು ಸರಿಪಡಿಸಬೇಕಾದ್ದು ತನ್ನ ಕರ್ತವ್ಯವೆಂಬುದು ಅವನ ನಂಬಿಕೆ. ಅವನ ಮಾತಿಗೆ ಯಾರೂ ಸೊಪ್ಪು ಹಾಕದಿದ್ದಾಗ, ತೀರ ಸನಿಹದವರೂ ಅವನನ್ನು ವಿರೋಧಿಸುವಾಗ, ತನ್ನ ಒಳತೋಟಿಯನ್ನು ಇತರರೊಡನೆ ಹಂಚಿಕೊಳ್ಳಲು ಸಾಧ್ಯವಿಲ್ಲದಾಗ, ಅವನಿಗೆ ನಿರಾಶೆಯಾಗುವುದು ಸಹಜ. ಹಿಂದಿನ ನೆನಪುಗಳು [illegible] ಭಾವಾವಿಷ್ಟನಾಗುವುದು ಅಸಹಜವೇನಲ್ಲ. [illegible] ಮೊದಲೇ [illegible]ವಾಗಿರುವ, ಕುಟ್ಟೆ ಹಿಡಿ[illegible] ದೇಹದ [illegible]ರೋಗರುಜಿನಗಳನ್ನು ಈ ನಿರಾಶೆ ಭಾವಾವಿಷ್ಟತೆಗಳು ಉಲ್ಬಣಗೊಳಿಸುತ್ತವೆ. ಬರಬರುತ್ತ ಮನಸ್ಸು ದುರ್ಬಲಗೊಳ್ಳುತ್ತದೆ; ಈ ದೌರ್ಬಲ್ಯದಿಂದ ನಾನಾ ವ್ಯಾಧಿಗಳು ಆ ದೇಹದಲ್ಲಿ ಸೇರಿಕೊಳ್ಳುತ್ತವೆ.

ಕುಟುಂಬ ಅವಿಭಕ್ತ ಸ್ಥಿತಿಯಲ್ಲಿದ್ದಾಗ ಅದರ ಪ್ರತಿಯೊಬ್ಬ ಸದಸ್ಯನೂ ಪರಸ್ಪರ ಕ್ಷೇಮದಲ್ಲಿ ಕಾತರನಾಗಿರುತ್ತಿದ್ದ. ಅದರಿಂದಾಗಿ ಹಳಬರಿಗೆ ಗೌರವವಿರುತ್ತಿತ್ತು. ವಯಸ್ಸು ಹೆಚ್ಚಿದಷ್ಟು ಗೌರವವೂ ಹೆಚ್ಚುತ್ತಿತ್ತು. ವೈಜ್ಞಾನಿಕ ಯುಗದಲ್ಲಿ ಸಾಮೂಹಿಕ ನಿಷ್ಠೆ ವೈಯಕ್ತಿಕ ಪ್ರತಿಷ್ಠೆ ನಿಷ್ಠೆಗಳಿಗೆ ಜಾಗಬಿಟ್ಟುಕೊಡಲಾಗಿ, ಏಕಘಟಕ ಕುಟುಂಬ ವ್ಯವಸ್ಥೆಯೇ ಯುಗಧರ್ಮವಾಗಿದೆ. ತಮ್ಮ ಸ್ವಾತಂತ್ರ್ಯಕ್ಕೆ ವೈಯಕ್ತಿಕ ಪ್ರತಿಷ್ಠೆಗೆ, ಏಕಾಂತ ಸುಖಭೋಗಗಳಿಗೆ ಹಾಗೂ ಪ್ರಶಾಂತ ಜೀವನಕ್ಕೆ ವೃದ್ಧರು ಅಡ್ಡಿಯೆಂಬ ಭಾವನೆ ಜಗತ್ತಿನ ಎಲ್ಲ ಕಡೆ ಹರಡುತ್ತಿದೆ. ಹಳೆಯ ಮತ್ತು ಹೊಸ ಪೀಳಿಗೆಗಳ ನಡುವಣ ಅರಿವು ಇಲ್ಲವಾಗುತ್ತಿದೆ. ಅಭಿರುಚಿ ಮನೋಧರ್ಮಗಳಲ್ಲಿ ಅವರ ನಡುವೆ ದೊಡ್ಡ ಕಂದಕ ನಿರ್ಮಾಣವಾಗುತ್ತದೆ. ಅದರಿಂದಾಗಿ ವೃದ್ಧರು ಅಸಹಾಯಕ, ಅನಾಥ, ನಿರ್ಗತಿಕ ಪರಿಸ್ಥಿತಿಯನ್ನೆದುರಿಸಬೇಕಾಗಿದೆ. ಸಮಾಜಕಲ್ಯಾಣ ಇಲಾಖೆಯ ಹಾಗೂ ದಾನಿಗಳ ಗಮನ ಹೆಚ್ಚಾಗಿ ಆ ಜನ ಸಮೂಹದ ಕಡೆಗೆ ಹರಿಯಬೇಕಾಗಿದೆ. ಪ್ರತಿ ತಾಲ್ಲೂಕಿಗೂ ಒಂದೋ ಎರಡೊ ವೃದ್ಧಾಶ್ರಮಗಳನ್ನು ಸ್ಥಾಪಿಸಬೇಕಾಗಿದೆ. ಅಲ್ಲಿ ವೃದ್ಧರ ರುಚಿ ಅಭಿರುಚಿ ಸ್ಥಿತಿಗತಿಗನುಗುಣವಾಗಿ ಸೌಕರ್ಯಗಳನ್ನೊದಗಿಸ ಬೇಕಾಗುತ್ತದೆ. ಸಾಧ್ಯವಾದೆಡೆ ಅವರ ಬೌದ್ಧಿಕ ಶಕ್ತಿಸಾಮರ್ಥ್ಯಗಳನ್ನು ಬಳಸಿಕೊಳ್ಳಬಹುದಾಗಿದೆ. ವೃದ್ಧರು ಪ್ರಾರಂಭಿಸುವ ಲೋಕಕಲ್ಯಾಣಕಾರಕ ಉದ್ಯಮ ಅಥವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕಾದ್ದು ಸರ್ಕಾರದ ಧರ್ಮ.

ಈ ದಿಕ್ಕಿನಲ್ಲಿಯೂ ಪಾಶ್ಚಾತ್ಯರಾಷ್ಟ್ರಗಳು ಬಹು ಮುಂದೆ ಸಾಗಿವೆ. ಇತ್ತೀಚೆಗೆ ಅಮೆರಿಕೆಯ ಪಾಮ್‌ಸ್ಪ್ರಿಂಗ್ ಪ್ರದೇಶಕ್ಕೆ ಹೋಗಿದ್ದಾಗ, ಡಾ. ಜೆ. ಇ. ಚಂದ್ರಶೇಖರ್ ನನ್ನನ್ನು ಮೂರು ವೃದ್ಧಾಶ್ರಮಗಳಿಗೆ ಕರೆದುಕೊಂಡು ಹೋಗಿದ್ದರು: ದಿ ಮೇನರ್ ಕೇರ್, ಮಿರಾಜ್ ಇನ್ ಮತ್ತು ದಿ ಫೌಂಟನ್ ಇನ್ಸ್. ಈ ಮೂರೂ ಲಾಸ್ ಆಂಜಲೀಸ್ ನಗರದ ದಕ್ಷಿಣಕ್ಕಿರುವ ಪಾಮ್ ಮರುಭೂಮಿಯಲ್ಲಿವೆ. ಆ ಮರುಭೂಮಿ ಜನ ಜಲ ಸಸ್ಯ ಸಮೃದ್ಧವಾಗಿದೆ. ಅದು ಅಮೆರಿಕಾದ ಚಳಿಗಾಲದ ವಿಹಾರ ಕೇಂದ್ರವಾಗಿದೆ. ನಿವೃತ್ತರು ಮತ್ತು ವೃದ್ಧರು ವಿಶೇಷವಾಗಿ ಅಲ್ಲಿಗೆ ಬರುವುದರಿಂದ , ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಆರೋಗ್ಯಕರವೂ, ಅತ್ಯುತ್ತಮವೂ ದೀರ್ಘಕಾಲೀನವೂ ಆದ ಜೀವನವನ್ನೊದಗಿಸುವುದೇ ಅವುಗಳ ಗುರಿ. ಇಲ್ಲಿಯ ಒಂದು ಆಶ್ರಮದಲ್ಲಿ ಆಲ್ಜೀಮರ್ ಎಂಬ ಮಾನಸಿಕ ರೋಗದ, ಸ್ಮೃತಿದೌರ್ಬಲ್ಯದ ಜನರನ್ನು ವಿಶೇಷ ರೀತಿಯಲ್ಲಿ ನೋಡಿಕೊಳ್ಳಲಾಗುತ್ತದೆ. ವಾತಾವರಣ ಅವರ ಮನಸ್ಸಿನ ಮೇಲೆ ಘೋರ ಪರಿಣಾಮ ಬಿರುವುದರಿಂದ, ಆ ವಿಷಯದಲ್ಲಿ ವಿಶೇಷ ತರಬೇತಿ ಪಡೆದ ವೈದ್ಯರು, ದಾದಿಯರು

ಮತ್ತು ಆಯಾಗಳು ನಾನಾ ಚಟುವಟಿಕೆಗಳ ಮೂಲಕ ಹಿತಕರವಾದ ವಾತಾವರಣವನ್ನು ಸೃಷ್ಟಿಸುತ್ತಾರೆ. ಸಂಗೀತ ಮತ್ತು ಆಧ್ಯಾತ್ಮ ಸಾಧನೆಯ ಮೂಲಕ, ದೈಹಿಕ ಹಾಗೂ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಅವರ ಸ್ಮೃತಿಶಕ್ತಿಯನ್ನು ಹೆಚ್ಚಿಸಲು, ಜೀವನೋತ್ಸಾಹವನ್ನು ಚಿಗುರಿಸಲು ಯತ್ನಿಸಲಾಗುತ್ತದೆ. ಕೊನೆಗೆ ಕಟ್ಟಡ ಕೋಣೆ, ಕ್ರೀಡಾಂಗಣ ಮತ್ತು ಉದ್ಯಾನಗಳ ನಿರ್ಮಾಣದ ಮೂಲಕವೂ ಸುಂದರ ಸುಗಮ ಆಹ್ಲಾದಕರ ನಿರಾಮಯ ವಾತಾವರಣವನ್ನು ಸೃಷ್ಟಿಸಲಾಗುತ್ತದೆ. ಜತೆಗೆ ನಾನಾ ವಿಧದ ಮನರಂಜನಾ ಸಾಧನಗಳನ್ನೊದಗಿಸಲಾಗಿದೆ. ಆಗಾಗ್ಗೆ ಬಂಧುಗಳು ಬಂದು ರೋಗಿಗಳೊಡನೆ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. ಸುಸಜ್ಜಿತ ಪುಸ್ತಕಭಂಡಾರವೂ ಇದೆ.

ಸ್ಮೃತಿನಷ್ಟ ಮಾನಸಿಕ ರೋಗಿಗಳು ಮಾತ್ರವಲ್ಲ, ಎಲ್ಲ ತರದ ರೋಗಿಗಳೂ ಚಿಕಿತ್ಸೋತ್ತರ ವಿಶ್ರಾಂತಿಗಾಗಿ, ಪುನಶ್ಚೇತನ ನಿಮಿತ್ತವಾಗಿ ಇಂಥ ವೃದ್ಧಾಶ್ರಮಗಳನ್ನು ಸೇರಬಹುದು. ಅವರು ಕೆಲವು ದಿನಗಳಿಂದ ಹಿಡಿದು ವರ್ಷಗಟ್ಟಳೆ ಇರಬಹುದು. ಅವರವರ ಆರ್ಥಿಕ ಶಕ್ತಿ ಅಭಿರುಚಿಗೆ ತಕ್ಕಂಥ ಕೋಣೆಗಳನ್ನು ಹಿಡಿಯಬಹುದು. ಸಾಮಾನ್ಯ ನಿರೋಗಿ ವೃದ್ಧರ ಆರ್ಥಿಕಶಕ್ತಿಗೆ ನಿಲುಕುವಂಥ ಆಶ್ರಮಗಳೂ ಆ ದೇಶದ ಎಲ್ಲೆಡೆ ಇವೆ. ನಾನೂರು-ಐನೂರು ಜನರಿಗೆ ಅವಕಾಶ ಕಲ್ಪಿಸುವ ಆಶ್ರಮಗಳು ಗಾತ್ರದಲ್ಲಿ ಸೌಂದರ್ಯದಲ್ಲಿ ಹಿಂದಿನ ಕಾಲದ ಅರಮನೆಗಳನ್ನು ಮೀರಿಸುತ್ತವೆ. ಶ್ರೀಮಂತ ರಾಷ್ಟ್ರದ ಎಲ್ಲ ವ್ಯವಸ್ಥೆಗಳಂತೆ ಆಶ್ರಮ ವ್ಯವಸ್ಥೆಯೂ ಅಲ್ಲಿಯ ಧನಿಕರಿಂದಾಗಿ ಶ್ರೀಮಂತವಾಗಿವೆ. ವೃದ್ಧರ ಯೋಗಕ್ಷೇಮಕ್ಕಾಗಿ, ಅವರ ಉಲ್ಲಾಸ ಜೀವನಕ್ಕಾಗಿ, ಅಲ್ಲಿಯ ಜನ ಹಾಗೂ ಸರ್ಕಾರ ಮಾಡುತ್ತಿರುವ ಚಿಂತನೆ, ಒದಗಿಸುತ್ತಿರುವ ಅನುಕೂಲಗಳು ಅಪರಿಮಿತ.

ಇಂಡಿಯಾದಲ್ಲಿಯೂ ಹಿಂದಿನಕಾಲದ. ಕೌಟುಂಬಿಕ ವ್ಯವಸ್ಥೆ ಅಳಿಸಿ ಹೋಗುತ್ತಿರುವುದರಿಂದ, ವೃದ್ಧರಿಗೆ ಅವರವರ ಆರ್ಥಿಕ ಶಕ್ತಿ, ಅಲ್ಪಶಕ್ತಿ, ನಿಶ್ಶಕ್ತಿಗಳಿಗನುಗುಣವಾಗಿ ಸೌಲಭ್ಯ ಸೌಕರ್ಯಾನುಕೂಲಗಳನ್ನು ಕಲ್ಪಿಸಬೇಕಾದ್ದು ಸಮಾಜ ಮತ್ತು ಸರ್ಕಾರಗಳ ಆದ್ಯಕರ್ತವ್ಯವಾಗಿದೆ. ಅದು ಅವರಿಗೆ ಮಾಡಬೇಕಾದ ಉಪಕಾರವಲ್ಲ, ಧರ್ಮ, ಸಾಮಾಜಿಕ ಹೊಣೆಗಾರಿಕೆ ಎಂದು ತಿಳಿಯಬೇಕಾಗಿದೆ. ವೃದ್ಧಾಶ್ರಮ ವ್ಯವಸ್ಥೆಯ ಮೂಲಕ ಸಂಸಾರದಲ್ಲಿ ಸುಖಶಾಂತಿಗಳು ನೆಲಸುವಂತಾಗುತ್ತದೆ; ವೃದ್ಧರಿಗೆ ತೃಪ್ತಿ ಸಮಾಧಾನಗಳೊದಗುತ್ತವೆ. ವಿಶ್ವಸಂಸ್ಥೆ ಹಾಗೂ ಇತರ ಅಂತರ ರಾಷ್ಟ್ರೀಯ ಸಂಸ್ಥೆಗಳು ವೃದ್ಧರ ಬಗೆಗೆ ವಿಶೇಷ ಕಾಳಜಿ ವಹಿಸುತ್ತಿವೆಯೆನ್ನುವುದು ಗಮನಿಸಬೇಕಾದ ಸಂಗತಿ.

ದೇಜಗೌ

ಅಪಾಯಕ್ಕೆ ಅಂಜುತ್ತೀರಾ? ಅದು ನಿಮ್ಮ ಜನ್ಮದೊಂದಿಗೇ ನಿಮ್ಮನ್ನು ಹೊಂದಿಕೊಂಡು ಬಂದಿದೆ. ಅಪಾಯವಿರುವಲ್ಲೆಲ್ಲ ಆನಂದವಿದೆ. ಆನಂದವಿರುವಲ್ಲೆಲ್ಲ ಅಪಾಯವಿದೆ ಎಂಬುದನ್ನು ಮಾತ್ರ ಮರೆಯದಿರಿ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

-ಜೆ. ಪಿ. ರಿಚರ್

ಶಿಕ್ಷೆಯಿಂದ ಶಿಕ್ಷಣ

ಪ್ರೊ. ಎಂ.ಎನ್. ಗೋಪಾಲನ್
೫೬ ಮಾರುತಿ ದೇವಸ್ಥಾನ ರಸ್ತೆ
ನಾಲ್ಕನೆಯ ಮುಖ್ಯ ರಸ್ತೆ
ಕುವೆಂಪುನಗರ, ಮೈಸೂರು ೫೭೦

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ವಿದ್ಯಾಸಂಸ್ಥೆಗಳ, ಅದರಲ್ಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಸಂಖ್ಯೆ ಸಾಕಷ್ಟು ತೀವ್ರಗತಿಯಲ್ಲಿ ಏರುತ್ತಿದೆ ಎಂಬುದು ಸರ್ವವಿಧಿತ ಸಂಗತಿ. ಆದರೆ ದುಃಖಕರವಾದ ಸಂಗತಿ ಏನೆಂದರೆ ಈ ಶಾಲೆಗಳ ಗುಣಮಟ್ಟ ದಿನೇ ದಿನೇ ಕೆಳಗಿಳಿಯುತ್ತಿರುವುದು. ಹೀಗೇಕೆ ಎಂದು ತೀವ್ರವಾಗಿ ಆಲೋಚಿಸಿದರೆ, ವಿದ್ಯಾಭ್ಯಾಸಕ್ರಮದಲ್ಲಿ ನಾನಾ ರೀತಿಯ ನ್ಯೂನತೆಗಳು ಕಂಡು ಬರುತ್ತವೆ.

ವಿದ್ಯಾಭ್ಯಾಸ ಒಂದು ಸುಂದರ ಭವನ. ಅದು ೪ ಪ್ರಮುಖ ಕಂಬಗಳ ಮೇಲೆ ಕಟ್ಟಲ್ಪಟ್ಟಿದೆ. ೧. ಮಾತಾಪಿತೃಗಳು, ೨. ಶಾಲೆ/ಸಂಸ್ಥೆ ೩. ಗುರು/ಶಿಕ್ಷಕರು, ೪. ವಿದ್ಯಾರ್ಥಿಗಳು.

ಇವುಗಳಲ್ಲಿ ಯಾವುದಾದರೂ ಒಂದರ ಶಕ್ತಿಯು ಸ್ವಲ್ಪ ಕುಗ್ಗಿದರೂ ಸಾಕು. ಇಡೀ ಭವನವೇ ಕುಸಿದು ಬೀಳುತ್ತದೆ. ಹೀಗಾಗಲು ಅವಕಾಶ ಕೊಡಬಾರದು.

ಮನೆಯೇ ಮುದ್ದು ಮಗುವಿನ ಪ್ರಥಮ ಪಾಠಶಾಲೆ ಎಂಬ ನಾಣ್ನುಡಿಯೊಂದಿದೆ. ಈ ಪಾಠಶಾಲೆಯಲ್ಲಿ ಮಗುವಿನ ತಂದೆ ತಾಯಿಗಳೇ ಅದರ ಪ್ರಥಮ ಗುರುಗಳು. ತಂದೆ ತಾಯಿಗಳು ಹಾಕಿ ಕೊಟ್ಟ ಮಾರ್ಗದಲ್ಲಿಯೇ ಮಗು ಹೆಜ್ಜೆ ಹಾಕುತ್ತದೆ. ಎಷ್ಟೋ ಬಾರಿ ತಂದೆ ತಾಯಿಗಳು ನಾನಾ ಕಾರಣಗಳಿಂದ ತಮ್ಮ ಮುದ್ದಿನ ಕಂದನ ಬಗ್ಗೆ ಕಿಂಚಿತ್ತೂ ಆಸಕ್ತಿ ವಹಿಸದೆ ಅದರ ಭವಿಷ್ಯವನ್ನೇ ಹಾಳು ಮಾಡಿಬಿಡುತ್ತಾರೆ. ಇದು ಅಕ್ಷಮ್ಯ ಅಪರಾಧ. ಇಂದಿನ ಮುದ್ದು ಮಗು ನಾಡಿನ ನಾಳೆಯ ಪ್ರಜೆ. ಇದನ್ನು ಮಗುವಿನ ತಂದೆ ತಾಯಿಗಳು ಅರಿತು ಮಗುವಿಗೆ ಸಾಕಷ್ಟು ತರಬೇತಿ ಕೊಟ್ಟು ಸತ್ಪ್ರಜೆಯಾಗಿ ಬೆಳೆಸಬೇಕು. ಇದು ಅವರೀರ್ವರ ಆದ್ಯ ಕರ್ತವ್ಯ. ತಂದೆ ತಾಯಿಗಳು ತಮ್ಮ ಮುದ್ದು ಕಂದನನ್ನು ಅತಿಯಾಗಿ ಮುದ್ದಿಸಲೂ ಕೂಡದು. ಅಲ್ಲದೆ, ಅತಿಯಾಗಿ ಶಿಕ್ಷಿಸಲೂ ಬಾರದು. ಅತಿ ಸರ್ವತ್ರ ವರ್ಜಯೇತ್.

ಇನ್ನು ವಿದ್ಯಾಶಾಲೆಗಳ ಬಗ್ಗೆ ಒಂದೆರಡು ಮಾತು. ವಿದ್ಯಾಸಂಸ್ಥೆಯ ವಾತಾವರಣವು ಸರಿಯಿಲ್ಲದಿದ್ದರೆ, ಅಲ್ಲಿ ಲಭಿಸುವ ವಿದ್ಯಾಭ್ಯಾಸದ ಗುಣಮಟ್ಟವು ತೀವ್ರ ಅಧೋಗತಿ ಗಿಳಿಯುತ್ತದೆ. ಇದರಲ್ಲಿ ಲವಲೇಶವೂ ಸಂಶಯವಿಲ್ಲ. ವಿದ್ಯಾಸಂಸ್ಥೆಗಳು ಜ್ಞಾನ ದೀವಟಿಕೆಯಾಗಿರಬೇಕೇ ವಿನಹಃ ಜ್ಞಾನ ವಿಕ್ರಯ ಕೇಂದ್ರಗಳಾಗಿರಬಾರದು. ಶಾಲೆಗಳಲ್ಲಿ ವಿದ್ಯಾರ್ಜನೆಗೆ ಬೇಕಾಗುವ ವಿದ್ಯಾ ಸಾಮಗ್ರಿಗಳು ನಿಯಮಿತ ಪ್ರಮಾಣದಲ್ಲಿರಬೇಕು. ಆದರೆ, ಇಂದಿನ ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಅತ್ಯಂತ ಪ್ರಮುಖವಾದ ವಿದ್ಯಾ ಸಾಮಗ್ರಿಗಳೇ ಅಲಭ್ಯ . ಇಂಥ ವಿದ್ಯಾಸಂಸ್ಥೆಗಳಿಗೆ ಸರಕಾರವು ಮಾನ್ಯತೆಯನ್ನು ಕೊಡಬಾರದು. ಏಕೆಂದರೆ, ಈ ತರಹದ ವಿದ್ಯಾ ಸಂಸ್ಥೆಗಳಿಂದ ಇಡೀ ರಾಷ್ಟ್ರಕ್ಕೇ ಆಗುವ ಹಾನಿ ಅಪಾರ.

ಯಾವುದೇ ರಾಷ್ಟ್ರದ ಅಮೂಲ್ಯವಾದ ಆಸ್ತಿಯ ಅಳತೆಗೋಲು ಯಾವುದೆಂದರೆ ಅದು ಆ ರಾಷ್ಟ್ರದ ವಿದ್ಯಾಭ್ಯಾಸದ ಮಟ್ಟ. ಈ ಗುಣಮಟ್ಟ ಕೆಳಗಿಳಿಯದೇ ಮೇಲಕ್ಕೇರುವ ಯತ್ನ ಗುರುವಿನಿಂದ ಮಾತ್ರ ಸಾಧ್ಯ.

ವಿದ್ಯಾರ್ಥಿಗೆ ಅವನ ಮಾತಾಪಿತೃಗಳು ಜನ್ಮ ನೀಡಿದರೆ, ಗುರುವು ಅವನ ಮಾರ್ಗದರ್ಶಿಯಾಗುತ್ತಾನೆ. ಅವನು ಒಂದು ದೀಪ. ದೀಪವು ಹೇಗೆ ಕತ್ತಲನ್ನು ಹೋಗಲಾಡಿಸುತ್ತದೆಯೋ ಹಾಗೆಯೇ ಗುರುವು ವಿದ್ಯಾರ್ಥಿಯ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸಿ ಜ್ಞಾನವೆಂಬ ಬೆಳಕಿಗೆ ಬರಲು ಸಹಾಯಕನಾಗುತ್ತಾನೆ. ಗುರು ಒಂದು ಜೀವಂತ ಗ್ರಂಥಾಲಯವಾಗಿರಬೇಕೇ ವಿನಾ ಬಾವಿಯಲ್ಲಿಯ ನಿಂತ ನೀರಿನಂತಾಗಬಾರದು. ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ವಿಶ್ವಾಸ ಮತ್ತು ಅನುಕಂಪ ಹೊಂದಿರಬೇಕು. ಗುರುವು ವಿದ್ಯಾದಾನ ಮಾಡಬೇಕೇ ವಿನಹ ವಿದ್ಯಾವಿಕ್ರಯ ಮಾಡಕೂಡದು. ಅಂತಹವನು ಗುರುವಿನ ಸ್ಥಾನಕ್ಕೆ ಅನರ್ಹ. ಇಂದಿನ ವಿದ್ಯಾಭ್ಯಾಸದ ಗುಣಮಟ್ಟ ಅಧೋಗತಿಯಲ್ಲಿದ್ದರೆ ಅದಕ್ಕೆ ಗುರುವೂ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಗುರುವು ತನ್ನಲ್ಲಿರುವ ಸದ್ಗುಣಗಳಿಂದ ವಿದ್ಯಾರ್ಥಿಗಳಿಗೆ ಆಯಸ್ಕಾಂತವಾಗಿರಬೇಕು. ಗುರುವು ಸಮಾಜದ ಅಡಿಗಲ್ಲಾಗಿರಬೇಕು. ಏಕೆಂದರೆ ಸಮಾಜವೆಂಬ ಭವನ ಗುರುವೆಂಬ ಅಡಿಗಲ್ಲಿನ ಭದ್ರತೆಯನ್ನು ಅವಲಂಬಿಸಿದೆ. ಅಡಿಗಲ್ಲು ಸ್ವಲ್ಪ ಕುಸಿದರೂ ಸಾಕು ಇಡೀ ಭವನ ಹೇಳಹೆಸರಿಲ್ಲದಂತಾಗುತ್ತದೆ. ಕೊನೆಯದಾಗಿ ಇಂದಿನ ವಿದ್ಯಾರ್ಥಿಗಳಲ್ಲಿ ವಿದ್ಯಾರ್ಜನೆ ಬಗ್ಗೆ ಸಾಕಷ್ಟು ಆಸಕ್ತಿ ಇಲ್ಲವೆಂದು ಹೇಳಬೇಕಾಗುತ್ತದೆ. ಇದಕ್ಕೆ ಕಾರಣಗಳು ಸಾಕಷ್ಟಿದೆ. ಸಮಾಜದ ಇಂದಿನ ಆಗುಹೋಗುಗಳು ಒಂದು ಪ್ರಮುಖ ಕಾರಣ. ಇಂದಿನ ವಿದ್ಯಾರ್ಥಿಗಳು ಸಮಾಜದ ಮುಂದಿನ ಪ್ರಜೆಗಳು. ಸಮಾಜ ಭದ್ರವಾಗಿರಬೇಕಾದರೆ, ವಿದ್ಯಾರ್ಥಿಗಳಿಗೆ ಇಂದಿನಿಂದಲೇ ಸರಿಯಾದ ತರಬೇತಿ ಕೊಟ್ಟು ಸಮಾಜದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಬೇಕು. ಯುವಶಕ್ತಿಯಷ್ಟು ಬಲವಾದ ಶಕ್ತಿ ಬೇರೊಂದಿಲ್ಲ. ಈ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳದಿದ್ದರೆ, ರಾಷ್ಟ್ರಕ್ಕೆ ಆಗುವ ಹಾನಿ ಅಪಾರ. ಇದನ್ನು ರಾಜಕಾರಣಿಗಳು ಅರಿಯಬೇಕು. ಅವರನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗ ಮಾಡಿಕೊಳ್ಳಬಾರದು. ಹಾಗಿದ್ದ ಪಕ್ಷದಲ್ಲಿ ನಿತ್ಯ ಚಿನ್ನದ ಮೊಟ್ಟೆ ಕೊಡುವ ಬಾತನ್ನು ದುರಾಶೆಯಿಂದ ಒಂದೇ ದಿನ ಕೊಂದಂತಾಗುತ್ತದೆ.

ನಟನೆಯಿಂದ ,ಅಥವಾ ತಿರಸ್ಕಾರದಿಂದ ಯಾರಿಗೂ ದಾನ ಮಾಡಬಾರದು. ಹೀಗೆ ಮಾಡಿದ ದಾನವು ದಾನಿಯನ್ನೇ ನಾಶಪಡಿಸುತ್ತದೆ.

-ವಾಲ್ಮೀಕಿ

ಭಿಕ್ಷುಕನ ದುರಾಸೆ

ಭಾರತೀ ಭಟ್
೧೩೩೩, ೨೨ನೇ ಕ್ರಾಸ್, ೩. ಮೈನ್,
ಡಿ. ಬ್ಲಾಕ್, ವಿಜಯನಗರ, ೩ನೇ
ಹಂತ, ಮೈಸೂರು-೫೭೦ ೦೧೭

ಪ್ಲೊವಿನೆಸ್‌ನ ಒಂದು ಚಿಕ್ಕಹಳ್ಳಿಯಲ್ಲಿ ಬರ್ನೆಟ್ ಎಂಬವನು ಕಲ್ಲು ಕಡಿಯುವ ಕೆಲಸಮಾಡಿ ಜೀವಿಸುತ್ತಿದ್ದ. ಬಡವನಾದ ಅವನು ಪ್ರಾಮಾಣಿಕ ಯುವಕನಾಗಿದ್ದ. ಪ್ಲೊವಿನೆಸ್‌ನಲ್ಲಿರುವ ಶ್ರೀಮಂತನೊಬ್ಬನಿಗೆ ಒಬ್ಬಳು ರೂಪವತಿಯಾದ ಮಗಳಿದ್ದಳು. ಅವಳ ಹೆಸರು ಮೆಡೆಲೈನ್ ಪೂರ್‌ನೆಸ್. ಬರ್ನೆಟ್ ಅವಳನ್ನು ಪ್ರೀತಿಸುತ್ತಿದ್ದ. ಅವಳೂ ಅವನನ್ನು ಪ್ರೀತಿಸುತ್ತಿದ್ದಳು. ಆದರೆ ಬಡವನಾದ ಬರ್ನೆಟ್ ಜೊತೆ ಮಗಳನ್ನು ಮದುವೆ ಮಾಡುವ ಮನಸ್ಸು ಮೆಡೆಲೈನ್‌ಳ ಶ್ರೀಮಂತ ತಂದೆಗಿರಲಿಲ್ಲ.

ಕ್ರಿಸ್‌ಮಸ್ ಹಬ್ಬ ಹತ್ತಿರ ಬರಲು ಆ ಊರಿನ ಜಮೀನ್ದಾರ ಒಂದು ಔತಣಕೂಟ ಏರ್ಪಡಿಸಿ ಆ ಊರಿನ ಜನರನ್ನೆಲ್ಲಾ ರಾತ್ರಿ ಊಟಕ್ಕೆ ಆಮಂತ್ರಿಸಿದ. ಬರ್ನೆಟ್‌ಗೂ ಆಮಂತ್ರಣ ಸಿಕ್ಕಿತ್ತು. ಆ ದಿನ ಮೆಡಲೈನಳೂ ಬರುವವಳಿದ್ದಳೆಂದು ಬರ್ನೆಟ್ ತುಂಬಾ ಸಂತೋಷದಿಂದಿದ್ದ.

ಆ ರಾತ್ರಿ ಊಟಕ್ಕೆ ತುಂಬಾ ಮಂದಿ ಬಂದಿದ್ದರು. ಎಷ್ಟು ಮಂದಿ ಬಂದರೂ ತಿಂದು ಮುಗಿಯದಷ್ಟು ಅಲ್ಲಿ ಧಾರಾಳ ತಿಂಡಿ, ತೀರ್ಥಗಳಿದ್ದುವು. ಜನರೆಲ್ಲಾ ಹೊಟ್ಟೆ ತುಂಬಾ ತಿನ್ನುತ್ತಾ, ಕುಡಿಯುತ್ತಾ, ತಮಾಷೆ ಮಾತನಾಡುತ್ತಾ ನಗುತ್ತಿದ್ದರು. ಆಗ ಅಲ್ಲಿಗೊಬ್ಬ ಹರಿದು ಚಿಂದಿಯಾದ ಬಟ್ಟೆ ತೊಟ್ಟ ಭಿಕ್ಷುಕ ಬಂದ. ಅವನನ್ನು ನೋಡಿದೊಡನೆ ಜನರ ಮಾತು, ನಗು ನಿಂತಿತು. ಆ ಭಿಕ್ಷುಕ ಆ ಊರ ಜನರಿಗೆ ಪರಿಚಿತನೇ ಆಗಿದ್ದ.

ಆ ದಿನ ಅಲ್ಲಿ ಒಂದು ದೊಡ್ಡ ಪಾರ್ಟಿ ಇದೆಯೆಂದು ಅವನಿಗೆ ಹೇಗೋ ತಿಳಿದಿತ್ತು. ಹಾಗಾಗಿ ಅವನು ಅಲ್ಲಿಗೆ ಊಟಕ್ಕೆ ಬಂದಿದ್ದ. ಜಮೀನ್ದಾರನು ಭಿಕ್ಷುಕನಿಗೆ ಕುಳಿತುಕೊಳ್ಳಲು ಜಾಗಮಾಡಿಕೊಟ್ಟ. ಕೆಟ್ಟವನಾಗಿದ್ದ ಈ ಭಿಕ್ಷುಕ ಬಂದುದರಿಂದ ಜಮೀನ್ದಾರನಿಗೆ ಮತ್ತು ಇತರ ಅತಿಥಿಗಳಿಗೆ ತುಂಬಾ ಅಸಮಧಾನವಾಗಿತ್ತು.

ಹೊಟ್ಟೆ ತುಂಬಾ ತಿಂದ ನಂತರ ಭಿಕ್ಷುಕ ಜಮೀನ್ದಾರನ ಬಳಿ ಬಂದು ತನಗೆ ಈ ರಾತ್ರಿ ಇಲ್ಲಿ ಮಲಗಲು ಜಾಗ ಕೊಡಬೇಕೆಂದು ಕೇಳಿದ. ಭಿಕ್ಷುಕನ ಮೇಲೆ ದ್ವೇಷದಿಂದ ಇದ್ದ ಜಮೀನ್ದಾರ ''ಇಲ್ಲಿ ಯಾವ ಕೋಣೆಯೂ ಖಾಲಿಯಿಲ್ಲ, ಕುದುರೆ ಲಾಯದಲ್ಲಿ ಹೋಗಿ ಮಲಗು'' ಎಂದು ಹೇಳಿದ.

ಭಿಕ್ಷುಕ ಸಂತೋಷದಿಂದ ಕುದುರೆಯ ಲಾಯಕ್ಕೆ ಹೋಗಿ ಅಲ್ಲಿ ರಾಶಿ ಹಾಕಿದ ಒಣಹುಲ್ಲಿನ ಮೇಲೆ ಮಲಗಿದ. ಮಲಗಿದ ಕೂಡಲೇ ಅವನಿಗೆ ಗಾಢ ನಿದ್ರೆ ಬಂತು. ಮಧ್ಯ ರಾತ್ರಿ, ಯಾವುದೋ ಸ್ವರ ಕೇಳಿ ಅವನಿಗೆ ಎಚ್ಚರವಾಯಿತು. ಮನುಷ್ಯರಂತೆ ಒಂದು ಎತ್ತು ಮತ್ತು ಒಂದು ಕತ್ತೆ ಮಾತನಾಡಿಕೊಳ್ಳುತ್ತಿದ್ದುವು. ಎತ್ತು ಮತ್ತು ಕತ್ತೆ ವರ್ಷವಿಡೀ ಜಮೀನ್ದಾರನಿಗಾಗಿ ದುಡಿದು ಬಳಲಿದ್ದುವು. ''ನಮ್ಮ ಯಜಮಾನನಿಗೆ ಪ್ಲೊವಿನೆಸ್‌ನಲ್ಲಿರುವ ಕಲ್ಲುಗಳ ತಳದಲ್ಲಿ ಅಡಗಿಸಿಟ್ಟಿರುವ ನಿಧಿ ಸಿಗಬೇಕಿತ್ತು. ಇದರಿಂದ ಅವನಿಗೆ ಇನ್ನೂ ಜಾಸ್ತಿ ಎತ್ತುಗಳನ್ನು ಮತ್ತು ಕತ್ತೆಗಳನ್ನು ಕೊಂಡು ಕೊಂಡು ನಮ್ಮ ಕೆಲಸ ಸುಲಭವಾಗುವಂತೆ ಮಾಡಲು ಸಾಧ್ಯವಾಗುತ್ತಿತ್ತು'' ಎಂದು ಎತ್ತು ಹೇಳಿತು.

★ ಕೆಥರಿನ್ ಪೈಲ್ ಸಂಪಾದಿಸಿದ ಒಂದು ಫ್ರೆಂಚ್ ಜಾನಪದ ಕಥೆಯ ಅನುವಾದ

''ಯಾವ ನಿಧಿ?, ಅದು ಎಲ್ಲಿದೆ'' ಎಂದು ಕತ್ತೆ ಕೇಳಿತು.

''ಫ್ಲೋವಿನೆಸ್‌ನಲ್ಲಿ ಒಂದು ಕಡೆ ಗಿಡಗಳ ಪೊದೆಯ ಬಳಿ ದೊಡ್ಡದೊಡ್ಡ ಕಲ್ಲುಗಳ ರಾಶಿಯಿದೆ. ಆ ಕಲ್ಲುಗಳು ಎಷ್ಟು ದೊಡ್ಡದಿವೆಯೆಂದರೆ ಅವುಗಳನ್ನು ಆ ಜಾಗದಿಂದ ಕದಲಿಸಬೇಕಿದ್ದರೆ ಕೆಲವು ಜೊತೆ ಎತ್ತುಗಳು ಬೇಕಾಗಬಹುದು'' ಎಂದು ಎತ್ತು ಹೇಳಿತು.

ಫ್ಲೋವಿನೆಸ್‌ನಿಂದ ಪಕ್ಕದ ಊರಿಗೆ ಹೋಗುವಾಗಲೆಲ್ಲಾ ಆ ಕಲ್ಲುಗಳ ರಾಶಿಯ ಬದಿಯಲ್ಲಿ ಹೋಗುತ್ತಿದ್ದುದರಿಂದ ಕತ್ತೆ ಆ ಕಲ್ಲುಗಳನ್ನು ನೋಡಿತ್ತು.

''ಈ ನಿಧಿಯನ್ನು ಹೊರಗೆ ತೆಗೆಯುವುದು ಅಷ್ಟೇನೂ ಸುಲಭವಲ್ಲ. ಅದನ್ನು ಕಲ್ಲುಗಳು ಜೋಪಾನದಿಂದ ಕಾಯುತ್ತಿರುತ್ತವೆ. ಆದರೆ ನೂರು ವರ್ಷಗಳಿಗೊಮ್ಮೆ ಆ ಕಲ್ಲುಗಳು ಮಧ್ಯರಾತ್ರಿ ನೀರು ಕುಡಿಯಲು ಪಕ್ಕದಲ್ಲಿರುವ ನದಿಗ ಹೋಗಿ ಬರುತ್ತವೆ. ಅವುಗಳು ಸಾಧ್ಯವಾದಷ್ಟು ಬೇಗನೆ ಉರುಳುತ್ತಾ ಹೋಗಿ ನೀರು ಕುಡಿದು ಹಿಂದಿರುಗಿ ಬಂದು ಪುನಃ ತಮ್ಮ ಜಾಗದಲ್ಲಿ ಕದಲದೆ ನಿಲ್ಲುತ್ತವೆ. ಅವು ಹೀಗೆ ನೀರು ಕುಡಿಯಲು ಹೋಗಿರುವ ಆ ಸ್ವಲ್ಪ ಸಮಯದಲ್ಲಿ ಯಾರಾದರೂ ಒಳಗೆ ಹೋಗಿ ನಿಧಿಯನ್ನು ತೆಗೆದುಕೊಂಡು ಬರಬಹುದು. ನೂರು ವರ್ಷವಾಗಲು ಇನ್ನು ಒಂದು ವಾರದ ಸಮಯವಿದೆ'' ಎಂದು ಎತ್ತು ಹೇಳಿತು.

''ಇನ್ನು ಒಂದು ವಾರದಲ್ಲಿ ನಿಧಿಯ ಮುಚ್ಚಳ ತೆರೆಯುತ್ತದೆ ಅಲ್ಲವೆ ?'' ಎಂದು ಕತ್ತೆ ಕೇಳಿತು.

''ಹೌದು. ಇವತ್ತಿನಿಂದ ಸರಿಯಾಗಿ ಒಂದು ವಾರ ಕಳೆದಾಗ ಮಧ್ಯರಾತ್ರಿಯಲ್ಲಿ ತೆರೆಯುತ್ತದೆ''.

ಈ ಸಮಾಚಾರ ನಮ್ಮ ಜಮೀನ್ದಾರನಿಗೆ ತಿಳಿಯಬೇಕಾಗಿತ್ತು. ನಮ್ಮಿಂದ ಅವನಿಗೆ ತಿಳಿಸಲು ಸಾಧ್ಯವಾಗಿದ್ದಿದ್ದರೆ, ದೊಡ್ಡ ಚೀಲ ತುಂಬ ಸಂಪತ್ತನ್ನು ಅವನಿಗೆ ಅಲ್ಲಿಂದ ತೆಗೆದುಕೊಂಡು ಬರಲು ಸಾಧ್ಯವಾಗುತ್ತಿತ್ತು'' ಎನ್ನುತ್ತಾ ಕತ್ತೆ ನಿಟ್ಟುಸಿರು ಬಿಟ್ಟಿತು.

''ಹೌದು, ಆದರೆ ಅದನ್ನು ತೆಗೆದುಕೊಂಡು ಜೀವಂತನಾಗಿ ಹೊರಗೆ ಬರಲು ಸಾಧ್ಯವಿಲ್ಲ. ಕಲ್ಲುಗಳು ಸ್ವಲ್ಪವೇ ಸ್ವಲ್ಪ ಸಮಯ ಆ ಜಾಗವನ್ನು ಬಿಟ್ಟು ದೂರ ಹೋಗಿರುತ್ತವೆ. ಅವು ಹಿಂದಿರುಗಿ ಬರುವಾಗ ಅವನು ಅಲ್ಲೇ ಇದ್ದರೆ ಅವು ಅವನನ್ನು ಜಜ್ಜಿ ಪುಡಿ ಮಾಡಬಹುದು'' ಎಂದು ಎತ್ತು ಹೇಳಿತು.

ಇವುಗಳ ಮಾತುಗಳನ್ನು ಕುತೂಹಲದಿಂದ ಕೇಳುತ್ತಿದ್ದ ಭಿಕ್ಷುಕನಿಗೆ ಚಳಿಯಿಂದ ಮೈ ನಡುಗಿತು.

''ಯಾರಿಗೂ ಈ ಸಂಪತ್ತನ್ನು ಸ್ವಲ್ಪವೂ ತೆಗೆದುಕೊಂಡು ಬರಲು ಸಾಧ್ಯವಿಲ್ಲ ಅಲ್ಲವೆ?''ಎಂದು ಕತ್ತೆ ಕೇಳಿತು.

''ಯಾರಾದರೊಬ್ಬರು ೫ ಎಲೆಯಿರುವ ಲವಂಗವನ್ನು ಕೈಯಲ್ಲಿ ಹಿಡಿದುಕೊಂಡು ಆ ಕಲ್ಲುಗಳ ಎದುರು ನಿಂತರೆ ಅದರ ವಾಸನೆಯಿಂದಾಗಿ ಕಲ್ಲು ತಟಸ್ಥವಾಗುತ್ತವೆ. ಹಾಗಾಗಿ ೫ ಎಲೆಯಿರುವ ಲವಂಗವನ್ನು ಹಿಡಿದಿರುವವನು ಕಲ್ಲುಗಳು ಹಿಂದಿರುಗಿ ಬಂದರೂ ನಿಧಿಯನ್ನು ತೆಗೆದುಕೊಂಡು ಸುರಕ್ಷಿತವಾಗಿ ಹೊರಗೆ ಬರಲು ಸಾಧ್ಯವಿದೆ. ಆದರೆ ಅವನ ಬಳಿಯಿದ್ದ ನಿಧಿಯ ಮೇಲೆ ಬೆಳಗ್ಗಿನ ಸೂರ್ಯನ ಪ್ರಕಾಶ ಬೀಳಬಾರದು. ಹಾಗೆಲ್ಲಾದರೂ ಬಿದ್ದರೆ ಅದು ಕೂಡಲೇ ಪುಡಿಪುಡಿಯಾಗಿ ನಿಷ್ಪ್ರಯೋಜಕವಾಗುತ್ತದೆ. ಸೂರ್ಯ ಉದಯಿಸುವ ಮೊದಲು ಒಬ್ಬ ಮನುಷ್ಯನನ್ನು ಬಲಿಕೊಟ್ಟರೆ ನಿಧಿ ಹಾಗೆಯೇ ಉಳಿಯುತ್ತದೆ''.

''ಈ ಸಂಪತ್ತಿಗಾಗಿ ಯಾವ ಮನುಷ್ಯ

ಬಲಿಯಾಗಿರಲು ತಯಾರಾಗಿರುತ್ತಾನೆ? ನಮ್ಮ ಯಜಮಾನನಂತೂ ಈ ರೀತಿ ಮಾಡಲಾರ'' ಎಂದು ಕತ್ತೆ ಹೇಳಿತು.

ಇದಕ್ಕೆ ಯಾವ ಉತ್ತರವನ್ನೂ ಕೊಡದೆ ಎತ್ತು ಸುಮ್ಮಗಾಯಿತು. ಅನಂತರ ಕತ್ತೆಯೂ ಮಾತನಾಡಲಿಲ್ಲ. ಈ ಪ್ರಾಣಿಗಳು ವರ್ಷಕ್ಕೊಮ್ಮೆ ಕ್ರಿಸ್‌ಮಸ್‌ನ ಹಿಂದಿನ ರಾತ್ರಿ ಈ ರೀತಿ ಮನುಷ್ಯರಂತೆ ಮಾತನಾಡುತ್ತಿದ್ದುವು.

ಇವುಗಳ ಮಾತುಗಳನ್ನು ಕೇಳಿದ ಭಿಕ್ಷುಕ ಅಲ್ಲಿರುವ ನಿಧಿ ದೊರೆತರೆ ತಾನು ಶ್ರೀಮಂತನಾಗಬಹುದೆಂದು ಭಾವಿಸಿದ. ಆದರೆ ಇದನ್ನು ಪಡೆಯಲು ಮೊದಲು ೫ ಎಲೆಯಿರುವ ಲವಂಗವನ್ನು ಸಂಪಾದಿಸಬೇಕು.

ಬೆಳಗಾದೊಡನೆ ಭಿಕ್ಷುಕ ಆ ಲಾಯದಿಂದ ಹೊರಗೆ ಬಂದು ಹಳ್ಳಿಯ ಕಡೆಗೆ ನಡೆಯುತ್ತಾ ಹೋಗಿ ಲವಂಗದ ಗಿಡವನ್ನು ಹುಡುಕತೊಡಗಿದ. ಅಲ್ಲೆಲ್ಲಾ ಬೇಕಾದಷ್ಟು ಲವಂಗದ ಗಿಡಗಳಿದ್ದುವು. ಆದರೆ ಆ ಗಿಡಗಳಲ್ಲಿ ಒಂದು, ಎರಡು ಇಲ್ಲವೇ ನಾಲ್ಕು ಎಲೆಗಳ ಲವಂಗಗಳು ಮಾತ್ರ ಇದ್ದುವು. ಅವನಿಗೆ ೫ ಎಲೆಯ ಲವಂಗ ಬೇಕಾಗಿತ್ತು. ಬೆಳಗಿನಿಂದ ರಾತ್ರಿ ತನಕ ಅಲೆದರೂ ಅವನಿಗೆ ಬೇಕಾಗಿರುವಂತಹ ಲವಂಗ ಸಿಗಲಿಲ್ಲ. ಹೀಗೆ ಐದಾರು ದಿವಸ ಹುಡುಕಿದರೂ ಪ್ರಯೋಜನವಾಗಲಿಲ್ಲ. ಅನಂತರ ನಿರಾಶೆಗೊಂಡ ಅವನು ೭ನೆ ದಿವಸ ಸ್ವಲ್ಪ ಹೊತ್ತು ಹುಡುಕಾಡಿ ಸಿಗದೆ ಬೇಸರದಿಂದ ಇನ್ನು ಈ ಕೆಲಸವೇ ಬೇಡವೆನ್ನುತ್ತ ತಲೆ ತಗ್ಗಿಸಿ ಹಳ್ಳಿಯಿಂದ ಹಿಂದಿರುಗಿ ಹೊರಟ. ಹೀಗೆ ಹೋಗುತ್ತಿರುವಾಗ ಒಂದು ಕಡೆ ಕಲ್ಲುಗಳ ರಾಶಿಯ ಮಧ್ಯೆ ಬಿರುಕಿನಲ್ಲಿ ಲವಂಗದ ಗಿಡವೊಂದು ಹುಲುಸಾಗಿ ಬೆಳೆದಿರುವುದು ಕಾಣಿಸಿತು. ಕೂಡಲೇ ಅವನು ಅಲ್ಲಿಗೆ ಹೋಗಿ ಅದರಲ್ಲಿರುವ ಲವಂಗಗಳನ್ನು ಪರೀಕ್ಷಿಸಿ ನೋಡಿದ. ಅಲ್ಲಿ ಅವನಿಗೆ ೫ ಎಲೆಯಿರುವ ಲವಂಗ ಕಾಣಿಸಿತು. ಸಂತೋಷದಿಂದ ಅದನ್ನು ಕಿತ್ತು ತನ್ನ ಬಟ್ಟೆಯೊಳಗೆ ಇಟ್ಟುಕೊಂಡ.

ರಾತ್ರಿಯ ತನಕ ಒಂದು ಛತ್ರದಲ್ಲಿ ವಿಶ್ರಾಂತಿ ತೆಗೆದುಕೊಂಡು ನಂತರ ನಿಧಿ ಇರುವ ಕಲ್ಲುಗಳ ಬಳಿ ಹೋಗುವುದೆಂದು ನಿಶ್ಚಯಿಸಿದ. ಮುಸ್ಸಂಜೆಯಾಗುತ್ತಾ ಬಂದಿತ್ತು. ಹೀಗೆ ಅವನು ನಡೆಯುತ್ತಾ ಆ ದೊಡ್ಡ ಕಲ್ಲುಗಳ ಬಳಿ ಬಂದಾಗ ಅಲ್ಲಿಂದ ಟಕ್, ಟಕ್ ಎಂಬ ಸದ್ದು ಕೇಳಿಸಿತು. ಈ ಮುಸ್ಸಂಜೆಯ ಹೊತ್ತಿನಲ್ಲಿ ಇಲ್ಲಿ ಯಾರು ಕಲ್ಲು ಕಡಿಯುತ್ತಿರಬಹುದೆಂದು ಅವನಿಗೆ ಕುತೂಹಲವುಂಟಾಯಿತು. ಅಲ್ಲಿ ನೋಡಿದಾಗ ಕಲ್ಲಿನ ಕೆಲಸ ಮಾಡುವ ಬರ್ನೆಟ್ ಅಲ್ಲೊಂದು ದೊಡ್ಡ ಕಲ್ಲಿನ ಮೇಲೆ ಸುತ್ತಿಗೆ ಮತ್ತು ಉಳಿಯಿಂದ ಏನೋ ಕೆತ್ತುವುದು ಕಾಣಿಸಿತು. ಬರ್ನೆಟ್ ಆ ಕಲ್ಲಿನ ಮೇಲೆ ಶಿಲುಬೆಯ ಸಂಕೇತವಾದ ಕ್ರಾಸ್‌ನ್ನು ಕೆತ್ತುತ್ತಿದ್ದ.

ಭಿಕ್ಷುಕ ಅವನ ಬಳಿ ಬಂದು '' ಈ ಕಲ್ಲಿನ ಮೇಲೆ ಕ್ರಾಸ್‌ನ್ನು ಕೆತ್ತಿ ಯಾಕೆ ನಿನ್ನ ಸಮಯವನ್ನು ಹಾಳು ಮಾಡುತ್ತಿರುವೆ ? ಎಂದು ಕೇಳಿದ.

''ಎಲ್ಲಿಯೇ ಆಗಲಿ ಶಿಲುಬೆಯ ಸಂಕೇತವಾದ ಕ್ರಾಸ್‌ನ್ನು ಕೆತ್ತುವುದರಿಂದ ಯಾವತ್ತೂ ತೊಂದರೆಯಾಗಲಾರದು. ಅದರ ಮಹತ್ವ ಜನರಿಗೆ ತಿಳಿದಿಲ್ಲ ಅಷ್ಟೆ. ಸುಮ್ಮಗೆ ಸೋಮಾರಿಯಂತೆ ಕಾಲ ಕಳೆಯುವ ಬದಲು ಈ ರೀತಿ ಮಾಡುವುದೇ ನನಗೆ ಸಂತೋಷಕೊಡುತ್ತದೆ '' ಎಂದು ಬರ್ನೆಟ್ ಉತ್ತರಿಸಿದ.

ಕೂಡಲೇ ಭಿಕ್ಷುಕನಿಗೆ ಒಂದು ಆಲೋಚನೆ ಹೊಳೆಯಿತು. ನಿಧಿ ಸಿಗಬೇಕಿದ್ದರೆ ಒಬ್ಬ ಮನುಷ್ಯನನ್ನು ಬಲಿಕೊಡ

ಬೇಕಾಗಿತ್ತಲ್ಲವೆ? ಆದುದರಿಂದ ಭಿಕ್ಷುಕನು ಬರ್ನೆಟ್‌ಗೆ ''ನನ್ನ ಮಾತಿನಂತೆ ಕೇಳಿದರೆ ಈ ರಾತ್ರಿ ನೀನು ಜಗತ್ತಿನಲ್ಲಿ ಅತ್ಯಂತ ಶ್ರೀಮಂತನಾಗ ಬಹುದು'' ಎಂದು ಹೇಳಿ ನಂತರ ಲಾಯದಲ್ಲಿ ಎತ್ತು ಮತ್ತು ಕತ್ತೆ ಮಾತನಾಡಿದ ಸಮಾಚಾರವನ್ನು ತಿಳಿಸಿದ. ಆದರೆ ನಿಧಿಯನ್ನು ಪಡೆಯಲು ೫ ಎಲೆಯ ಲವಂಗ ಬೇಕಾಗುವುದೆಂಬುದನ್ನೂ ಮತ್ತು ಅದಕ್ಕಾಗಿ ಒಬ್ಬ ಮನುಷ್ಯನನ್ನು ಬಲಿಕೊಡ ಬೇಕಾಗುವುದೆಂಬುದನ್ನೂ ಆತನಿಗೆ ಹೇಳಲಿಲ್ಲ.

''ಇಷ್ಟೊಂದು ಸಂಪತ್ತು ಸಿಗುತ್ತದೆ ಯಾದರೆ ನೀನು ಈ ವಿಷಯವನ್ನು ನನ್ನ ಬಳಿ ಯಾಕೆ ಹೇಳುತ್ತಿರುವೆ? ನಿನಗೊಬ್ಬನಿಗೇ ಅದನ್ನು ಪಡೆಯಬಹುದಲ್ಲವೆ? ನಾನು ನಿನಗೆ ಸಹಾಯ ಮಾಡಿದರೆ ಅದಕ್ಕೆ ಪ್ರತಿಫಲವಾಗಿ ನಿನಗೆ ನಾನು ಏನು ಕೊಡಬೇಕು?'' ಎಂದು ಬರ್ನೆಟ್ ಕೇಳಿದ.

''ನೀನು ನನಗಿಂತ ಬಲಶಾಲಿಯಾಗಿರುವಿ. ದುರ್ಬಲನಾದ ನನಗೆ ನಿನ್ನಷ್ಟು ಬೇಗನೆ ನಡೆಯಲು ಸಾಧ್ಯವಾಗದು. ನಾವಿಬ್ಬರೂ ಒಟ್ಟಿಗೆ ಹೋದಲ್ಲಿ ನಾನೊಬ್ಬನೇ ತರುವುದಕ್ಕಿಂತ ಜಾಸ್ತಿ ಚಿನ್ನಾಭರಣಗಳನ್ನು ಚೀಲಗಳಲ್ಲಿ ತುಂಬಿಸಿ ಕಲ್ಲುಗಳು ನದಿಗೆ ಹೋಗಿ ಬರುವುದರೊಳಗೆ ಹೊರಗೆ ತರಬಹುದು. ಅನಂತರ ಅವುಗಳನ್ನೆಲ್ಲ ಒಟ್ಟಿಗೆ ಸೇರಿಸಿ ನಾವಿಬ್ಬರೂ ಹಂಚಿಕೊಳ್ಳೋಣ'' ಎಂದು ಭಿಕ್ಷುಕ ಹೇಳಿದ.

ಬರ್ನೆಟ್ ಭಿಕ್ಷುಕನ ಮಾತಿಗೆ ಸಮ್ಮತಿಸಿದ. ''ನಾವು ಕೆಲವು ದೊಡ್ಡ ದೊಡ್ಡ ಚೀಲಗಳನ್ನು ತೆಗೆದುಕೊಂಡು ಹೋಗಿ ಅವುಗಳಲ್ಲಿ ಸಾಧ್ಯವಿರುವಷ್ಟು ಸಂಪತ್ತನ್ನು ತುಂಬಿಸಿಕೊಂಡು ಬರೋಣ. ನಿನಗೆ ಜಾಸ್ತಿ ಸಂಪತ್ತನ್ನು ತರಲು ಸಾಧ್ಯವಾಗದಿದ್ದರೂ ನನಗೆ ಸಿಗುವ ಪಾಲಿಗಾಗಿ ನಾನು ನಿನಗೆ ಕೃತಜ್ಞನಾಗಿರುತ್ತೇನೆ'' ಎಂದು ಬರ್ನೆಟ್ ಹೇಳಿದ.

ಮಧ್ಯರಾತ್ರಿಯಾದಾಗ ಬರ್ನೆಟ್ ಮತ್ತು ಭಿಕ್ಷುಕ ಚೀಲಗಳನ್ನು ಹಿಡಿದುಕೊಂಡು ಕಲ್ಲುಗಳ ರಾಶಿ ಬಳಿಯಿದ್ದ ಗಿಡಗಳ ಬಳಿಗೆ ಬಂದು ನಿಂತರು. ಚಂದ್ರನ ಪ್ರಕಾಶದಿಂದಾಗಿ ಕಲ್ಲುಗಳು ಸ್ಪಷ್ಟವಾಗಿ ಕಾಣಸುತ್ತಿದ್ದುವು. ಅವುಗಳಲ್ಲಿ ಅತ್ಯಂತ ದೊಡ್ಡ ಕಲ್ಲಿನ ಮೇಲೆ ಬರ್ನೆಟ್ ಚಿತ್ರಿದ ಕ್ರಾಸ್ ಎದ್ದು ಕಾಣಿಸುತ್ತಿತ್ತು. ಇವರು ನೋಡುತ್ತಿದ್ದಂತೆ ಕಲ್ಲುಗಳೆಲ್ಲಾ ತಮ್ಮ ಸ್ಥಳದಿಂದ ಮೇಲೆದ್ದು ಹೊರಳುತ್ತಾ ಸ್ವಲ್ಪ ದೂರದಲ್ಲಿದ್ದ ನದಿಗೆ ನೀರು ಕುಡಿಯಲು ಹೋದುವು.

ದುರಾಸೆಯ ಭಿಕ್ಷುಕ ಕೂಡಲೇ ನಿಧಿಯ ಮೇಲೆ ಬಿದ್ದು ಬೇಗ ಬೇಗನೆ ಚೀಲದಲ್ಲಿ ತುಂಬಿಸತೊಡಗಿದ. ಬರ್ನೆಟ್ ಕೂಡ ಸ್ವಲ್ಪವೂ ವಿಳಂಬ ಮಾಡದೆ ಸಾಧ್ಯವಿದ್ದಷ್ಟು ಆಭರಣಗಳನ್ನು ತನ್ನ ಚೀಲಗಳಲ್ಲಿ ತುಂಬಿಸಿದ. ಎರಡು ಚೀಲಗಳು ತುಂಬುತ್ತಾ ಬಂದುವು. ಕಲ್ಲುಗಳು ಹೊರಳುತ್ತಾ ಬರುತ್ತಿರುವ ಸದ್ದು ಬರ್ನೆಟ್‌ಗೆ ಕೇಳಿಸಿತು. ''ನಾವಿನ್ನು ಇಲ್ಲಿಂದ ಕೂಡಲೇ ಹೊರಗೆ ಹೋಗದಿದ್ದರೆ ಕಲ್ಲುಗಳು ನಮ್ಮನ್ನು ಜಜ್ಜಿ ಹಾಕಿಬಿಡುತ್ತವೆ'' ಎಂದು ಅವನು ಹೇಳಿದ.

''ನೀನು ಹೋಗುವುದಿದ್ದರೆ ಹೋಗು. ನಾನು ಹೋಗುವುದಿಲ್ಲ. ನಿನ್ನ ಹತ್ತಿರ ನನ್ನ ಹಾಗೆ ೫ ಎಲೆಗಳ ಲವಂಗ ಇಲ್ಲ. ಇದೊಂದು ಪ್ರಭಾವಶಾಲಿಯಾದ ಲವಂಗ. ನನ್ನ ಬಳಿ ಈ ಲವಂಗ ಇರುವ ಕಾರಣ ಕಲ್ಲುಗಳು ನನ್ನ ಬಳಿಗೆ ಬರಲಾರವು'' ಎಂದು ಭಿಕ್ಷುಕ ಹೇಳಿದ.

ಭಿಕ್ಷುಕ ಮಾತನಾಡುತ್ತಿದ್ದಂತೆ ಕಲ್ಲುಗಳು ಅವರ ಹತ್ತಿರ ಬಂದಿದ್ದವು. ಹೆದರಿ ನಡುಗುತ್ತಿದ್ದ ಭಿಕ್ಷುಕ ತನ್ನ ಬಳಿಯಿದ್ದ

ಲವಂಗವನ್ನು ಅವುಗಳಿಗೆದುರಾಗಿ ಹಿಡಿದ. ಅದನ್ನು ನೋಡಿದ ಕಲ್ಲುಗಳು ಅವನನ್ನು ಬಿಟ್ಟು ಒಂದು ಬದಿಗೆ ಸರಿಯುತ್ತಾ ತಮ್ಮ ಸ್ಥಾನವನ್ನು ಸೇರತೊಡಗಿದ್ದವು. ಇನ್ನೇನು ತನ್ನ ಜೀವ ಹೋಯಿತು ಎಂದುಕೊಂಡ ಬರ್ನೆಟ್ ತನ್ನನ್ನು ಉಳಿಸುವಂತೆ ದೇವರನ್ನು ಪ್ರಾರ್ಥಿಸ ತೊಡಗಿದ. ಕೂಡಲೇ ಶಿಲುಬೆಯ ಕ್ರಾಸ್ ಕೆತ್ತಿದ್ದ ದೊಡ್ಡ ಕಲ್ಲು ಇತರ ಕಲ್ಲುಗಳಿಂದ ಪ್ರತ್ಯೇಕವಾಗಿ ಬರ್ನೆಟ್‌ನ ಮೇಲೆ ಅವು ಬೀಳದಂತೆ ಅವನಿಗೆದುರಾಗಿ ಗೋಡೆಯಂತೆ ನಿಂತಿತು. ಆಗ ಇತರ ಕಲ್ಲುಗಳು ಅವನನ್ನು ಮುಟ್ಟದೆ ಮೊದಲಿದ್ದ ಜಾಗಕ್ಕೆ ಉರುಳಿ ನಿಂತುವು.

ಭಿಕ್ಷುಕನೂ ಚೀಲಗಳಲ್ಲಿ ನಿಧಿಯನ್ನು ತುಂಬಿಸಿ ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಅವನಿಗೆದುರಾಗಿ ಆ ದೊಡ್ಡ ಕಲ್ಲು ಉರುಳ ತೊಡಗಿತು. ಬೊಬ್ಬಿಡುತ್ತ ಅವನು ತನ್ನ ೫ ಎಲೆಯ ಲವಂಗವನ್ನು ಅದರ ಎದುರು ಹಿಡಿದ. ಆದರೆ ಅದನ್ನು ಲಕ್ಷಿಸದೆ ದೊಡ್ಡಕಲ್ಲು ಅವನ ಮೇಲೆ ಬಂದು ಬಿತ್ತು. ಶಿಲುಬೆಯ ಕ್ರಾಸ್ ೫ ಎಲೆಯ ಲವಂಗಕ್ಕಿಂತ ಜಾಸ್ತಿ ಪ್ರಭಾವಶಾಲಿಯಾಗಿದ್ದುದರಿಂದ ಭಿಕ್ಷುಕನು ಹಿಡಿದ ಲವಂಗದಿಂದ ಯಾವ ಪ್ರಯೋಜನವೂ ಆಗಲಿಲ್ಲ. ಉಳಿದ ಕಲ್ಲುಗಳ ಜತೆ ದೊಡ್ಡ ಕಲ್ಲೂ ತನ್ನ ಮೊದಲಿನ ಸ್ಥಾನದಲ್ಲಿ ಬಂದು ನಿಂತಿತು. ಇನ್ನು ೧೦೦ ವರ್ಷ ಅವು ಅಲ್ಲಿ ನಿಧಿಯನ್ನು ಕಾಯುತ್ತಾ ವಿಶ್ರಾಂತಿ ತೆಗೆದುಕೊಳ್ಳುತ್ತವೆ.

ಬರ್ನೆಟ್ ತನ್ನ ಬಳಿ ಇದ್ದ ೨ ಚೀಲಗಳಲ್ಲಿ ಒಂದನ್ನು ಹೆಗಲಿಗೇರಿಸಿ ಇನ್ನೊಂದು ಭಾರವಾದ ಚೀಲವನ್ನು ಎಳೆದುಕೊಂಡು ಪ್ಲೊಪಿನೆಸ್‌ನ ಹೋಟೆಲನ್ನು ತಲುಪಿದಾಗ ಬೆಳಗಾಗಿ ಸೂರ್ಯ ಆಕಾಶದಲ್ಲಿ ಮೇಲೇರಿದ್ದ. ಬರ್ನೆಟ್‌ನ ಚೀಲಗಳಲ್ಲಿ ತುಂಬಾ ಚಿನ್ನಾಭರಣಗಳಿದ್ದುವು. ಅಂದಿನಿಂದ ಅನನ್ ಇಡೀ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ಮನುಷ್ಯನಾದ. ಅವನನ್ನು ನೋಡಿ ಮೆಡೆಲೈನ್‌ಳ ತಂದೆಗೆ ತುಂಬಾ ಸಂತೋಷವಾಯಿತು. ಅವನನ್ನು ತನ್ನ ಅಳಿಯನಾಗಿ ಸ್ವೀಕರಿಸಿ ತನ್ನ ಮಗಳನ್ನು ಅವನಿಗೆ ಮದುವೆ ಮಾಡಿಕೊಟ್ಟ.

ಭೂಲೋಕದಲ್ಲಿ ಏನನ್ನು ಸಾಧಿಸಬೇಕಾದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮೊದಲು ಮನದಲ್ಲಿ ಮೊಳೆತು ಬೇರೂರಬೇಕು.

-ರಾಷ್ಟ್ರಕವಿ ಕುವೆಂಪು

ವೈದ್ಯರಿಗೆ ನಿರಂತರ ಕಲಿಕೆ ಹಾಗೂ ಪರೀಕ್ಷೆ

ಡಾ|| ಸ.ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

ಈ ತಲೆ ಬರಹ ಹಲವಾರು ವೈದ್ಯರಿಗೆ ತಲೆ ತಿನ್ನಬಹುದು. ಭೀತಿ ಹುಟ್ಟಿಸಬಹುದು. ಆದರೇನು ಮಾಡುವುದು? ಇಂಥ ವಿಚಾರವನ್ನು ಅನೇಕ ತಜ್ಞರ ತಲೆಯಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಲಿದೆ. ಹಲವಾರು ದೇಶಗಳು ಇದನ್ನು ಒಪ್ಪಿಕೊಂಡಿವೆ. ಮುಂದುವರೆಯುತ್ತಿರುವ ದೇಶಗಳಲ್ಲಿ ಒಪ್ಪಿಗೆ ಇದ್ದರೂ ಕಟ್ಟುನಿಟ್ಟಾಗಿ ಪಾಲಿಸಲು ಸಾಧ್ಯವಾಗಿಲ್ಲ. ಯುರೋಪ ದೇಶಗಳಲ್ಲಿ ಮತ್ತು ಅಮೇರಿಕೆಯಲ್ಲಿ ಇದು ಸಾಧ್ಯವೆನಿಸಿದೆ. ಭಾರತಕ್ಕೆ ಇದು ಬರಬಹುದೇ? ಎಂಬ ಪ್ರಶ್ನೆ ದೊಡ್ಡದಿದೆ.

ನಮ್ಮಲ್ಲಿಯ ಮೀಸಲಾತಿಯ ವ್ಯವಸ್ಥೆ ಇದು ಬರದಂತೆ ನೋಡಿಕೊಳ್ಳುತ್ತಿದೆ. ನಮ್ಮಲ್ಲಿಯ ವಿದ್ಯಾರ್ಥಿಗಳು ಒಂದು ಎಂ.ಬಿ.ಬಿ.ಎಸ್ ಪದವಿ ಪಡೆಯುವುದರಲ್ಲಿಯೇ ಸೋತಿರುತ್ತಾರೆ. ಎಂ.ಎಸ್. ಇಲ್ಲವೆ ಎಂ.ಡಿ. ಪದವಿಗಳನ್ನು ಪಡೆಯುವಾಗ ಮುದಿ ವಯಸ್ಸಿನಲ್ಲಿ ಕಾಲಿಡುತ್ತಿರುತ್ತಾರೆ. ಇಂಥವರಿಗೆ ಪದೇ ಪದೇ ಪರೀಕ್ಷೆಗಳಲ್ಲಿ ಪಾಸಾಗಲು ಸೂಚಿಸಿದರೆ ಅವರು ಸಿಡಿದೇಳಬಹುದು. ವಿದೇಶಿ ಪದವಿಗಳನ್ನು ಅಂದರೆ ಎಫ್.ಆರ್.ಸಿ.ಎಸ್. ಹಾಗೂ ಎಫ್.ಆರ್.ಸಿ.ಪಿ. ಪದವಿ ಪಡೆದವರಿಗೂ ಇದು ಅನ್ವಯಿಸುತ್ತದೆ ಅಂದರೆ ಇನ್ನೂ ಗೊಂದಲವಾಗುವುದು.

ಇಂಥ ಪರೀಕ್ಷೆಗಳ ಆವಶ್ಯಕತೆ ಇದೆಯೇ ?

ಇದೆ. ನಿಜವಾಗಿಯೂ ಇದೆ. ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ನೋಡಿದರೆ ವಿಷಯ ಸರಳವಾಗಬಹುದು.

ನನಗೆ ಒಬ್ಬರು ಹಿರಿಯ ವೈದ್ಯರ ಪರಿಚಯವಿದೆ. ಅವರು ಎ.ಬಿ.ಬಿ.ಎಸ್. ಪದವಿ ಪಡೆದು ೫೦ ವರ್ಷಗಳಾದವು. ಇನ್ನೂ ಅವರು ಸೇವೆ ಸಲ್ಲಿಸುತ್ತಿರುವರು. ಅವರು ಒಳ್ಳೆಯ ವೈದ್ಯರು. ಆಗಿನ ಕಾಲದಲ್ಲಿ ರ್‍ಯಾಂಕ್ ವಿದ್ಯಾರ್ಥಿ. ಅವರು ಓದುವಾಗ ವೈದ್ಯಕೀಯ ವಿಷಯಗಳು ಅಷ್ಟೊಂದು ಬೆಳೆದಿರಲಿಲ್ಲ. ವೈರಸ್ ಶಬ್ದವೇ ಬಳಕೆಯಲ್ಲಿ ಬಂದಿರಲಿಲ್ಲ. ಹಲವಾರು ರೋಗಗಳ ಹೆಸರೂ ಗೊತ್ತಿರಲಿಲ್ಲ. ಇನ್ನು ಉಪಚಾರದ ಬಗ್ಗೆ ನೋಡಿದರೆ ಅಂದು ಕೆಲವೇ ಕೆಲವು ಮದ್ದುಗಳು ಲಭ್ಯವಾಗಿದ್ದುವು. ಅವುಗಳ ಸಹಾಯದಿಂದ ಅವರು ಎಲ್ಲ ರೋಗಗಳನ್ನು ಗುಣಪಡಿಸಿದರು ಎನ್ನುತ್ತೇವೆ. ಗುಣವಾದ ರೋಗಗಳು ತಮ್ಮಿಂದ ತಾವೇ ಗುಣವಾದವೋ ಅಥವಾ ಇವರು ಕೊಟ್ಟ ಮದ್ದುಗಳ ಪ್ರಭಾವದಿಂದಲೋ ಎಂದು ಪ್ರಶ್ನಿಸಬಹುದು.

ಆ ಕಾಲಕ್ಕೆ ಪ್ರಯೋಗಾಲಯ ಪರೀಕ್ಷೆಗಳು ಅತಿ ಕಡಿಮೆ ಇದ್ದುವು. ಇಂದು ಅವುಗಳ ಸಂಖ್ಯೆ ವಿಪರೀತವಾಗಿದೆ. ಯಾವ ಪರೀಕ್ಷೆಯನ್ನು ಯಾವ ರೋಗದಲ್ಲಿ ನಡೆಸಬೇಕು ಎಂಬುದು ಆಗಿನ ಕಾಲದವರಿಗೆ ಗೊತ್ತಿರಲಿಲ್ಲ. ಇಂಥ ವೈದ್ಯರು ಜಾಣರು. ಇಂಥವರಿಗೆ ನಾವು ಹೊಸ ರೋಗಗಳ ಬಗ್ಗೆ ಹೊಸ ಸಂಶೋಧನೆಗಳ ಬಗ್ಗೆ ತಿಳಿಸಬೇಕು.

ಅಂದಿನ ವೈದ್ಯರಿಗೆ ರೋಗ ನಿರೋಧಕ ಶಾಸ್ತ್ರ ಅಂದರೆ 'ಇಮ್ಯುನೊಲಜಿ' ಭೇಟಿ ಆಗಿರಲೇ ಇಲ್ಲ. ಇಂದು ಅನೇಕ ರೋಗಗಳು ರೋಗ ನಿರೋಧಕ ಶಾಸ್ತ್ರದ ತೊಡಕುಗಳು

ಎಂದು ಗೊತ್ತಾಗಿದೆ. ಹೀಗೆ ಹಲವಾರು ಸಂಗತಿಗಳನ್ನು ಯಾದಿ ಮಾಡಬಹುದು. ನಿಜ ಇವೆಲ್ಲ ಹೊಸಹೊಸ ಆವಿಷ್ಕಾರಗಳೇ. ಅಂದಿನ ಹಿರಿಯರಿಗೆ ಇವು ತಿಳಿದಿರಲಿಲ್ಲ. ಅವರಿಗೆ ಇವನ್ನೆಲ್ಲ ತಿಳಿಸಬೇಕೆಂದು ಸಿ.ಎಮ್.ಇ. ಕಮ್ಮಟಗಳು ಪ್ರಾರಂಭವಾದುವು. ಸಿ.ಎಂ.ಇ. ಇದರ ಪೂರ್ಣ ಹೆಸರು ಕಂಟಿನ್ಯುಯೇಶನ್ ಆಫ್ ಮೆಡಿಕಲ್ ಎಜ್ಯುಕೇಶನ್ ಎಂದು. ಅಂದರೆ ವೈದ್ಯಕೀಯ ಪರೀಕ್ಷೆ ಪಾಸಾದ ಮೇಲೂ ವೈದ್ಯರಿಗೆ ವೈದ್ಯಕೀಯ ಶಿಕ್ಷಣ ಅಗತ್ಯ ಎನ್ನುವುದು. ಇದನ್ನು ಯುರೋಪ್ ಹಾಗೂ ಅಮೇರಿಕೆಗಳಲ್ಲಿ ಕಟ್ಟುನಿಟ್ಟಾಗಿ ನಡೆಸಿಕೊಂಡು ಬರುತ್ತಲಿದ್ದಾರೆ. ಪ್ರತಿ ವರ್ಷ ಅಲ್ಲಿಯ ವೈದ್ಯರು ತಪ್ಪದೇ ಇಂತಿಷ್ಟು ತಾಸುಗಳ ಶಿಕ್ಷಣ ಪಡೆಯಬೇಕು ಎಂಬ ನಿಯಮವಿದೆ. ಅದನ್ನು ತಪ್ಪಿಸಿದರೆ ವೈದ್ಯರು ತಮ್ಮ ಲೈಸನ್ಸನ್ನೇ ಕಳೆದುಕೊಳ್ಳುವರು. ಇದಕ್ಕಾಗಿ ಅವರು ಬಹು ಎಚ್ಚರವಹಿಸಿ ತರಬೇತಿಗಳಿಗೆ ಹಾಜರ್ ಆಗುತ್ತಾರೆ. ಹಾಜರಾದ ಬಗ್ಗೆ ಸರ್ಟಿಫಿಕೇಟ್ ಪಡೆದು ಕೇಂದ್ರ ಕಛೇರಿಗೆ ಸಲ್ಲಿಸುತ್ತಾರೆ. ಇದನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿ ಕೇಂದ್ರದವರು ಇವರ ಲೈಸನ್ಸ್ ನವೀಕರಿಸುತ್ತಾರೆ.

ಇತ್ತಿತ್ತಲಾಗಿ ವೈದ್ಯಕೀಯ ಸಂಶೋಧನೆಗಳು ಎಷ್ಟು ವೇಗದಿಂದ ಹೊರಬರುತ್ತಿವೆ ಎಂದರೆ ಎರಡು ವರ್ಷಗಳ ಹಿಂದೆಯಷ್ಟೆ ಪಾಸಾದವರಿಗೂ ಅವು ಹೊಸ ವಿಷಯಗಳೆನಿಸುತ್ತವೆ. ಕಾರಣ ಪ್ರತಿ ವರ್ಷ ಪ್ರತಿ ವೈದ್ಯರೂ ಈ ತರಬೇತಿ ಶಿಬಿರಗಳಿಗೆ ಹಾಜರಾಗಬೇಕೆಂಬ ನಿಯಮ ಜಾರಿಗೆ ಬಂದಿದೆ.

ಕೆಲವರು ನಂಬಿಕೆಯ ದುರ್ಲಾಭ ಪಡೆದರು. ತರಬೇತಿ ಶಿಬಿರಗಳಿಗೆ ಹಾಜರ್ ಆಗುವುದು. ಆದರೆ ಅಲ್ಲಿ ಯಾವ ಆಸಕ್ತಿ ತೋರಿಸದೇ ಹೊರಹೊರಗೆ ಮಜಾ ಮಾಡಿ ಸರ್ಟಿಫಿಕೇಟ್ ಗಿಟ್ಟಿಸಿದರು. ಹೇಳುವವರು ಹೇಳಿದರು. ಇವರು ಅದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಫಲಿತಾಂಶ ಎಂದರೆ ಅವರ ಜ್ಞಾನ ವೃದ್ಧಿಗೊಳ್ಳಲಿಲ್ಲ. ಅವರ ಸಲಹೆ ಪಡೆಯುವ ಎಲ್ಲ ರೋಗಿಗಳು ತೊಂದರೆಯಲ್ಲಿ ಬರಹತ್ತಿದರು.

ಇಂಥ ಪ್ರಸಂಗಗಳನ್ನು ತಪ್ಪಿಸಲು ಆ ದೇಶದವರು ಈಗ ತರಬೇತಿ ಮುಗಿದ ಮೇಲೆ ಕಮ್ಮಟಗಳು ಮುಗಿದ ಮೇಲೆ ಅವುಗಳಿಗೆ ಹಾಜರ್ ಆದ ವೈದ್ಯರು ಪರೀಕ್ಷೆಗಳಿಗೆ ಕೂಡ್ರಬೇಕಾಗುತ್ತದೆ. ಆ ಪರೀಕ್ಷೆಗಳಲ್ಲಿ ಉತ್ತೀರ್ಣ ಆದವರಿಗೆ ಮಾತ್ರ ರೋಗಿಗಳನ್ನು ನೋಡುವ ಪರವಾನಿಗೆ ಕೊಡಲಾಗುತ್ತಿದೆ. ಅನುತ್ತೀರ್ಣರಾದರೆ ಅದು ದೊರೆಯುವುದಿಲ್ಲ. ಈ ಮೊದಲು ಅವರು ಎಂಥದೇ ಪರೀಕ್ಷೆ ಪಾಸಾದರೂ ವ್ಯರ್ಥ. ಎಂಥದೇ ಪದಕ ಪಡೆದಿದ್ದರೂ ವ್ಯರ್ಥ. ಇಂತ ಅವಮಾನಕರ ಸ್ಥಿತಿ ತಪ್ಪಿಸಲು ಆ ದೇಶದ ವೈದ್ಯರು ತಮ್ಮ ಜ್ಞಾನವನ್ನು ಸದಾಕಾಲ ಬೆಳೆಸುತ್ತಲೇ ಇರುವರು.

ಭಾರತದ ಪರಿಸ್ಥಿತಿ ಏನು ?

ಈ ವಿಷಯದಲ್ಲೂ ನಾವು ಹಿಂದುಳಿದಿರುವೆವು. ಸುಮಾರು ೨೦ ವರ್ಷಗಳಿಂದ ಈಚೆಗೆ ನಮ್ಮಲ್ಲಿಯೂ ಸಿಎಂಇಗಳು ಪ್ರಾರಂಭವಾದುವು. ಆದರೆ ಅವು ಕೇವಲ ಸಾಮಾಜಿಕ ಸಭೆಗಳಾದುವು. ವೈದ್ಯರು ಅವುಗಳಿಗೆ ಬರುವುದು ತಮ್ಮ ತಮ್ಮ ಸುಖದುಃಖಗಳನ್ನು ಚರ್ಚಿಸುವುದು, ಒಳ್ಳೆಯ ತಿಂಡಿ ತಿನಿಸು ತಿಂದು ಮಜಾ ಮಾಡಿ ಹೋಗುವುದು ನಡೆಯಿತು.

ಆಸಕ್ತಿ ಇದ್ದವರು ಕೆಲವೇ ಜನರು. ಇಂಥ ತರಬೇತಿ ವರ್ಗಗಳಿಗೆ ಹಾಜರ್ ಆದವರ ಸಂಖ್ಯೆಯೋ ನೂರಕ್ಕೆ ೫ರಷ್ಟು ಮಾತ್ರ. ಇನ್ನುಳಿದ

ಪ್ರತಿಶತ ೯೫ರಷ್ಟು ವೈದ್ಯರಿಗೆ ಈ ತರಗತಿಗಳ ಗಾಳಿಯೇ ಬರುತ್ತಿರಲಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದೆಂದರೆ ಇಂಥ ತರಗತಿಗಳನ್ನು ಔಷಧ ಕಂಪನಿಗಳು ಪ್ರಾರಂಭಿಸಿದುವು. ಅವರಿಗೋ ಇದಾವುದು ಪರಿಚಯವಿಲ್ಲ. ಬಂದ ವೈದ್ಯರನ್ನು ಖುಷಿಪಡಿಸುವುದೊಂದೇ ಅವರ ಗುರಿ. ತರಗತಿಗಳ ಹೆಸರಿನಲ್ಲಿ ನಡೆಯಬಾರದ್ದಲ್ಲ ನಡೆದು ಹೋಗುತ್ತಿವೆ.

ಕಾರಣ ನಮ್ಮಲ್ಲಿಯ ಮೆಡಿಕಲ್ ಕೌನ್ಸಿಲ್‌ಗಳು ಈಗ ಎಚ್ಚರವಾಗಬೇಕಾಗಿದೆ. ತಮ್ಮ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಪರವಾನಿಗೆಗಳು ಎಂದೂ ಜೀವನ ಪರ್ಯಂತ ಆಗಿರಬಾರದು. ಅವು ಒಂದು ಅವಧಿಗೆ ಮಾತ್ರ ಇರಬೇಕು. ಅಂದರೆ ಪ್ರತಿ ಐದು ವರ್ಷಕ್ಕೊಮ್ಮೆ ಎಂದು ತಿಳಿಯೋಣ. ಈ ಅವಧಿ ಮುಗಿಯುವುದರೊಳಗಾಗಿ ಆ ವೈದ್ಯರು ತರಬೇತಿ ವರ್ಗಗಳಿಗೆ ಹಾಜರಾಗಿ, ಪರೀಕ್ಷೆ ಪಾಸಾಗಿ ಸರ್ಟಿಫಿಕೇಟ್ ಕೇಂದ್ರ ಕಛೇರಿಗೆ ಸಲ್ಲಿಸಿ ತಮ್ಮ ಮತ್ತೆ ಪರವಾನಿಗೆ ಪಡೆಯಬೇಕು. ಇದನ್ನು ಕಡ್ಡಾಯ ಮಾಡದೇ ಹೋದರೆ ವೈದ್ಯಕೀಯ ಸೇವೆ ಕುಸಿದು ನಗೆಪಾಟಲಾಗಬಹುದು.

ಹಿರಿಯ ಅಧಿಕಾರಿಯ ಹೇಳಿಕೆ

ಹೋದ ವರ್ಷ ಚೆನ್ನೈಗೆ (ಮದ್ರಾಸಿಗೆ) ಓರ್ವ ಹಿರಿಯ ವೈದ್ಯರು ಭೇಟಿಕೊಟ್ಟರು. ಅವರು ಅಲ್ಲಿ ಎಫ್.ಆರ್. ಸಿ.ಎಸ್. ಪರೀಕ್ಷೆ ನಡೆಸಲು ಬಂದಿದ್ದರು. ಇಂಗ್ಲೆಂಡಿನ ವಿಶ್ವವಿದ್ಯಾಲಯದಲ್ಲಿ ಅವರು ಸೇವೆ ಸಲ್ಲಿಸುತ್ತಿರುವರು. ಅವರ ಹೆಸರು ಜೆಮ್ಸ್ ಫಿನ್‌ಬರ್ ಕ್ಯುಲಿನ್ ಎಂದು. ಅವರು ನಮ್ಮವರೊಡನೆ ಚರ್ಚಿಸುತ್ತ ತರಬೇತಿ ಅನಂತರ ಪರೀಕ್ಷೆಗಳನ್ನು ಕೆಲವೇ ದಿನಗಳಲ್ಲಿ ಕಡ್ಡಾಯ ಮಾಡುವುದಾಗಿ ಹೇಳಿದರು. ಅದು ಇಂಗ್ಲೆಂಡಿನಲ್ಲಿ ಸಾಧ್ಯ. ಹಾಗೂ ಸಹಜ.

ಹಾಗಾದರೆ ಭಾರತದಲ್ಲಿ ಯಾರು ಬೆಕ್ಕಿನ ಕೊರಳಲ್ಲಿ ಗಂಟೆ ಕಟ್ಟುವವರು ?

ಬಲಶಾಲಿಯಾದವನಿಗೆ ಯಾವ ಕೆಲಸವೂ ಕಷ್ಟ ಅಲ್ಲ. ವಿದ್ಯಾವಂತನಿಗೆ ಯಾವ ದೇಶವೂ ಪರದೇಶ ಅಲ್ಲ. ಒಳ್ಳೆಯ ಮಾತುಗಾರನಿಗೆ ಶತ್ರುಗಳೇ ಇಲ್ಲ.

- ಹಿತೋಪದೇಶ

ಸುಖ ಜೀವನಕ್ಕೆ ಅಷ್ಟ ಸೂತ್ರಗಳು

ಡಿ.ಎ.ಶಾಮಣ್ಣ
ನಂ.೧೦೯೧,'ಅರಘ',೧ನೇ ಮೇನ್,
೩ನೇ ಕ್ರಾಸ್,ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩.

ನಮ್ಮ ದಿನನಿತ್ಯದ ಬದುಕನ್ನು ಹಲವಾರು ವೈಜ್ಞಾನಿಕ ಸೂತ್ರಗಳು ಬಾಧಿಸುತ್ತವೆ. ಇವುಗಳಲ್ಲಿ ಅತ್ಯಂತ ಹಳೆಯ ಒಂದು ಸೂತ್ರ: "ದೂರವಾಣಿಯ ಗಂಟೆ ಯಾವಾಗಲೂ ನೀವು ಊಟಕ್ಕೆ ಕೂತಾಗ ಬಾರಿಸಿದರೆ, ಬಾಗಿಲಿನ ಗಂಟೆ ನೀವು ಸ್ನಾನಕ್ಕಿಳಿದರುವಾಗ ಮಾತ್ರ ಹೊಡೆದು ಕೊಳ್ಳುತ್ತದೆ." ಹಾಗೆಯೇ ಕಾಲದೇವನಿಂದ ಪರೀಕ್ಷಿಸಲ್ಪಟ್ಟಿರುವ ಇತರ ಸೂತ್ರಗಳು: ಕೆಲಸ ಅದನ್ನು ಪೂರ್ಣಗೊಳಿಸಲು ಇರುವ ಸಮಯದಷ್ಟೂ ವಿಸ್ತಾರಗೊಳ್ಳುತ್ತದೆ. ಜೆರಾಕ್ಸ್ ಯಂತ್ರಗಳು ನಿಮಗೆ ಬೇಕಾದಾಗ ಎಂದೂ ಕೆಲಸ ಮಾಡುವುದಿಲ್ಲ- ಇದು ತಂತ್ರವಿದ್ಯೆಯ ಅಧಃಪತನದ ಚಿಹ್ನೆಯೇ ಸರಿ.

ಬದುಕನ್ನು ಸವೆಸಲು ಬೇಕಾದ ತೀರ ಇತ್ತೀಚಿನ ಕೆಲವು ಸೂತ್ರಗಳನ್ನು ಸಂಗ್ರಹಿಸಲು ಈಗ ಸಮಯ ಯುಕ್ತವಾಗಿದೆ. ಅಂಥ ಅಷ್ಟ ಸೂತ್ರಗಳು ಇಲ್ಲಿವೆ:

ಒಂದನೆಯ ಸೂತ್ರ: "ಹಾಸಿಗೆ ಕೆಟ್ಟದಿದ್ದಷ್ಟೂ ಅಧಿಕ ಸುಖವನ್ನು ನೀಡುತ್ತದೆ." ಇದು ವಿಶ್ವದ ಮಹಾ ಸೂತ್ರಗಳಲ್ಲೊಂದು - E=mc, ಎಂಬ ಸೂತ್ರದಷ್ಟೇ ನಿಖರವಾದದ್ದು. ನಿಜವಾಗಿ ಯೂ ಕೆಟ್ಟದಾಗಿರುವ ಹಾಸಿಗೆಯಲ್ಲಿ ಮಲಗಿ, ನಿಮಗೆ ತತ್‌ಕ್ಷಣವೇ ವ್ಯತ್ಯಾಸ ಗೋಚರಿಸುತ್ತದೆ : ಸವೆದಿರುವ ಹಾಸಿಗೆ ಬಟ್ಟೆ ನಿಮ್ಮನ್ನು ಮಧುರವಾಗಿ ಆವರಿಸುತ್ತದೆ, ನಿಮ್ಮ ಉತ್ಕೃಷ್ಟ ತೂಕಕ್ಕೆ ಕುಗ್ಗಿದ ಶಕ್ತಿಹೀನ ಮೆತ್ತೆಯು ನಿಮ್ಮ ದೇಹದ ಆಕಾರವನ್ನೇ ಹೊಂದಿ ಹಿತ ನೀಡುತ್ತದೆ. ಹಾಸಿಗೆಯೇನಾದರೂ ಸ್ಪ್ರಿಂಗಿನದ್ದಾದರಂತೂ, ಸ್ಪ್ರಿಂಗುಗಳು ಮಧುರವಾಗಿ ನರಳುತ್ತವೆ!

ಇತ್ತ ಉನ್ನತ ಮಟ್ಟದ ಜೀವನ ಶೈಲಿಯನ್ನು ಅನುಸರಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿರುವವರ ಪಾಡನ್ನಾದರೂ ನೋಡಿ. ಪಾಪ, ತೆಳ್ಳಗಿನ, ನೀಟಾದ, ಅಚ್ಚುಕಟ್ಟಾಗಿ ಎಳೆದು ಹೊಲೆದ , ವಿದೇಶಿ ಹಾಸಿಗೆಯಲ್ಲಿ (ಎಲ್ಲಿ ಕೊಳೆಯಾಗುತ್ತದೊ, ಹಾಳಾಗುತ್ತದೊ ಎಂಬ ಭಯದಿಂದ) ಸಂಕೋಚದಿಂದ ಮಲಗಿರುತ್ತಾರೆ!

ಹೋಟೆಲುಗಳು ಕೂಡ ಈ ಸೂತ್ರಕ್ಕೆ ಹೊರತಾಗಿಲ್ಲ. ಎಂದೇ ಈ ಉಪಸೂತ್ರ: "ಹೋಟೆಲ್‌ಗಳು ದುಬಾರಿಯಿದ್ದಷ್ಟೂ ಅಲ್ಲಿಯ ಕಂರ್ಚ ಮಂಚಗಳು ಕಡಿಮೆ ಸುಖಕರ"

ಎರಡನೆಯ ಸೂತ್ರ : "ಸಣ್ಣ ಮಕ್ಕಳು ರಾತ್ರಿವೇಳೆಯಲ್ಲಿ ಎಂದೂ ಮಲಗುವುದಿಲ್ಲ." ಅಳುತ್ತಲೇ ಇರುತ್ತವೆ. ಅವು ಕಣ್ಣು ಮುಚ್ಚುವುದು ನಿಮಗೆ ಸುಳ್ಳು ಭರವಸೆಯನ್ನು ನೀಡುವುದಕ್ಕೆ ಮಾತ್ರ.

ಮೂರನೆಯ ಸೂತ್ರ : "ಕಾಲು ಚೀಲಗಳು ವಿಕಾರವಿದ್ದಷ್ಟು, ಅವು ಕಳೆದುಹೋಗುವ ಸಂಭವತೆ ಕಡಿಮೆ." ನನ್ನ ಜೀವನದ

ನವೆಂಬರ ೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ರಿಚರ್ಡ್ ಗ್ಲೋವರ್‌ರವರ "ಎಯ್ಟ್ ಲ್ಯಾಸ್ ಫಾರ್ ಲಿವಿಂಗ್" ಲೇಖನದ ಕನ್ನಡ ಅನುವಾದ

ಅರ್ಧ ಭಾಗವನ್ನು ಸುಂದರವಾದ ಹತ್ತಿಯ ಕಾಲುಚೀಲಗಳನ್ನು ಖರೀದಿಸುವುದರಲ್ಲಿ ಕಳೆಯುತ್ತೇನೆ. ಕೊಂಚ ಕೆಲವೇ ವಾರಗಳಲ್ಲಿ ಎಡಗಾಲಿನ ಕಾಲುಚೀಲಗಳು ಮಾತ್ರ ಇರುತ್ತವೆ. ಬಲಗಾಲಿನವು ಮಾಯ!

ಆದರೆ ಈ ಕುತೂಹಲಕಾರಿ ಸಂಗತಿಯನ್ನು ಗಮನಿಸಿ: ಏಕರೂಪವಾದ ನೈಲಾನ್ ಕಾಲುಚೀಲಗಳು ಕಳೆದು ಹೋಗುವುದೇ ಇಲ್ಲ. ೧೯೭೭ ರಲ್ಲಿ - ಆತುರದ ನಿರ್ಧಾರದಿಂದಲೋ ಏನೋ - ಬಣ್ಣ ಬಣ್ಣದ ಪಟ್ಟೆಗಳುಳ್ಳ ನೈಲಾನ್ ಕಾಲುಚೀಲಗಳನ್ನು ಕೊಂಡಿದ್ದೆ ಎಂದಿಟ್ಟುಕೊಳ್ಳಿ. ಅವು ಇಪ್ಪತ್ತು ವರ್ಷಗಳಾದರೂ ಹಾಗೆಯೇ ಇರುತ್ತವೆ. ನನ್ನನ್ನು ಉಪಯೋಗಿಸು, ಬೇರೆ ಜೋಡಿಗಳಲ್ಲಿ ಬಲಗಾಲಿನವು ಇಲ್ಲವೇ ಇಲ್ಲ - ಎಂದು ಕಪಾಟಿನಿಂದ ಇಣುಕಿ ಅಣಕಿಸುತ್ತವೆ.

ನಾಲ್ಕನೆಯ ಸೂತ್ರ : "ಮನೆಯಲ್ಲಿ ನಡೆಯುವ ಅತ್ಯಂತ ಉಗ್ರ ಚರ್ಚೆಗಳು ಗೃಹಕೃತ್ಯಗಳಿಗಾಗಲೀ ಹಣಕ್ಕಾಗಲೀ ಸಂಬಂಧಪಟ್ಟದ್ದಾಗಿರುವುದಿಲ್ಲ." ಹಾಸಿಗೆಯಲ್ಲಿ ಯಾರು ಹೆಚ್ಚು ಭಾಗವನ್ನು ಅನ್ಯಾಯವಾಗಿ ಕಸಿದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಆಗಿರುತ್ತವೆ.

ಐದನೆಯ ಸೂತ್ರ : "ದಿಢೀರ್ ಆಹಾರಗಳು ನಿರಂತರ ಭರವಸೆಯನ್ನು ನೀಡುತ್ತವೆ". ದಿಢೀರ್ ದೋಸೆ, ದಿಢೀರ್ ಸಾಂಬಾರ್, ದಿಢೀರ್ ಜಾಮೂನ್, ದಿಢೀರ್ ಪಲಾವ್- ಒಂದೇ, ಎರಡೇ. "ಕೇವಲ ನೀರನ್ನು ಬೆರೆಸಿ! ಹೋಟೆಲ್‌ನಲ್ಲಿ ಸಿಕ್ಕುವ ತಿಂಡಿಗಳು ಮನೆಯಲ್ಲಿಯೇ ತಯಾರ್! ಎಷ್ಟೊಂದು ಉತ್ಪನ್ನಗಳು, ಎಷ್ಟೊಂದು ಭರವಸೆ. ಅಷ್ಟೇ ಕಹಿ ನಿರಾಸೆಗಳು.

ಆದರೆ ಅವನ್ನೆಲ್ಲ ನಾವು ಎಷ್ಟು ಬೇಗ ಮರೆತು ಬಿಡುತ್ತೇವೆ! ಅಂಗಡಿಗೆ ಹೋದಾಗ ನನ್ನ ಕಾಲುಗಳು ದಿಢೀರ್ ಆಹಾರದ ಕಪಾಟಿನ ಕಡೆಗೇ ಹೋಗುತ್ತವೆ. ದಿಢೀರ್ ಇಡ್ಲಿ, ಎರಡು ನಿಮಿಷದಲ್ಲೇ ತಯಾರಾಗುವ ಸಂಪೂರ್ಣ ಊಟ. ಇವು ಎಷ್ಟು ಕೆಟ್ಟದ್ದಾಗಿರಬಹುದು ಎಂದುಕೊಂಡ ಎರಡೇ ತಾಸುಗಳ ಬಳಿಕ ತಿಳಿಯುತ್ತದೆ : ನಿಜಕ್ಕೂ ಬಹಳ ಕೆಟ್ಟದಾಗಿದೆ ಎಂದು! ಆದರೇನು ? ನಾನು, ನನ್ನಾಕೆ ಮುಂದಿನ ವಾರ ಅಂಗಡಿಗೆ ಹೋದಾಗ ಮತ್ತೆ ದಿಢೀರ್ ಆಹಾರಗಳ ಕಪಾಟಿನೆಡೆಗೆ ಹೋಗುತ್ತೇವೆ. ಸಿದ್ಧ (ದಿಢೀರ್!) ರೇಜನ್ನು ತಿನ್ನುವುದಕ್ಕೆ ಮುನ್ನ ಇದ್ದ ಆಸೆ ಮತ್ತು ಈವರೆಗೆ ನಾವು ಅನುಭವಿಸಿದ್ದರೂ ಮುಗ್ಧರು.

ಆರನೆಯ ಸೂತ್ರ : "ಗಂಡಸರು ಯಾವುದೇ ಪಾಕ ವಿಧಾನವನ್ನು ಕೊನೆಯ ವರೆಗೂ ಓದಲು ಅನುವಂಶೀಯವಾಗಿ ಅಶಕ್ತರು."

ಪುರುಷನೊಬ್ಬನಿಂದ ಆಹ್ವಾನಿತರಾಗಿ ಊಟಕ್ಕೆ ಬಂದ ಅತಿಥಿಗಳು ರಾತ್ರಿ ಸುಮಾರು ೮ ಗಂಟೆಯ ಸಮಯಕ್ಕೆ ಅಡುಗೆ ಮನೆಯಿಂದ ಕೋಪೋದ್ರಿಕ್ತ ಚೀತ್ಕಾರವನ್ನು ಏಕೆ ಕೇಳುತ್ತಾರೆ? ಎಂಬುದನ್ನು ಈ ಸೂತ್ರ ವಿವರಿಸುತ್ತದೆ. ಆಹ್ವಾನಿತ ಅತಿಥಿಗಳಿಗೆ ವಿಶೇಷ ತಿನಿಸನ್ನು ತಯಾರಿಸಲು, ಅಡುಗೆ ಪುಸ್ತಕದ ಪಾಕ ವಿಧಾನವನ್ನು ಓದುತ್ತಾ, ಅಡುಗೆ ಮಾಡಲು ಹೊರಟು, ಪಾಕವಿಧಾನದ ಕೊನೆಯ ಹಂತದ ವಿವರಣೆಯನ್ನು ತಲುಪಿದಾಗ, ಆ ಬಡಪಾಯಿ ಗಂಡಿಗೆ ಕಾಣಿಸುವುದು : "ಎಲ್ಲವನ್ನೂ ಬೆರೆಸಿ, ಸಣ್ಣ ಉರಿಯಲ್ಲಿ ಆರು ಗಂಟೆಗಳ ಕಾಲ ಬೇಯಿಸಿ". ಅತಿಥಿಗಳು ಚೀತ್ಕಾರವನ್ನು ಕೇಳುವುದು ಇದೇ ಗಳಿಗೆಯಲ್ಲಿ.

ಏಳನೆಯ ಸೂತ್ರ : "ಅಡುಗೆ ಪುಸ್ತಕಗಳು ಯಾವಾಗಲೂ ತಿನಿಸುಗಳನ್ನು ತಯಾರಿಸಲು ನಿಜವಾಗಿಯೂ ಬೇಕಾಗುವುದಕ್ಕಿಂತ ಕಡಿಮೆ

ಸಮಯವನ್ನೇ ನಿಗದಿಸುತ್ತದೆ. ಅಲ್ಲದೆ, ಹತ್ತು ಜನಕ್ಕೆ ಬಡಿಸುವುದು- ಎಂದು ಕೊಟ್ಟಿರುವ ಪಾಕ ತೆಳ್ಳಗಿರುವ ಇಬ್ಬರು ಭಕ್ಷಕರಿಗೂ ಸಾಲುವುದಿಲ್ಲ. ಅಡುಗೆ ಪುಸ್ತಕಗಳನ್ನು ಬರೆಯುವವರು ಪ್ರಾಯಶಃ ದೋಷಪೂರಿತ ಕುಕ್ಕರ್‌ಗಳನ್ನು ಹೊಂದಿರುವ ತೆಳ್ಳಗಿನ ವ್ಯಕ್ತಿಗಳಿರಬೇಕು. ಕುಕ್ಕರ್ ತಯಾರಕರು ಇದರ ಕಡೆ ಗಮನ ಹರಿಸಬೇಕು.

ಎಂಟನೆಯ ಮತ್ತು ಕೊನೆಯ ಸೂತ್ರ : ''ಅಡುಗೆ ಮನೆಯ ಬಚ್ಚಲಲ್ಲಿ ಚಮಚ ಯಾ ಸೌಟನ್ನು ಎಲ್ಲೇ ಇಟ್ಟರೂ ಅದು ತನ್ನಂತೆ ತಾನೇ ಸರಿಯಾಗಿ ನಲ್ಲಿಯ ಕೆಳಗೆ ಬಂದು ಕುಳಿತು ಕೊಳ್ಳುತ್ತದೆ''.

ಇದು ಹೀಗೇಕೆಂದು ಯಾರು ತಾನೇ ಹೇಳಬಲ್ಲರು? ನೀವು ನಲ್ಲಿಯನ್ನು ಜೋರಾಗಿ ತಿರುಗಿಸುವುದೇ ತಡ, ಅದರ ಆಚೆ ಆಸುಪಾಸಿನಲ್ಲಿರುವ ಯಾವುದೇ ಚಮಚ/ಸೌಟು ಕಡ್ಡಾಯವಾಗಿ ನಲ್ಲಿಯ ಕೆಳಗೆ ಆಸೀನವಾಗಿ ರುತ್ತದೆ. ಇದರ ಪರಿಣಾಮ: ಪಾತ್ರೆ ತೊಳೆಯುತ್ತಿರುವವರ ಮೇಲೆ ನೀರಿನ ಸಾಮೂಹಿಕವಾದ ತುಂತುರು!

ಸೂತ್ರಗಳ ಈ ಪಟ್ಟಿಯು ಅಪೂರ್ಣ ವೆಂದು ವಿಜ್ಞಾನಿಗಳು ದೃಢಪಡಿಸಬಲ್ಲರು. ನೀವು ಮುಂದಿನ ಬಾರಿ ಊಟಕ್ಕೆ ಕುಳಿತಾಗ ಎಚ್ಚರ ದಿಂದಿರಿ. ನಿಮ್ಮ ಸಲಹೆಗಳಿಗಾಗಿ ನಾವು ಕಾಯುತ್ತಿರುತ್ತೇವೆ.

ಪಾಕವನು ಬಲ್ಲಾತ ನೆಚ್ಚುವನು ಪುಸ್ತಕವ
ನಾಕವನೆ ಸೃಷ್ಟಿಸುವ, ಬಲ್ಲದವ ಪುಸ್ತಕವ
-ನೀಕ್ಷಿಸುತ ಗೈಯುವನು ಪಾತಕವ! ಪುವಯಾವ-
ಲೋಕನವೆ ಗುಣಪಾಕಮೂಲ ತಿಳಿಅತಿ ಸೂನು



ಮಾನಸಿಕ ಆಘಾತಕ್ಕೆ ನಷ್ಟ ಪರಿಹಾರ

ಎ.ಪಿ. ಗೌರೀಶಂಕರ
"ಶ್ರೀ ಶೈಲ" ಪಿಂಟೋಲೀನ್ ಕ್ರಾಸ್
ಕರಂಗಲ್ಪಾಡಿ
ಮಂಗಳೂರು ೫೭೫ ೦೦೩

ಇಂಗ್ಲಿಷ್ ಭಾಷೆಯ "ನರ್ವಸ್ ಶಾಕ್" ಪದದ ಬದಲಿಯಾಗಿ "ಮಾನಸಿಕ ಆಘಾತ" ಪದವನ್ನು ಈ ಲೇಖನದಲ್ಲಿ ಬಳಸಲಾಗಿದೆ. ನರ್ವಸ್ ಶಾಕ್‌ನ ಆಘಾತ, ಬರಿಯ ಮನಸ್ಸಿಗೆ ಸೀಮಿತವಾಗಿಲ್ಲದೆ, ನರಮಂಡಲ ವ್ಯಾಪ್ತಿಯುಳ್ಳದ್ದು. ಇಂಗ್ಲೆಂಡಿನ ರೂಢಿ ಕಾನೂನಿನ (ಕಾಮನ್ ಲಾ) ಟಾರ್ಟ್ ವಿಭಾಗದಲ್ಲಿ ಮಾನಸಿಕ ಆಘಾತಕ್ಕೆ ಕಾರಣನಾದ ತಪ್ಪಿತಸ್ಥ ನಷ್ಟಪರಿಹಾರ ನೀಡತಕ್ಕದ್ದೆಂಬುದು ಸಾಧಾರಣ ನೂರು ವರ್ಷಗಳಿಗಿಂತಲೂ ಹಿಂದೆ ಇತ್ಯರ್ಥವಾಗಿದೆ. ಭಾರತದಲ್ಲಿ ಟಾರ್ಟ್ ವಿಭಾಗದ ಕಾನೂನು ಬಹಳ ನಿಧಾನವಾಗಿ ಬೆಳೆದು ಬಂದಿದೆ. ತಪ್ಪು ಅಥವಾ ಅಪರಾಧ ಮಾಡಿದಾಗ ನಷ್ಟ ಹೊಂದಿದವನಿಗೆ ಪರಿಹಾರ ಕೊಡತಕ್ಕದ್ದೆಂಬ ಮೂಲಭೂತ ತತ್ವ ಸಾಮಾನ್ಯವಾಗಿ ಭಾರತದಲ್ಲೂ ಬಹಳ ಪ್ರಾಚೀನ ಕಾಲದಿಂದಲೂ ಪ್ರಚಲಿತ ವಿದ್ದರೂ, ಇಂಗ್ಲೆಂಡಿನ ಟಾರ್ಟ್‌ನ ತಾಂತ್ರಿಕ ರೂಪ ತಳೆದು ಕಾನೂನಿನ ವಿಶಿಷ್ಟ ವಿಭಾಗವಾಗಿ ಬೆಳೆದು ಬಂದುದು ಬ್ರಿಟಿಷ್ ವಸಾಹತು ತಳವೂರಿದ ಅನಂತರವೇ. ಮಾನಸಿಕ ಆಘಾತ ಟಾರ್ಟ್-ಮೂಲತಃ ಬ್ರಿಟಿಷ್ ವಸಾಹತು ತಳವೂರಿದ ಅನಂತರದ ಕಾಲದಲ್ಲಿ ಮಾನಸಿಕ ಆಘಾತವನ್ನೂ ಒಂದು ಅಪರಾಧವೆಂದು ಪರಿಗಣಿಸಿ ನಷ್ಟ ಪರಿಹಾರ ನೀಡುವ ಕಾನೂನು ನಿಯಮ ಭಾರತದಲ್ಲಿ ರೂಢಿಗೆ ಬಂದಿದೆ.

ಇಂಗ್ಲೆಂಡಿನ ರೂಢಿ ಕಾನೂನು ಕೇವಲ ದುಃಖ, ಮಾನಸಿಕ ಕ್ಷೋಭೆ, ಉದ್ವೇಗ ಅಥವಾ ಅವುಗಳ ಪರಿಣಾಮವಾದ ಮಾನಸಿಕ ಖಿನ್ನತೆ- ಇವುಗಳಿಗೆ ನಷ್ಟ ಪರಿಹಾರ ನೀಡುವುದಿಲ್ಲ. ಆಘಾತ ಮನಸ್ಸಿನ ಎಲ್ಲೆ ಮೀರಿ ನರಮಂಡಲ ವ್ಯಾಪ್ತಿಯಾದಾಗ (ನರ್ವಸ್ ಶಾಕ್) ಮಾತ್ರ ಪರಿಹಾರ ಪ್ರಾಪ್ತವಾಗುವುದು. ಆಘಾತ ನರ ಮಂಡಲ ವ್ಯಾಪಿಸಿದಾಗ ಪರಿಣಾಮವಾಗಿ ದೈಹಿಕ ಅಸ್ವಾಸ್ಥ್ಯ ಉಂಟಾಗುತ್ತದೆ. ದೈಹಿಕ ಕಾಯಿಲೆಯ ಆಧಾರದಲ್ಲಿ ನಷ್ಟ ಪರಿಹಾರದ ಮೌಲ್ಯ ನಿರ್ಣಯ ವಾಗುತ್ತದೆ. ಈ ನಿಯಮದಂತೆ ನಷ್ಟ ಪರಿಹಾರದ ಅರ್ಹತೆಗೆ, ಅಪರಾಧಿ (ಪ್ರತಿವಾದಿ) ಯ ಅಲಕ್ಷ್ಯ, ಅಜಾಗ್ರತೆ, ಉದಾಸೀನತೆಯಿಂದ ಅವಗಡ ಸಂಭವಿಸತಕ್ಕದ್ದು; ಅವಗಡದ ಪರಿಣಾಮವಾಗಿ ವಾದಿ ಮಾನಸಿಕ ಆಘಾತ ಅನುಭವಿಸಬೇಕು; ಮಾನಸಿಕ ಆಘಾತ ದೈಹಿಕ ಕಾಯಿಲೆಯಾಗಿ ವ್ಯಕ್ತವಾಗಬೇಕು. ಈ ಮೂರು ಹಂತಗಳು ಸರಿಯಾಗಿ ಕಾರ್ಯ-ಕಾರಣ ಸಂಬಂಧವುಳ್ಳದಾದ್ದರೆ ನಷ್ಟ ಪರಿಹಾರ ಲಭ್ಯ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರ, ಅವಗಡದಲ್ಲಿ ಅಥವಾ ಘಟನೆಯಲ್ಲಿ ವಾದಿ ದೈಹಿಕ ಪೆಟ್ಟು, ಹೊಡೆತ, ನೋವು ಅನುಭವಿಸಬೇಕಿಲ್ಲ-ದೈಹಿಕ ಸಂಪರ್ಕವೇ ಅಗತ್ಯವಿಲ್ಲ. ಅವಗಡದ ದೃಶ್ಯ ನೋಡಿ, ಅಥವಾ ಕಠೋರ ಶಬ್ದ ಕೇಳಿ ಅಥವಾ ಅವಗಡದ ವಾರ್ತೆ ಪರೋಕ್ಷವಾಗಿ ಕೇಳಿ, ವಾದಿ ಮಾನಸಿಕ ಆಘಾತಕ್ಕೊಳಗಾದರೆ-ನಷ್ಟ ಪರಿಹಾರಕ್ಕೆ ಅರ್ಹನಾಗುತ್ತಾನೆ. ಅದರಿಂದ ಪರಿಣಮಿಸುವ ದೈಹಿಕ ಅಸ್ವಾಸ್ಥ್ಯ ನಷ್ಟ ಪರಿಹಾರ ಮೌಲ್ಯ ನಿರ್ಣಯಿಸಲು ಸಹಾಯಕ ಮಾನ.

ಗರ್ಭಿಣಿಯ ಮಾನಸಿಕ ಆಘಾತ : ಗರ್ಭಿಣಿಯೊಬ್ಬಳು ತನ್ನ ಗಂಡನ ಶರಾಬು ಅಂಗಡಿಯೊಳಗೆ ಪಾನ ತಯಾರಿಸುವ ಬಾರ್‌ನ ಹಿಂದೆ ನಿಂತಿದ್ದಳು. ನೆರೆಯ ಗೃಹಸ್ಥನ ಸೇವಕರು ಕುದುರೆಗಾಡಿಯನ್ನು ಅಜಾಗ್ರತೆಯಲ್ಲಿ ಬಹಳ ವೇಗವಾಗಿ ಚಲಾಯಿಸುತ್ತಾ ಬಂದರು. ಅವರ ಅಜಾಗ್ರತೆಯಿಂದ ಕುದುರೆಗಳ ಮೇಲೆ ನಿಯಂತ್ರಣ ತಪ್ಪಿ, ಗಾಡಿ ಸಹಿತ ಅಂಗಡಿಯೊಳಗೆ ಪ್ರವೇಶಿಸಿ ಬಹಳ ಕಠೋರ ಶಬ್ದವಾಯ್ತು. ಅನಿರೀಕ್ಷಿತವಾಗಿ ಕುದುರೆಗಳು ಗಾಡಿ ಸಹಿತ ಅಂಗಡಿಯೊಳಗೆ ನೆಗೆದ ದೃಶ್ಯದಿಂದ ಗರ್ಭಿಣಿಗೆ ವಿಪರೀತ ಭಯವುಂಟಾಗಿ ಮಾನಸಿಕ ಆಘಾತವಾಯ್ತು. ಯಾರಿಗೂ ದೈಹಿಕ ಪೆಟ್ಟು, ಗಾಯ, ನೋವುಗಳಾಗಲಿಲ್ಲ, ಸೊತ್ತು ನಾಶವಾಗಲಿಲ್ಲ. ಕೇವಲ ದೃಶ್ಯ ಮತ್ತು ಕಠೋರ ಶಬ್ದಗಳು ಮಾನಸಿಕ ಆಘಾತ ಉಂಟುಮಾಡಿದುವು. ಇದರ ಪರಿಣಾಮವಾಗಿ ಅವಳು ತೀವ್ರ ಅಸ್ವಸ್ಥಳಾಗಿ, ಅಕಾಲದಲ್ಲಿ ಪೂರ್ಣ ಬೆಳೆಯದ ಶಿಶುವಿಗೆ ಜನ್ಮವಿತ್ತಳು. ಮುಂದೆ ಆ ಶಿಶು ಬೆಳೆದು ಬುದ್ಧಿಮಾಂದ್ಯ ಮಗುವಾಯಿತು. ವೈದ್ಯಕೀಯ ತಜ್ಞರ ಅಭಿಪ್ರಾಯದಂತೆ ನರ ಮಂಡಲಕ್ಕಾದ ಆಘಾತ ಕಾಯಿಲೆಯಾಗಿ ಪರಿಣಮಿಸುವುದು ಕೇವಲ ಸರ್ವೇಸಾಮಾನ್ಯ. ಸೇವಕರ ಅಲಕ್ಷ್ಯದಿಂದ ಕುದುರೆಗಳು ಅಂಗಡಿಯೊಳಗೆ ಪ್ರವೇಶಿಸಿ ಅವಗಡ ಸಂಭವಿಸಿತು; ಅವಗಡದ ದೃಶ್ಯದಿಂದ ಆಕೆಗೆ ಮಾನಸಿಕ ಆಘಾತವಾಯ್ತು; ಮಾನಸಿಕ ಆಘಾತ ಕಾಯಿಲೆಯಾಗಿ ಪರಿಣಮಿಸಿ, ಅಪೂರ್ಣ ಬೆಳೆದ ಶಿಶು ಜನಿಸಿ, ಕೊನೆಯಲ್ಲಿ ಬುದ್ಧಿಮಾಂದ್ಯ ಮಗು ಬೆಳೆದು ಬಂತು. ಕಾರಣ-ಕಾರ್ಯದ ಕೊಂಡಿಗಳು ಒಂದಕ್ಕೊಂದು ಸರಿಯಾಗಿ ಹೊಂದಿ ನೇರ ಸಂಕೋಲೆಯಾಗಿ ಪರಿಣಮಿಸಿದೆ. ಆದುದರಿಂದ ಆಕೆ ನಷ್ಟ ಪರಿಹಾರಕ್ಕೆ ಅರ್ಹಳೆಂದೂ, ಅಜಾಗರೂಕ ಸೇವಕರ ಯಜಮಾನ ನಷ್ಟ ಪರಿಹಾರ ತೆರಬೇಕೆಂದೂ, ಇಂಗ್ಲೆಂಡಿನ ಉಚ್ಚನ್ಯಾಯಾಲಯ ಅಧಿಕೃತವಾಗಿ ಘೋಷಿಸಿತು.

ಪರೋಕ್ಷ ಕಾರಣ : ಇನ್ನೊಂದು ಘಟನೆಯಲ್ಲಿ ವಾದಿ ಪ್ರತ್ಯಕ್ಷವಾಗಿ ಯಾವುದೇ ದೃಶ್ಯ ಅವಲೋಕಿಸಲಿಲ್ಲ, ಅವಗಡದ ಕಠೋರ ಶಬ್ದ ಕೇಳಲಿಲ್ಲ. ಪರೋಕ್ಷ ವರ್ಣನೆ ಮತ್ತು ಭಯ ಮಾನಸಿಕ ಆಘಾತಕ್ಕೆ ಕಾರಣವಾಯ್ತು. ಪ್ರತಿವಾದಿಯ ಸೇವಕರು ಲಾರಿಯೊಂದನ್ನು ರಸ್ತೆಯ ಏರುತುದಿಯಲ್ಲಿ ಎಂಜಿನ್ ಬಂದ್ ಮಾಡದೆ, ಚಾಲೂ ಸ್ಥಿತಿಯಲ್ಲಿ ನಿಲ್ಲಿಸಿ ಎತ್ತಲೋ ಹೋಗಿದ್ದರು. ಲಾರಿಯ ನಿಯಂತ್ರಣಕ್ಕೆ ಯಾರು ಇರಲಿಲ್ಲ. ಇದೊಂದು ಅತ್ಯಂತ ಅಜಾಗರೂಕ ಹಾಗೂ ಅಲಕ್ಷ್ಯದ ತಪ್ಪು ಕೆಲಸವೆಂಬುದು ನಿರ್ವಿವಾದ. ಅದೇ ಸಮಯ, ಅದೇ ರಸ್ತೆಯ ಕೆಳತುದಿಯಲ್ಲಿ, ರಸ್ತೆಯ ತಿರುವಿಗಿಂತ ಸ್ವಲ್ಪ ಹಿಂದೆ ತನ್ನ ಚಿಕ್ಕ ಎರಡು ಮಕ್ಕಳೊಂದಿಗೆ ಹೆಂಗಸೊಬ್ಬಳು ನಡೆದು ಬರುತ್ತಿದ್ದಳು. ಮಕ್ಕಳನ್ನು ರಸ್ತೆಯ ತಿರುವಿನ ಹಿಂದೆಯೇ ಬಿಟ್ಟು ತಾನೊಬ್ಬಳೇ ರಸ್ತೆಯಲ್ಲಿ ಏರುತ್ತಾ ಮುಂದೆ ನಡೆದು ಹೋದಳು. ಹೆಂಗಸು ಇನ್ನೂ ಸ್ವಲ್ಪ ದೂರದಲ್ಲಿದ್ದಾಗ ನಿಯಂತ್ರಕರಿಲ್ಲದ, ಚಾಲೂ ಸ್ಥಿತಿಯಲ್ಲಿದ್ದ ಲಾರಿ ಇಳಿಜಾರಿನಲ್ಲಿ ವೇಗ ವರ್ಧಿಸುತ್ತಾ ರಭಸದಲ್ಲಿ ಮುನ್ನುಗ್ಗಿ ಬಂತು. ಅವಳು ಗಾಬರಿಗೊಂಡಳು. ಭಯಪಟ್ಟಳು; ಲಾರಿಯಿಂದ ತಪ್ಪಿಸಿಕೊಂಡಳು. ಲಾರಿ ವೇಗವಾಗಿ ಇಳಿಜಾರು ರಸ್ತೆಯಲ್ಲಿ ರಭಸದಲ್ಲಿ ಮುಂದುವರಿದು ತಿರುವಿನಲ್ಲಿ ಕಾಣದಾಯ್ತು. ಆಗ ತಾನು ತಿರುವಿನ ಹಿಂದೆ ಬಿಟ್ಟು ಬಂದ ಎರಡು ಮಕ್ಕಳ ಸುರಕ್ಷತೆಯ ಕುರಿತು ತೀವ್ರ ದಿಗಿಲುಂಟಾಯ್ತು. ಅಷ್ಟರಲ್ಲಿ ರಸ್ತೆಯ ಪಕ್ಕದಲ್ಲಿದ್ದವರು ಯಾರೋ, ತಿರುವಿನ ಹಿಂದೆ ಸಂಭವಿಸಿದ ಲಾರಿ ಅವಗಡದಲ್ಲಿ

ಮಗುವೊಂದಕ್ಕೆ ದೈಹಿಕ ಹಾನಿಯಾಗಿದೆ ಎಂದು ಉದ್ವೇಗದಲ್ಲಿ ತಿಳಿಸಿದರು. ಅವರು ನೀಡಿದ ಮಗುವಿನ ಚಹರೆ ವಿವರಣೆಗಳಿಂದ ಅದು ತನ್ನದೇ ಮಗುವೆಂದು ದೃಢ ನಂಬಿ ಭಯಪಟ್ಟು ಮಾನಸಿಕ ಅಘಾತ ಹೊಂದಿದಳು. ಅನಂತರ ದಿನಗಳಲ್ಲಿ ಅವಳು ದೈಹಿಕ ಕಾಯಿಲೆ ಬಿದ್ದು, ಹಾಸಿಗೆ ಹಿಡಿದು ಕೊನೆಗೆ ಮೃತಪಟ್ಟಳು. ವೈದ್ಯಕೀಯ ತಜ್ಞರ ಅಭಿಪ್ರಾಯದಂತೆ ಅವಳಿಗಾದ ಮಾನಸಿಕ ಅಘಾತವೇ ದೈಹಿಕ ಕಾಯಿಲೆಗೆ ಮತ್ತು ಮರಣಕ್ಕೆ ಕಾರಣ. ಸೇವಕರ ಅಜಾಗ್ರತೆಯಿಂದ ಪ್ರಾರಂಭವಾದ ತಪ್ಪು ಕೆಲಸಗಳ ಮಾಲೆಯ ಕೊನೆಯ ಪರಿಣಾಮ ಅವಳ ಮರಣ. ಸೇವಕರ ಅಜಾಗ್ರತೆಗೂ ಅವಳ ಮರಣಕ್ಕೂ ನೇರ ಸಂಬಂಧವಿಲ್ಲವೆಂಬ ವಾದವನ್ನು ಉಚ್ಚನ್ಯಾಯಾಲಯ ತಿರಸ್ಕರಿಸಿತು. ಕಾರಣ-ಪರಿಣಾಮವಾದದ ತಾತ್ವಿಕ ನೆಲೆಗಟ್ಟು ಈ ತೀರ್ಪಿನಲ್ಲಿ ಸ್ಥಿರಗೊಂಡಿತು. ಹೆಂಗಸಿನ ಗಂಡನಿಗೆ ಲಾರಿ ಮೂಲಕ ನಷ್ಟ ಪರಿಹಾರ ನೀಡುವಂತಾಯ್ತು. ಅಲಕ್ಷ್ಯದ ತಪ್ಪು ಕೆಲಸದ ಪರಿಣಾಮ ಪರೋಕ್ಷವಾಗಿ ಮಾನಸಿಕ ಅಘಾತವಾದರೂ, ನಷ್ಟ ಪರಿಹಾರ ನೀಡಲು ತಪ್ಪಿತಸ್ಥರು ಬದ್ಧರೆಂಬುದು ಇದರಿಂದ ಸ್ಥಿರವಾಯಿತು.

ಕಾರ್ಯ ರೂಪದ ಹಾಸ್ಯ ನಷ್ಟ ಪರಿಹಾರಕ್ಕೆ ಕಾರಣ : ಮಾನಸಿಕ ಅಘಾತಕ್ಕಾಗಿ ನಷ್ಟ ಪರಿಹಾರ ಕೇಳುವ ಟಾರ್ಟ್‌ನ ಶೈಶವದ ಬೆಳವಣಿಗೆ ಕಾಲದಲ್ಲಿ ಬಹಳ ತಮಾಷೆಯ ಘಟನೆಯೊಂದಾಯ್ತು. ಇದರಿಂದ ಈ ಟಾರ್ಟ್‌ನ ವ್ಯಾಪ್ತಿ ವಿಸ್ತರಿಸಿತು. ಒಂದು ಶುಭ ಪ್ರಾತಃಕಾಲ ಹಾಸ್ಯಪ್ರಜ್ಞೆ ಅತಿರೇಕಿಯೊಬ್ಬನಿಗೆ ಪಕ್ಕದ ಮನೆಯ ಹೆಂಗಸನ್ನು ಗೇಲಿ ಮಾಡುವ ಯೋಚನೆಯಾಯ್ತು. ಒಡನೆಯೇ ಹಾಸ್ಯವನ್ನು ಕಾರ್ಯರೂಪಕ್ಕೆ ಇಳಿಸಿದನು. ದೂರದೂರಿನಲ್ಲಿದ್ದ ಅವಳ ಗಂಡನು ದುರ್ಘಟನೆಯೊಂದರಲ್ಲಿ ಸಿಲುಕಿ ಎರಡೂ ಕಾಲುಗಳು ಮುರಿದು ಹೋದುವು ಎಂಬ ಸುಳ್ಳನ್ನು ಭಾವಾವೇಶದಲ್ಲಿ ಅವಳ ಮುಂದೆ ಚಿತ್ರಿಸಿದನು. ಸುಳ್ಳು ಸುದ್ದಿಯನ್ನು ನಿಜವೆಂದು ನಂಬಿ ಆಕೆ ತತ್ತರಿಸಿದಳು. ಆಕೆಗೆ ತೀವ್ರ ಮಾನಸಿಕ ಅಘಾತವಾಗಿ ಮರಣಾಂತಿಕ ಅಸ್ವಸ್ಥಳಾದಳು. ತಲೆಗೂದಲೆಲ್ಲಾ ನರೆತು ಬೆಳ್ಳಗಾಯ್ತು. ದೀರ್ಘಕಾಲದ ಔಷಧೋಪಚಾರಕ್ಕಾಗಿ ಬಹಳ ಹಣ ಖರ್ಚು ಮಾಡಬೇಕಾಗಿ ಬಂತು. ಇಲ್ಲಿ ಯಾವುದೇ ದುರ್ಘಟನೆ ನಡೆಯದಿದ್ದರೂ, ಕಾರ್ಯರೂಪದ ಹಾಸ್ಯ ಆಕೆಯ ಮಾನಸಿಕ ಸಮತೋಲ ಕೆಡಿಸಿ, ಅಘಾತವುಂಟು ಮಾಡಿತು. ಹಾಸ್ಯಾತಿರೇಕಿ ನಷ್ಟ ಪರಿಹಾರ ಕೊಡತಕ್ಕದ್ದೆಂದು ನ್ಯಾಯಾಲಯ ತೀರ್ಪು ನೀಡಿ ಮಾನಸಿಕ ಅಘಾತದ ಮೂಲ ತತ್ವದ ನೆಲೆಯನ್ನು ವಿಸ್ತರಿಸಿತು. ಸುಳ್ಳು ಮಾತನ್ನು ಹಾಸ್ಯಕ್ಕಾದರೂ ಹಬ್ಬಿಸಿದರೆ, ಪರಿಣಾಮಕ್ಕೆ ಮೂಲ ಸುಳ್ಳುಗಾರ ಜವಾಬ್ದಾರಿ ಎಂದು ನ್ಯಾಯಾಲಯ ಘೋಷಿಸಿತು.

ಪತ್ತೇದಾರರನ್ನು ಸೋಲಿಸಿದ ಮುಗುದೆ: ತೀವ್ರ ಗದರಿಕೆ ಅಥವಾ ಬೆದರಿಕೆಯಿಂದುಂಟಾಗುವ ಮಾನಸಿಕ ಅಘಾತಕ್ಕೂ ನಷ್ಟ ಪರಿಹಾರ ಕೇಳಬಹುದೆಂದು ೧೯೧೯ರಲ್ಲಿ ಇಂಗ್ಲಿಷ್ ಕೋರ್ಟು ಹೇಳಿದೆ. ಇಬ್ಬರು, ಹಿರಿಯ ಮತ್ತು ಅವನ ಸಹಾಯಕ ಕಿರಿಯ, ಖಾಸಗಿ ಪತ್ತೇದಾರರಿದ್ದರು. ಯಾವುದೋ ಪತ್ತೇದಾರಿಕೆ ಕೆಲಸದಲ್ಲಿ ಅವರಿಗೆ ಅವಶ್ಯವಿದ್ದ ಗುಪ್ತ ಪತ್ರವೊಂದು ಇನ್ನೊಂದು ಕಚೇರಿಯಲ್ಲಿದೆ ಎಂದು ತಿಳಿದು ಬಂತು. ನೇರವಾಗಿ ಕೇಳಿದರೆ ಗುಪ್ತ ಪತ್ರ ಸಿಗಲಾರದು. ಅಲ್ಲದೆ ಅವರ ಕೆಲಸ ಕೆಟ್ಟು ಹೋಗಬಹುದು. ಅದಕ್ಕಾಗಿ ಕಿರಿಯ ಪತ್ತೇದಾರನನ್ನು ಕಳುಹಿಸಿ, ಆ ಕಛೇರಿಯ ಪರಿಚಾರಿಕೆಯನ್ನು ಭೇಟಿಯಾಗಿ ಹಣದ ಆಮಿಷ ತೋರಿಸಿ ಪತ್ರವನ್ನು ಓದಿ ನೋಡಲು

ಅವಕಾಶ ಕಲ್ಪಿಸಲು ಒತ್ತಾಯಿಸಲಾಯಿತು. ಹಣದ ಆಮಿಷಕ್ಕೆ ಪರಿಚಾರಿಕೆ ಮರುಳಾಗಲಿಲ್ಲ. ತಮ್ಮ ಕೆಲಸ ಕೈಗೂಡದೆ ಕೆಟ್ಟು ಹೋಗುತ್ತದಲ್ಲಾ ಎಂಬ ಹೇಚಿನಲ್ಲಿ, ಕಿರಿಯ ಪತ್ತೇದಾರ ಆವಳಿಗೆ ಬೆದರಿಕೆಯೊಡ್ಡಿ ಗದರಿಸಿದ. ಗುಪ್ತ ಪತ್ರವನ್ನು ಓದಿ ನೋಡಲು ಅವಕಾಶ ಕೊಡದಿದ್ದುದರ ಪರಿಣಾಮ ಅವಳಿಗೆ ಬಹಳ ಕೆಡುಕಾಗುತ್ತದೆ ಎಂದು ಗದರಿಸಿದ. ಮುಗ್ಧ ಪರಿಚಾರಿಕೆ ಈ ಬೆದರಿಕೆಯನ್ನು ನಿಜವೆಂದು ನಂಬಿ ಭಯಪಟ್ಟು ಮಾನಸಿಕ ಆಘಾತಕ್ಕೊಳಗಾದಳು. ಅನಂತರ ದೈಹಿಕ ಅಸ್ವಾಸ್ಥ್ಯದಲ್ಲಿ ದೀರ್ಘ ಕಾಲ ಹಾಸಿಗೆ ಹಿಡಿಯಬೇಕಾಯ್ತು. ಕಾಯಿಲೆ ಗುಣಹೊಂದಿದ ಅನಂತರ ಮಾನಸಿಕ ಆಘಾತಕ್ಕೆ, ದೈಹಿಕ ಅಸ್ವಾಸ್ಥ್ಯಕ್ಕೆ ನಷ್ಟ ಪರಿಹಾರ ಕೇಳಿ ದಾವೆ ಹೂಡಿದಳು. ಪತ್ತೇದಾರರಿಬ್ಬರೂ ಮುಗ್ಧ ಪರಿಚಾರಿಕೆಗಾದ ನಷ್ಟ ತುಂಬುವಂತಾಯ್ತು. ಸುಳ್ಳು, ಬೆದರಿಕೆ ರೂಪದಲ್ಲಿ ಮಾನಸಿಕ ಆಘಾತಕ್ಕೆ ಕಾರಣವಾದರೆ ಬೆದರಿಸಿದವ ನಷ್ಟ ಭರ್ತಿಮಾಡಬೇಕೆಂಬ ನಿಯಮ ನೆಲೆಗೊಂಡಿತು.

ಭಾರತದಲ್ಲಿ ಮಾನಸಿಕ ಆಘಾತ : ಈ ತನಕ ಇಂಗ್ಲೆಂಡಿನ ನ್ಯಾಯಾಲಯಗಳ ತೀರ್ಪನ್ನು ಮಾತ್ರ ನೋಡಿದ್ದಾಯಿತು. ಸೂಕ್ಷ್ಮ ಮಾನಸಿಕ ಭಾವೋದ್ವೇಗದ ನಾಜೂಕು ಇಂಗ್ಲೀಷ್ ನಾರಿಯರಿಗೆ ಮಾತ್ರ ಮೀಸಲಿಲ್ಲ. ಭಾರತೀಯ ಸ್ತ್ರೀಯರೂ ಪುರಾಣೇತಿಹಾಸಿಕ ಕಾಲದಿಂದಲೂ ಭಾವೋದ್ವೇಗಕ್ಕೆ ಹೆಸರು ಪಡೆದವರು. ಮದರಾಸಿನ ಉಚ್ಚ ನ್ಯಾಯಾಲಯ ೧೯೩೫ರಲ್ಲಿ ಮಾನಸಿಕ ಆಘಾತದ ಕಾರಣಕ್ಕಾಗಿ ಶ್ರೀಮತಿ ಹಲಿಗುವಾ ಎಂಬ ಕೊಚ್ಚಿನ್ ಮೂಲ ಹೆಂಗಸಿಗೆ ನಷ್ಟ ಪರಿಹಾರ ಕೊಡುವಂತೆ ಅವಳು ಪ್ರಯಾಣಿಸುತ್ತಿದ್ದ ಕಾರಿನ ಮಾಲೀಕರು ಹಾಗೂ ಇನ್ಶೂರೆನ್ಸ್ ಕಂಪೆನಿಯ ವಿರೋಧ ನಿರ್ದೇಶನ ನೀಡಿತು. ಶ್ರೀಮತಿ ಹಲಿಗುವಾರವರು ಪ್ರಯಾಣಿಸುತ್ತಿದ್ದ ಬಾಡಿಗೆಯ ಕಾರು ಮದರಾಸು ನಗರದಲ್ಲಿ ಟ್ರಾಮ್ ಒಂದಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ಅವರ ತುಟಿ ಮತ್ತು ಮೂಗಿಗೆ ಸಣ್ಣ ಗಾಯಗಳಾಗಿ ಮಾನಸಿಕ ಆಘಾತಕ್ಕೊಳಗಾದರು. ದೈಹಿಕ ಗಾಯಗಳು ಬಹಳ ಸಣ್ಣದಾಗಿದ್ದು ಕ್ಷುಲ್ಲಕವಾದುವು. ಆದರೆ ಆಘಾತದಿಂದ ಅವರು ಮೂರ್ಛೆ ಹೋದರು. ಎಚ್ಚರ ಬಂದ ಮೇಲೆ ಅವರ ಕೈಗಳ ಮತ್ತು ಬೆರಳುಗಳ ವಶ ತಪ್ಪಿ, ಪಾರ್ಶ್ವವಾಯು ಪೀಡಿತರಾದರು. ಯಾವುದೇ ಬಾಹ್ಯ ದೈಹಿಕ ಗಾಸಿ ಇಲ್ಲವಾದರೂ ಮಾನಸಿಕ ಆಘಾತ ಮಾತ್ರ ತೀವ್ರ ದೈಹಿಕ ಅಸ್ವಾಸ್ಥ್ಯವಾಗಿ ಪರಿಣಮಿಸಿತು. ಬಹು ದೀರ್ಘ ಕಾಲ ಔಷಧೋಪಚಾರ ನಡೆಯಿತು. ಭಾರತದಲ್ಲಿ ಆ ತನಕ ಮಾನಸಿಕ ಆಘಾತವನ್ನು ಟಾರ್ಟ್ ಎಂದು ಪರಿಗಣಿಸಿಲಿಲ್ಲ. ನಾಗಪುರದ ಉಚ್ಚ ನ್ಯಾಯಾಲಯ ೧೯೪೯ರಲ್ಲಿ ಮಾನಸಿಕ ಆಘಾತಕ್ಕಾಗಿ ನಷ್ಟ ಪರಿಹಾರ ನೀಡಲು ನಿರಾಕರಿಸಿತ್ತು. ಮದರಾಸು ಉಚ್ಚ ನ್ಯಾಯಾಲಯ ಆ ತೀರ್ಪನ್ನು ಒಪ್ಪಲಿಲ್ಲ. ಅಂದಿನಿಂದ ಭಾರತದಲ್ಲಿ ಮಾನಸಿಕ ಆಘಾತದ ಟಾರ್ಟ್ ನಷ್ಟ ಪರಿಹಾರಾರ್ಹವಾದುದೆಂಬ ಗೌರವ ಪಡೆಯಿತು.

ಭಾರತದ ಕಕ್ಷಿಗಾರರ ಸಾಧು ಸ್ವಭಾವ : ಕಾನೂನಿನ ಅಥವಾ ನ್ಯಾಯ ಧರ್ಮ ನೀತಿಗಳ ತಾತ್ವಿಕ ನೆಲೆಗಟ್ಟು ಭಾರತದಲ್ಲಿ ಇತಿಹಾಸ ಪೂರ್ವ ಕಾಲದಿಂದಲೇ ಸ್ಥಿರವಾಗಿದೆ. ಆದರೆ ಬ್ರಿಟಿಷ್ ಅಥವಾ ಇತರ ಪಾಶ್ಚಾತ್ಯ ದೇಶಗಳ ಕಕ್ಷಿಗಾರರಂತೆ ನ್ಯಾಯಾಲಯದ ಮೆಟ್ಟಿಲು ಏರಿ ಕಾನೂನು ತತ್ವಗಳನ್ನು ಎಳೆಎಳೆಯಾಗಿ ಕೂದಲು ಸೀಳಿ ನೋಡುವ ಪರೀಕ್ಷೆಗೆ ಒಳಪಡಿಸುವ ಹಟ ಸ್ವಭಾವ ನಮಗಿರುವಂತೆ ಕಂಡು ಬರುವುದಿಲ್ಲ. ಪಾಶ್ಚಾತ್ಯ ವಿವಾದ ತೀರ್ಮಾನ ವ್ಯವಸ್ಥೆ ಬಹುತೇಕ ಎದುರಾಳಿ ಹೋರಾಟ ಕ್ರಮದ್ದಾಗಿದೆ. ನಮ್ಮ ಪರಂಪರಾಗತ ವ್ಯವಸ್ಥೆ ಪಂಚಾಯತಿ ಮತ್ತು ಮಧ್ಯಸ್ಥಿಕೆ ವಿಧಾನ ವಾದುದು. ಬಹುಶಃ ಪರಂಪರಾಗತ ಪಂಚಾಯತಿ ಮತ್ತು ಮಧ್ಯಸ್ಥಿಕೆ ವಿಧಾನವೇ ನಮ್ಮ ಸ್ವಭಾವಕ್ಕೆ ಹಿತಕರ.

ಇಪಿ ಎಂಬ ಸಾಂಕೇತಿಕ ನಾಮಿಕನ ಸಾವಿನ ಒಗಟು

ಡಾ. ಎಸ್. ಆರ್. ಪ್ರಸಾದ್
ಪ್ರಾಧ್ಯಾಪಕರು, ಮೈಕ್ರೋಬಯಾಲಜಿ ವಿಭಾಗ,
ಶ್ರೀ ದೇವರಾಜ ಅರಸು ಮೆಡಿಕಲ್ ಕಾಲೇಜು,
ಟಮಕ, ಕೋಲಾರ -೫೬೩ ೧೦೧

೧೯೯೫ನೇ ಇಸವಿ, ವಸಂತ ಋತು. ಅಂದು ಡಾ॥ಮೈಕೇಲ್ ಬೆನಿಟೆಸ್ ಮೇರೀಲ್ಯಾಂಡ್ ವಿಶ್ವವಿದ್ಯಾಲಯದ ವೈದ್ಯಕೀಯ ಕೇಂದ್ರದಲ್ಲಿಯ ತಮ್ಮ ಕೊಠಡಿಯಲ್ಲಿ ಕುಳಿತು ಕೆಲವು ರೋಗಿಗಳ ವೈದ್ಯಕೀಯ ಮಾಹಿತಿ ಪತ್ರಗಳನ್ನು ಪರಾಮರ್ಶಿಸುತ್ತಿದ್ದರು. ಅಷ್ಟರಲ್ಲಿ ವೈದ್ಯಕೀಯ ಕೇಂದ್ರದ ಪ್ರಮುಖ ರೆಸಿಡೆಂಟರಾದ ಡಾ॥ ಜೋಸೆಫ್ ಕೋಸ್ಟಾರವರಿಂದ ದೂರವಾಣಿಯ ಕರೆ ಬಂತು- ''ಹಲೋ! ಡಾ॥ ಬೆನಿಟೆಸ್ ಒಬ್ಬ ವ್ಯಕ್ತಿಯ ಸಾವಿನ ಒಗಟನ್ನು ಬಿಡಿಸಲು ನಿಮ್ಮ ಸಹಾಯಬೇಕಾಗಿದೆ. ಇನ್ನೇನು ಕೆಲವೇ ವಾರಗಳಲ್ಲಿ ವೈದ್ಯಕೀಯ ಗೋಷ್ಠಿ ಸೇರಲಿದೆ. ಅದರಲ್ಲಿ ಈ ಸಾವಿನ ನಿಗೂಢ ಕಾರಣದ ಬಗ್ಗೆ ನಿಮ್ಮ ಅನ್ವೇಷಣೆಯ ವಿವರಗಳನ್ನು ಮಂಡಿಸಬೇಕು. ದಯವಿಟ್ಟು ನನ್ನ ಮನವಿಯನ್ನು ನಿರಾಕರಿಸಬೇಡಿ'' ಎಂದು ಕೇಳಿಕೊಂಡರು.

ಸಿಪಿಸಿ ಸಭೆ :

ರೋಗಿ ಸತ್ತಮೇಲೆ , ಅವನ ಸಾವಿಗೆ ಕಾರಣ ತಿಳಿಯದೇ ಹಾಗೆಯೇ ಉಳಿದಾಗ, ಅದನ್ನು ವಿಶ್ಲೇಷಿಸುವುದಕ್ಕಾಗಿ ವಿಶೇಷ ಸಭೆಗಳನ್ನು ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ಆಗಾಗ ಕರೆಯುತ್ತಿದ್ದರು. ಇಂಥ ಗೋಷ್ಠಿಗಳಿಗೆ ಸಿಪಿಸಿ (ಕ್ಲಿನಿಕೋ ಫೆಥಾಲಾಜಿಕಲ್ ಕಾನ್ಫರೆನ್ಸ್) ಎಂದು ಹೆಸರು. ಅವುಗಳಲ್ಲಿ ಪರಿಣತ ವೈದ್ಯರೊಬ್ಬರು ಮೃತನಾದ ರೋಗಿ ಬದುಕಿದ್ದಾಗ ಸಂಗ್ರಹಿಸಿದಂಥ ಆತನ ರೋಗದ ಬಗೆಗಿನ ಮಾಹಿತಿಯನ್ನೆಲ್ಲ ಕೂಲಂಕುಷವಾಗಿ ಅಧ್ಯಯನ ಮಾಡಿ, ರೋಗಿಯ ಸಾವಿಗೆ ಕಾರಣವಾಗಬಹುದಾದ ಸಾಧ್ಯತೆಗಳನ್ನೆಲ್ಲ ವಿಶ್ಲೇಷಿಸಿ ಒಂದು ನಿರ್ಧಾರಕ್ಕೆ ಬರುತ್ತಾರೆ. ಆಮೇಲೆ ಅವನ್ನು ಸಭಾಸದರ ಮುಂದೆ ಸಾಧಾರವಾಗಿ ಮಂಡಿಸುತ್ತಾರೆ. ಅಂಥ ಸಭೆಗಳಿಗೆ ವೈದ್ಯಕೀಯ ವಿದ್ಯಾರ್ಥಿಗಳೂ, ಇತರ ಪರಿಣತ ವೈದ್ಯರೂ ಬರುತ್ತಾರೆ. ಪ್ರಧಾನ ಭಾಷಣಕಾರರ ನಿದಾನ ಮಂಡನೆಯಾದ ಮೇಲೆ ಸಭಿಕರ ಸರದಿ. ಅವರೂ ಆ ಸಾವಿನ ಬಗ್ಗೆ ತಮ್ಮ ಅನಿಸಿಕೆ, ನಿಲುವುಗಳನ್ನು ಮಂಡಿಸಿ ಚರ್ಚಿಸುತ್ತಾರೆ. ಕೆಲವೊಮ್ಮೆ ಚರ್ಚೆ ಆಳವಾಗಿ ನಡೆದು ವಾತಾವರಣದಲ್ಲಿ ಕಾವೇರುವುದೂ ಉಂಟು. ಕೊನೆಗೆ ವಿಕೃತಾಂಗ ವಿಜ್ಞಾನ ತಜ್ಞರ (ಪೆಥಾಲಜಿಸ್ಟ್) ಸರದಿ. ಅವರು ರೋಗಿಯ ಮರಣೋತ್ತರ ಪರೀಕ್ಷೆಯಿಂದ ಲಬ್ಧವಾದ ಸಾವಿನ ಕಾರಣವನ್ನು ಸ್ಪಷ್ಟವಾಗಿ ನಿರೂಪಿಸುತ್ತಾರೆ. ಈ ನಿರೂಪಣೆಯಲ್ಲಿ ಮೃತನ ಅಂಗಗಳ ಸೂಕ್ಷ್ಮದರ್ಶಕ ಪರೀಕ್ಷೆಗಳಿಂದ ಪ್ರಾಪ್ತವಾದ ಮಾಹಿತಿಯನ್ನು ಹಂತ ಹಂತವಾಗಿ ಸೂಕ್ಷ್ಮದರ್ಶಕದಡಿಯ ಚಿತ್ರಗಳನ್ನು ತೋರಿಸುತ್ತಾ ವಿವರಿಸುತ್ತಾರೆ. ಇದಕ್ಕಾಗಿ ಆ ಚಿತ್ರಗಳ ಸ್ಲೈಡ್‌ಗಳನ್ನು ತಯಾರಿಸಿಕೊಂಡು ಬಂದು ಪರದೆ ಮೇಲೆ ಪ್ರದರ್ಶಿಸುತ್ತಾರೆ. ಹೀಗೆ ಅಂತಿಮ ನಿದಾನ ಆಧಾರಯುತವಾಗಿ ರೂಪುಗೊಳ್ಳುತ್ತದೆ. ಇಂಥ ಸಿಪಿಸಿ ಸಭೆಗಳಲ್ಲಿ

ಅಕ್ಟೋಬರ್ ೧೯೯೯ರ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ ಸ್ಟೀವೆನ್ ಲಿವಿಂಗ್‌ಸ್ಟನ್ ರವರ ''ದಿ ಮಿಸ್ಟೀರಿಯಸ್ ಕೇಸ್ ಆಫ್ ಇಪಿ ''ಲೇಖನದ ಅನುವಾದ.

ವೈದ್ಯಕೀಯ ವಿದ್ಯಾರ್ಥಿಗಳು ಅಮೂಲ್ಯ ಅನುಭವಗಳನ್ನು ಪಡೆದುಕೊಳ್ಳುತ್ತಾರೆ. ಅವರ ನಿದಾನಕುಶಲತೆ ಬೆಳೆಯುತ್ತದೆ.

ಸಿಪಿಸಿಯಲ್ಲಿ ಭಾಗವಹಿಸುವುದು ಪ್ರಧಾನ ಭಾಷಣಕಾರನಿಗೆ ಒಂದು ಸವಾಲೇ ಸರಿ; ಅದು ಅವನ ನಿದಾನಕುಶಲತೆಗೆ, ಶಾಸ್ತ್ರಜ್ಞಾನಕ್ಕೆ ಪರೀಕ್ಷೆ ಇದ್ದಂತೆ. ಅವನು ಸಭೆಯಲ್ಲಿ ಮಂಡಿಸಿದ ನಿದಾನವೇ ಒಂದಾಗಿ, ಕೊನೆಗೆ ವಿಕೃತಾಂಗ ವಿಜ್ಞಾನ ತಜ್ಞರ ನಿದಾನವೇ ಬೇರೆಯಾದರೆ ಅವನ ಶ್ರಮ ನಗುಪಾಟಲಾದೀತು ! ಹೀಗೆ ಸಿಪಿಸಿಯಲ್ಲಿ ವಿಶ್ಲೇಷಕನಾಗಲು ಒಪ್ಪಿಕೊಂಡ ವೈದ್ಯ ಮಾನಸಿಕವಾಗಿ ಸಾಕಷ್ಟು ಆತಂಕವನ್ನು ಎದುರಿಸಬೇಕಾಗುತ್ತದೆ. ಆದರೂ ಹಿಂದೆ ಮೂರು ಸಿಪಿಸಿಗಳನ್ನು ನಡೆಸಿಕೊಟ್ಟಿದ್ದ ಡಾ॥ಬೆನಿಟೆಸ್ ಹಿಂಜರಿಯದೆ- ''ಸಂತೋಷ ಡಾ॥ಕೋಸ್ಟಾ ! ನನಗೆ ಒಪ್ಪಿಗೆಯೇ. ನಿಮ್ಮ ಮುಂದಿನ ಸಿಪಿಸಿ ನಡೆಸಿಕೊಡುತ್ತೇನೆ''-ಎಂದು ಸವಾಲನ್ನು ಸ್ವೀಕರಿಸಿದರು.

ಸ್ವಲ್ಪ ಹೊತ್ತಿನಲ್ಲಿಯೇ ಡಾ॥ಬೆನಿಟೆಸ್, ಡಾ॥ಕೋಸ್ಟಾ ಅವರ ಕೊಠಡಿಗೆ ತೆರಳಿ ಅವರನ್ನು ಭೇಟಿ ಮಾಡಿದರು. ಅವರು ಒಂದು ತೆಳು ಫೈಲನ್ನು ಡಾ॥ಬೆಸಿಟೆಸ್‌ರ ಕೈಯಲ್ಲಿಟ್ಟು ''ಇಲ್ಲಿದೆ ರೋಗಿಯ ಬಗೆಗಿನ ಮಾಹಿತಿ; ಇದನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ, ಇದರ ಮೇಲೆ ನಿಮ್ಮ ಚಾತುರ್ಯವನ್ನೆಲ್ಲಾ ಪ್ರಯೋಗಿಸಿ, ನಿಮ್ಮ ಪ್ರತಿಭೆಯನ್ನು ಮುಂದಿನ ಸಿಪಿಸಿಯಲ್ಲಿ ಹೊರಹೊಮ್ಮಿಸಿ, ಶುಭವಾಗಲಿ'' ಎಂದರು. ಅವರು ಒದಗಿಸಿದ ಮಾಹಿತಿ ಬಹಳ ಸಂಕ್ಷಿಪ್ತವಾಗಿತ್ತು : ಮಾಹಿತಿ ಪತ್ರದ ಗಾತ್ರ ಕೇವಲ ೧ ೧/೨ ಪುಟಗಳಷ್ಟು ಮಾತ್ರ. ಅದರ ಮೇಲೆ ರೋಗಿಯ ಹೆಸರನ್ನೂ ಮೊಟಕಾಗಿ ''ಇಪಿ'' ಎಂದು ನಮೂದಿಸಲಾಗಿತ್ತು. ರಕ್ತ, ಮೂತ್ರ, ಮುಂತಾದವುಗಳ ತಪಾಸಣೆಯ ಪ್ರಯೋಗಶಾಲೆಯ ವರದಿಗಳಾಗಲೀ, ಎಕ್ಸ್‌ರೇ, ಸಿ.ಟಿ.ಸ್ಕ್ಯಾನ್ ಚಿತ್ರಗಳಾಗಲೀ ಲಭ್ಯವಿರಲಿಲ್ಲ.

ರೋಗದ ಮಾಹಿತಿ: ಇಪಿ ಎಂಬಾತ ಮಧ್ಯ ವಯಸ್ಕ. ಅಕ್ಟೋಬರ್ ತಿಂಗಳಿನಲ್ಲಿ ಒಂದು ದಿನ ಮಧ್ಯಾಹ್ನ ಅವನು ಬಾಲ್ಟಿಮೋರ್ ನಗರದ ರಸ್ತೆಯೊಂದರಲ್ಲಿ ಜ್ಞಾನ ತಪ್ಪಿ ಬಿದ್ದಿದ್ದ. ಯಾರೋ ಅವನನ್ನು ಹತ್ತಿರದ ಆಸ್ಪತ್ರೆಯೊಂದಕ್ಕೆ ಸೇರಿಸಿದ್ದರು. ಆಸ್ಪತ್ರೆಯಲ್ಲಿ ಅಂದಿನ ರಾತ್ರಿಯೆಲ್ಲಾ ಪ್ರಜ್ಞೆ ಇಲ್ಲದೆಯೇ ಬಿದ್ದುಕೊಂಡಿದ್ದ. ಅವನಿಗೆ ಜ್ಞಾನ ಬಂದಾಗ ಮರುದಿನದ ಬೆಳಗಿನ ಜಾವ ಮೂರು ಘಂಟೆಯಾಗಿತ್ತು.

ರೋಗಿ ಅಂದು ನಡುನಡುಗುತ್ತಾ ಎದ್ದವನೇ ಏನೇನೋ ಅಸಂಬದ್ಧವಾಗಿ ಬಡ ಬಡಿಸ ತೊಡಗಿದ. ದೇಹ ಬೆವರಿನಿಂದ ತೊಯ್ದು ಹೋಗಿತ್ತು. ಹೃದಯದ ಬಡಿತದಲ್ಲೂ ಏರುಪೇರು ಕಂಡು ಬಂದಿತು. ಈ ಮಾನಸಿಕ ಭ್ರಮೆಯ ಸ್ಥಿತಿ ಮುಂದಿನ ೨೪ ತಾಸು ಹಾಗೆಯೇ ಮುಂದುವರಿದಿತ್ತು. ಮರುದಿನ ಅವನ ಸ್ಥಿತಿ ಇದ್ದಕ್ಕಿದ್ದಂತೆ ಉತ್ತಮಗೊಂಡಿತು. ಮುಖ ಪ್ರಸನ್ನವಾಯಿತು. ಮನಸ್ಸು ತಿಳಿಯಾಯಿತು. ಸ್ವಲ್ಪ ತಲೆನೋವು ಮತ್ತು ಹೊಟ್ಟೆನೋವು ಇದೆ ಎಂದು ಮಾತ್ರ ಹೇಳಿದ. ಅವನಿಗೆ ತಾನು ಆಸ್ಪತ್ರೆಗೆ ಹೇಗೆ ಬಂದೆನೆಂಬುದರ ತಿಳಿವಾಗಲೀ ಹಿಂದಿನ ಮೂರು ದಿನಗಳನ್ನು ಎಲ್ಲಿ ಕಳೆದೆನೆಂಬುದರ ಪರಿವೆಯಾಗಲೀ ಇರಲಿಲ್ಲ. ಮತ್ತೆ ಅಂದಿನ ಸಂಜೆ ಅವನ ರೋಗ ಉಲ್ಬಣಿಸಿತು. ಮನಸ್ಸು ಮೊದಲಿನಂತೆಯೇ ಭ್ರಮೆಯ ಸ್ಥಿತಿಯನ್ನು ತಲುಪಿತು. ಏನೇನೋ ಒದರಲಾರಂಭಿಸಿದ. ಮೇಲುಸಿರು ಬರಲು ಪ್ರಾರಂಭವಾಯಿತು. ಮುಂದಿನ ಕೆಲವು ಗಂಟೆಗಳಲ್ಲೇ ಸಾವನ್ನಪ್ಪಿದ್ದ.

ರೋಗಿ ಆಸ್ಪತ್ರೆಗೆ ದಾಖಲಾದಾಗ ಅವನ ಹತ್ತಿರ ಮದ್ಯದ ವಾಸನೆ ಏನೂ ಇರಲಿಲ್ಲ. ವೈದ್ಯರು ಈ ಮಧ್ಯೆ ಚಿಕಿತ್ಸೆಗೆಂದು ಮದ್ಯವನ್ನು ಬಳಸಲು ಯೋಚಿಸುತ್ತಿದ್ದಾಗ ರೋಗಿ ಅದನ್ನು ತೀವ್ರವಾಗಿ ಪ್ರತಿಭಟಿಸಿದ್ದ. ರೋಗಿ ಸ್ವಲ್ಪ ನೀರನ್ನೇನೋ ಕುಡಿದಿದ್ದ ಆದರೆ ನೀರು

ಕುಡಿಯುವಾಗ ಅತಿಯಾಗಿ ಪ್ರಯಾಸಪಟ್ಟಿದ್ದ ಎಂದೂ ಮಾಹಿತಿ ಪತ್ರದಲ್ಲಿ ದಾಖಲೆ ಇತ್ತು.

ಹಿಂದೆ ರೋಗಿಗೆ ಕುಡಿಯುವ ಚಟವಿತ್ತು. ಮದ್ಯ ಒಂದೇ ಅಲ್ಲದೆ ಬೇರೆ ಬೇರೆ ಮಾದಕವಸ್ತುಗಳನ್ನೂ ಸೇವಿಸುತ್ತಿದ್ದ. ಅವುಗಳ ಫಲವಾಗಿ ಮಾನಸಿಕ ಖಿನ್ನತೆಯನ್ನೂ ಅನುಭವಿಸಿದ್ದ. ಆದರೆ ಆಸ್ಪತ್ರೆ ಸೇರುವುದಕ್ಕೆ ಮುಂಚೆ ಆರು ತಿಂಗಳಿಂದ ಕುಡಿಯುವುದನ್ನು ಸಂಪೂರ್ಣವಾಗಿ ತ್ಯಜಿಸಿ ಬಿಟ್ಟಿದ್ದ. ಅವನು ಆಸ್ಪತ್ರೆ ಸೇರುವ ಮುನ್ನ ಕಾಲರಾ ರೋಗ ಬೇರೆ ಬಂದು ವಾಸಿಯಾಗಿತ್ತು ಎಂದು ರೋಗದ ಪೂರ್ವಚರಿತ್ರೆಯಲ್ಲಿ ದಾಖಲಿಸಿದ್ದರು.

ಸಾವಿಗೆ ಯಾವ ರೋಗ ಕಾರಣವಿರಬಹುದು?

ಈ ವ್ಯಕ್ತಿಯ ಸಾವಿಗೆ ಕಾರಣವನ್ನು ಶೋಧಿಸಿ ವಿವರಗಳನ್ನು ಸಿಪಿಸಿ ಸಭೆಯ ಮುಂದೆ ಮಂಡಿಸಲು ಕೇವಲ ಕೆಲವೇ ವಾರಗಳು ಉಳಿದಿದ್ದುವು. ಈ ರೋಗದ ಕಾರಣದ ಬಗೆಗಿನ ಜಿಜ್ಞಾಸೆಯಿಂದ ಡಾ। ಬೆನಿಟೆಸ್, ಕೆಲವು ದಿನ ವೈದ್ಯಕೀಯ ನಿಯತ ಕಾಲಿಕಗಳನ್ನು (ಜರ್ನಲ್‌ಗಳನ್ನು) ಓದಿ ಮಾಹಿತಿ ಸಂಗ್ರಹಣೆ, ಆಳವಾದ ಅಧ್ಯಯನ ನಡೆಸುವುದರಲ್ಲೇ ತಮ್ಮನ್ನು ತೊಡಗಿಸಿಕೊಂಡರು. ದೀರ್ಘವಾಗಿ ಚಿಂತಿಸಿ, ಕೊನೆಗೆ ವಿಶ್ಲೇಷಣೆಗಾಗಿ ಒಂದು ಹಾಳೆಯ ಮೇಲೆ ರೋಗದ ಲಕ್ಷಣಗಳನ್ನು ಕ್ರಮವಾಗಿ : ಮಾನಸಿಕ ಭ್ರಮೆ- ಮನಸ್ಸು ತಿಳಿಯಾಯಿತು-ಮತ್ತೆ ಭ್ರಮೆ ಮರುಕಳಿಸಿತು-ಹೃದಯದ ಬಡಿತ ಏರುಪೇರಾಯಿತು-ಸಾವು ಬಂದೆರಗಿತು, ಎಂದು ಒಂದರ ಕೆಳಗೆ ಒಂದರಂತೆ ಬರೆದುಕೊಂಡರು. ಈ ವ್ಯಕ್ತಿಯ ಸಾವಿನ ರಹಸ್ಯ ಈ ಶಬ್ದಗಳಲ್ಲೇ ಅಡಗಿದೆ ಎಂದು ಅವರ ಮನಸ್ಸು ನುಡಿಯುತ್ತಿತ್ತು.

ಈ ಲಕ್ಷಣಗಳುಳ್ಳ ಕಾಯಿಲೆ ಯಾವುದಿರಬಹುದು? ಸಾಮಾನ್ಯವಾಗಿ ತಲೆಗೆ ಪೆಟ್ಟು ಬಿದ್ದರೆ ಹೀಗಾಗಿ ರೋಗಿಗಳು ಸಾವನ್ನಪ್ಪುತ್ತಾರೆ. ಆದರೆ ರೋಗದ ಬಗೆಗಿನ ಮಾಹಿತಿಯಲ್ಲಿ ತಲೆಗೆ ಯಾವ ಪೆಟ್ಟು ತಗಲಿರಲಿಲ್ಲವೆಂದು ಸ್ಪಷ್ಟವಾಗಿ ಬರೆಯಲಾಗಿತ್ತು. ಹಠಾತ್ತಾಗಿ ಒಮ್ಮಿಂದೊಮ್ಮೆಲೇ ಕುಡುಕರು ಕುಡಿತ ಬಿಟ್ಟುಬಿಟ್ಟರೂ ಮಾನಸಿಕ ತೊಳಲಾಟ ಉಂಟಾಗುತ್ತದೆ. ರೋಗಿ ಕೆಲವು ತಿಂಗಳುಗಳಿಂದಲೇ ಮದ್ಯವನ್ನು ತ್ಯಜಿಸಿರುವುದಾಗಿ ಹೇಳಿದ್ದ. ಅದೂ ಅಲ್ಲದೆ ಹಠಾತ್ತಾಗಿ ಮದ್ಯಪಾನ ತ್ಯಜಿಸಿದವರಲ್ಲಿ ಹೀಗೆ ಜ್ಞಾನತಪ್ಪಿಹೋಗಿ-ಜ್ಞಾನ ಬಂದು, ಮತ್ತೆ ಜ್ಞಾನ ತಪ್ಪಿಹೋಗಿ, ಕೊನೆಗೆ ಸಾವು ಬಂದೆರಗುವುದಿಲ್ಲ.

ಸೋಂಕು ರೋಗಗಳು ಕಾರಣವೇ?

ಸೋಂಕು ರೋಗಗಳೂ ಮಿದುಳಿನಲ್ಲಿ ವಿಕೃತಿಯನ್ನುಂಟು ಮಾಡುತ್ತವೆ. ಅವುಗಳಲ್ಲೊಂದು ರೋಗಕ್ಕೆ ಕಾರಣವಿರಬಹುದೇ? ಯಾವ ಸೋಂಕು ರೋಗದಲ್ಲಿ ಈ ತರಹ ಮತಿಗೆಟ್ಟು- ಸರಿ ಹೋಗಿ-ಮತ್ತೆ ಮತಿಗೆಟ್ಟು ಸಾವು ಸಂಭವಿಸುತ್ತದೆ? ಹಳದಿಜ್ವರ ಮತ್ತು ಮಲೇರಿಯಾ ಜ್ವರದ ಹೆಸರುಗಳು ಡಾ। ಬೆನಿಟೆಸ್‌ರವರ ಮನಃಪಟಲದ ಮೇಲೆ ಮೂಡಿದುವು. ಆದರೆ ರೋಗಿ ಸತ್ತದ್ದು ಅಮೆರಿಕೆಯಲ್ಲಿ; ಅಲ್ಲಿ ಈ ರೋಗಗಳು ಇಲ್ಲವೇ ಇಲ್ಲವಲ್ಲಾ! ಹೋಗಲಿ ರೋಗಿ ಆರೋಗ್ಯವಾಗಿದ್ದಾಗ ಯಾವುದಾದರೂ ಹೊರದೇಶಗಳಿಗೆ ಹೋಗಿ ಅಲ್ಲಿಯ ರೋಗ ಹತ್ತಿಸಿಕೊಂಡು ಬಂದಿದ್ದಾನೆ ಎನ್ನಲು, ಅವನು ಒಂದೆ ವಿದೇಶ ಪ್ರವಾಸ ಕೈಗೊಂಡದ್ದನ್ನು ಮಾಹಿತಿ ಪತ್ರದಲ್ಲಿ ನಮೂದಿಸಿರಲಿಲ್ಲ. ಆದರೂ ಸೋಂಕಿನ ಕಾರಣವನ್ನು ಬೆನಿಟೆಸ್ ಸಂಪೂರ್ಣವಾಗಿ ತಳ್ಳಿಹಾಕಲಿಲ್ಲ.

ಕಂಪ್ಯೂಟರ್ ಬಳಸಿ ಅಲ್ಲಿನ ವಿಶ್ವಕೋಶದಲ್ಲಿದ್ದ ಹಳದೀ ಜ್ವರದ ಮೇಲಿನ ಲೇಖನಗಳ ಮೇಲೆಲ್ಲಾ ಕಣ್ಣು ಹಾಯಿಸಿದರು. ಆಗ ''ಹದಿನೆಂಟನೇ ಶತಮಾನದಲ್ಲಿ ಅಮೆರಿಕದಲ್ಲೂ ಹಳದೀ ಜ್ವರದ ಪೀಡೆ ೪೦೦೦ ಕ್ಕೂ ಹೆಚ್ಚು ಜನಗಳನ್ನು ಬಲಿ ತೆಗೆದುಕೊಂಡಿತ್ತು''

ಎಂಬ ಸಂಗತಿ ಅವರ ಮನಸ್ಸನ್ನು ಹಿಡಿದಿಟ್ಟಿತ್ತು. ತತ್‌ಕ್ಷಣ ಅವರಿಗೆ ಏನೋ ಹೊಳೆದಂತಾಗಿ- ಈ ಇಪಿ ಎಂಬ ರೋಗಿ ೧೭ನೇ ಶತಮಾನದ ಅಂತ್ಯದಲ್ಲೋ ಅಥವಾ ೧೮ನೇ ಶತಮಾನದ ಆದಿಯಲ್ಲೋ ಜೀವಿಸಿದ್ದವನಿರಬಹುದೇ ? ಎಂಬ ಸಂಶಯ ಮೂಡಿತು. ಆಗ ಸಿಟಿ ಸ್ಕ್ಯಾನ್ ಅನ್ನು ಇನ್ನೂ ಕಂಡುಹಿಡಿದಿರಲಿಲ್ಲ. ಆದ್ದರಿಂದಲೇ ರೋಗಿಯ ಸಿಟಿಸ್ಕ್ಯಾನ್ ಲಭ್ಯವಿಲ್ಲದಿರಬಹುದು. ಈಗಿನ ದಿನಗಳಲ್ಲಾದರೋ ಮಿದುಳಿಗೆ ಸಂಬಂಧಪಟ್ಟ ರೋಗಗಳಿರುವವರಿಗೆ ಸಿಟಿಸ್ಕ್ಯಾನ್ ಮಾಡಿಸದೆ ಬಿಡುವುದೇ ಇಲ್ಲ. ಆದರೂ ಹಳದೀ ಜ್ವರ ಮತ್ತು ಮಲೇರಿಯಾ ರೋಗದ ಲಕ್ಷಣಗಳಿಗೂ ರೋಗಿಯ ರೋಗ ಲಕ್ಷಣಗಳಿಗೂ ಸಂಪೂರ್ಣವಾಗಿ ತಾಳೆಯಾಗದೆ ಈ ಎರಡೂ ಸೋಂಕು ರೋಗಗಳ ಸಾಧ್ಯತೆಯನ್ನು ತಳ್ಳಿಹಾಕಲಾಯಿತು.

ಹುಚ್ಚು ನಾಯಿಕಡಿತ ಕಾರಣವೇ?

ಪ್ರಶ್ನೆ ಬಗೆಹರಿಯದೆ ಹಾಗೆಯೇ ಉಳಿದಾಗ ಡಾ। ಬೆನಿಟೆಸ್ ರೋಗಿಯ ರೋಗ ಚರಿತ್ರೆಯನ್ನು ಮತ್ತೆ ಮತ್ತೆ ಪರಾಮರ್ಶಿಸ ಲಾರಂಭಿಸಿದರು. ಈ ರೋಗಿಯ ವಿಷಯದಲ್ಲಿ ಏನೋ ಒಂದು ಅಂಶ ನನ್ನ ಹಿಡಿತಕ್ಕೆ ಸಿಕ್ಕದೆ ಜಾರಿಕೊಳ್ಳುತ್ತಿದೆ ಎಂದು ಅವರ ಆತಂಕ. ಅಷ್ಟರಲ್ಲೇ ಅವರ ಆಲೋಚನಾ ಲಹರಿಯನ್ನು ಎರಡು ಪ್ರಶ್ನೆಗಳು ಹಿಡಿದಿಟ್ಟವು. ಆ ರೋಗಿ ಸ್ವಲ್ಪ ಮದ್ಯವನ್ನು ಔಷಧಿ ರೂಪದಲ್ಲಿ ಸೇವಿಸಲೂ ಏಕೆ ತೀವ್ರವಾಗಿ ಪ್ರತಿಭಟಿಸಿದ್ದ ? ಮತ್ತು ನೀರನ್ನು ಕುಡಿಯುವಾಗ ಏಕೆ ಅಷ್ಟೊಂದು ಕಷ್ಟ ಅನುಭವಿಸಿದ್ದ ? -ಎಂಬುವೆ ಆ ಪ್ರಶ್ನೆಗಳು. ತತ್‌ಕ್ಷಣ ಅವರ ಮನಸ್ಸಿನಲ್ಲಿ ಉತ್ತರ ಮಿಂಚಿತು - ಹುಚ್ಚುನಾಯಿ ಕಡಿದು ರೇಬಿಸ್ ರೋಗ ಬಂದವರು ಈ ರೀತಿ ದ್ರವವಸ್ತುಗಳನ್ನು ನುಂಗುವಾಗ, ನುಂಗುವುದಕ್ಕಾಗದೆಯೇ ಅತಿಯಾದ ಬಾಧೆಯನ್ನು ಅನುಭವಿಸುತ್ತಾರೆ-ಎಂಬುದು. ಇಪಿ ಎಂಬ ಸಂಕೇತ ನಾಮಿಕನಾದ ರೋಗಿಯೂ ಹುಚ್ಚು ನಾಯಿ ಕಡಿತಕ್ಕೆ ತುತ್ತಾಗಿ ರೇಬೀಸ್ ರೋಗದಿಂದ ಸತ್ತಿರಬಹುದೇ? ಆ ರೋಗಿಯ ರೋಗ ಚರಿತ್ರೆಯಲ್ಲಿ ರೇಬಿಸ್‌ನಲ್ಲಿ ಕಾಣಿಸಿಕೊಳ್ಳುವ ಕೆಲವೊಂದು ಲಕ್ಷಣಗಳು ದಾಖಲಾಗಿರಲಿಲ್ಲ. ಬಾಯಿಯಲ್ಲಿ ನೊರೆ ಸುರಿಸುವುದು ರೇಬಿಸ್ ರೋಗದ ಪ್ರಮುಖ ಚಿಹ್ನೆಗಳಲ್ಲಿ ಒಂದಲ್ಲವೇ? ರೋಗದ ಬಗೆಗಿನ ಮಾಹಿತಿಯಲ್ಲಿ ಅದು ನಮೂದಿತವಾಗಿರಲೇ ಇಲ್ಲ. ಅಮೆರಿಕೆಯಲ್ಲಾದರೋ ಇತ್ತೀಚಿನ ದಿನಗಳಲ್ಲಿ ರೇಬಿಸ್ ಒಂದು ವಿರಳ ರೋಗ. ಡಾ। ಬೆನಿಟೆಸ್ ತಮ್ಮ ವೃತ್ತಿ ಜೀವನದಲ್ಲಿ ರೇಬಿಸ್‌ನಿಂದ ಬಳಲಿ ಸತ್ತ ಒಬ್ಬ ರೋಗಿಯನ್ನೂ ನೋಡಿರಲಿಲ್ಲ. ಮತ್ತೆ ಮಾಹಿತಿಗಾಗಿ ವೈದ್ಯಕೀಯ ಶಾಸ್ತ್ರ ಸಾಹಿತ್ಯವನ್ನೇ ಮೊರೆಹೋಗಬೇಕಾಯಿತು.

ದಾರಿ ದೀಪವಾದ ಶಾಸ್ತ್ರ ಸಾಹಿತ್ಯ

ಡಾ। ಬೆನಿಟೆಸ್ ಸೋಂಕು ರೋಗಗಳ ಆಕರ ಗ್ರಂಥವಾದ "ಪ್ರಿನ್ಸಿಪಲ್ಸ್ ಅಂಡ್ ಪ್ರಾಕ್ಟೀಸ್ ಆಫ್ ಇನ್ಫೆಕ್ಷಿಯಸ್ ಡಿಸೀಸಸ್" ಎಂಬ ಬೃಹತ್ ಗ್ರಂಥದ ಪುಟಗಳನ್ನು ಮತ್ತೆ ತಿರುವಿ ಹಾಕಿದರು. ಅವರು ರೇಬಿಸ್ ರೋಗದ ಬಗೆಗಿನ ವಿವರಗಳನ್ನು ಓದುತ್ತ ಸಾಗಿದಷ್ಟೂ, ಅವರ ಮುಂದಿರುವ ರೋಗಿಯ ರೋಗದ ಚಿಹ್ನೆಗಳಿಗೂ ರೇಬೀಸ್ ರೋಗದ ಚಿಹ್ನೆಗಳಿಗೂ ತಾಳೆಯಾಗುತ್ತಾ ಹೋಗುತ್ತಿರುವುದು ಅವರಿಗೆ ಮನವರಿಕೆಯಾಗುತ್ತಾ ಬಂತು.

ರೇಬೀಸ್ ರೋಗ ಹುಚ್ಚುನಾಯಿಯ ಕಡಿತದಿಂದ ಬರುತ್ತದೆ. ಆಗ ಆ ನಾಯಿಯ ಜೊಲ್ಲಿನಲ್ಲಿರುವ ವಿಷಾಣು ನಮ್ಮ ದೇಹವನ್ನು ಸೇರುತ್ತದೆ. ಅದು ನಾಯಿ ಕಚ್ಚಿ ಗಾಯವಾದ ಸ್ಥಳದಲ್ಲಿಯ ನರಾಗ್ರಗಳನ್ನು ಪ್ರವೇಶಿಸಿ,

ಅಲ್ಲಿಂದ ನರಗಳ ಮಧ್ಯದ ದ್ರವವಾದ ಆಕ್ಸೋಪ್ಲಾಸಮ್‌ನಲ್ಲಿ ಮೆಲ್ಲಮೆಲ್ಲನೆ ಚಲಿಸಿಕೊಂಡು ಮಿದುಳನ್ನು ತಲಪುತ್ತದೆ. ಹೀಗೆ ವಿಷಾಣು ಮಿದುಳನ್ನು ತಲಪುವಷ್ಟರಲ್ಲಿ ತಿಂಗಳುಗಳೋ, ವರ್ಷಗಳೋ ಉರುಳಿ ಹೋಗುತ್ತವೆ. ಈ ಮಧ್ಯೆ ನಾಯಿಯಿಂದ ಕಡಿಸಿಕೊಂಡವನಿಗೆ ತಲೆನೋವೋ, ಮಾಂಸಖಂಡಗಳ ನೋವಿನಿಂದ ಮೈಕೈ ನೋವೋ ತಲೆದೋರಿದರೂ ಅವನು ಅದನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ನಿರ್ಲಕ್ಷ್ಯದಿಂದ ಇದ್ದು ಬಿಡುತ್ತಾನೆ. ವಿಷಾಣು ಮಿದುಳನ್ನು ತಲಪಿದ ಮೇಲೆ ಪರಿಸ್ಥಿತಿ ಹದಗೆಟ್ಟು ಬುದ್ಧಿಭ್ರಮೆ ಯಾಗಿ ರೋಗಿ ಅಸಂಬದ್ಧವಾಗಿ ಪ್ರಲಾಪಿಸ ತೊಡಗುತ್ತಾನೆ. ಹೃದಯದ ಬಡಿತಕ್ಕೂ ಉಸಿರಾಟಕ್ಕೂ ಇರುವ ನಂಟು ಏರುಪೇರಾಗುತ್ತದೆ. ಆದರೆ ಬುದ್ಧಿಭ್ರಮಣೆ ಒಂದೇ ಸಮವಾಗಿರುವುದಿಲ್ಲ. ನಡುನಡುವೆ ಜ್ಞಾನ ಸರಿಯಾಗಿ ಮನಸ್ಸು ತಿಳಿಯಾಗುತ್ತದೆ. ಮತ್ತೆ ಮತಿಭ್ರಮಣೆ ಹಿಂದಿರುಗುತ್ತದೆ.

ರೇಬೀಸ್ ವಿಷಾಣು ಮಿದುಳನ್ನು ಸೇರಿ ರೋಗ ಬಂದ ಮೇಲೆ ಉಳಿದವರು ಇಲ್ಲವೇ ಇಲ್ಲವೆನ್ನಬಹುದು. ರೋಗದ ಲಕ್ಷಣಗಳು ಕಾಣಿಸಿಕೊಂಡ ಕೇವಲ ನಾಲ್ಕು ದಿನಗಳಲ್ಲಿ ರೋಗಿ ಸಾವನ್ನಪ್ಪುತ್ತಾನೆ. ಸಾಯುವ ಮುನ್ನ ಅವನು ನರಕಯಾತನೆ ಅನುಭವಿಸಬೇಕಾಗುತ್ತದೆ : ಅವನು ಏನನ್ನಾದರೂ ಕುಡಿಯಲು ಹೋದಾಗ ಅವನ ಗಂಟಲಿನ ಪೇಶಿಗಳು ತೀವ್ರವಾಗಿ ಸಂಕುಚನಗೊಳ್ಳುತ್ತವೆ. ಕುಡಿಯಲಾಗದೇ ಗಂಟಲು ಹಿಂಡಿದಂತಾಗಿ ರೋಗಿ ಬಹಳ ನೋವು ಅನುಭವಿಸುತ್ತಾನೆ. ರೇಬೀಸ್ ರೋಗಿಗಳ ಬಾಯಿಯಲ್ಲಿ ನೊರೆಯಾಡಲೇಬೇಕೆಂಬ ನಿಯಮವೇನೂ ಇಲ್ಲ. ಆ ನಿಯಮ ಚಲನ ಚಿತ್ರಗಳಲ್ಲಿ ತೋರಿಸುವ ರೇಬೀಸ್ ರೋಗಿಗಳಿಗಷ್ಟೇ ಮೀಸಲು! ಚಲನ ಚಿತ್ರಗಳಲ್ಲಿ ರೇಬೀಸ್ ರೋಗಿಗಳ ಬಾಯಲ್ಲಿ ನೊರೆ ಬರುವ ದೃಶ್ಯ ತೋರಿಸದಿದ್ದರೆ ಅವರಿಗೆ ತೃಪ್ತಿಯೇ ಇರುವುದಿಲ್ಲ. ಆವ್ಯಕ್ತಿ ರೇಬೀಸ್‌ನಿಂದಲೇ ಸತ್ತಿರಬೇಕೆಂದು ಡಾ|ಬೆನಿಟೆಸ್‌ಗೆ ಮನವರಿಕೆಯಾದರೂ ಮತ್ತೊಂದು ಪ್ರಶ್ನೆ ಮುಂದಾಯಿತು. ರೋಗಿಯ ಬಗೆಗಿನ ಮಾಹಿತಿಯಲ್ಲಿ ರೋಗಿ ಹುಚ್ಚುನಾಯಿಯ ಸಂಪರ್ಕಕ್ಕೆ ಬಂದಿದ್ದ ಎಂದೇನೂ ದಾಖಲಾತಿ ಇರಲಿಲ್ಲ. "ರೇಬೀಸ್ ರೋಗ ಬರುವುದಕ್ಕೂ ನಾಯಿ ಕಡಿತಕ್ಕೂ ಕೆಲವು ವೇಳೆ ಒಂದು ವರ್ಷವೋ ಅಥವಾ ಅದಕ್ಕಿಂತ ಅಧಿಕವಾಗಿಯೋ ಅಂತರವಿರುತ್ತದೆ. ಈ ಕಾಲಾವಧಿಯಲ್ಲಿ ಎಷ್ಟೋ ರೋಗಿಗಳು ತಮ್ಮನ್ನು ನಾಯಿ ಕಡಿದಿತ್ತೆಂಬುದನ್ನೆ ಮರೆತು ಬಿಟ್ಟಿರುತ್ತಾರೆ. ಇದರಿಂದ ವೈದ್ಯರಿಗೆ ಎಷ್ಟೋ ವೇಳೆ ನಾಯಿ ಕಡಿತದ ಮಾಹಿತಿ ದೊರೆಯುವುದೇ ಇಲ್ಲ" ಎಂಬ ಪಂಕ್ತಿಗಳನ್ನು ವೈದ್ಯಕೀಯ ಸಾಹಿತ್ಯದಲ್ಲಿ ಓದಿದ ಮೇಲೆ ರೋಗಿ ರೇಬೀಸ್ ರೋಗದಿಂದಲೇ ಸತ್ತಿದ್ದಾನೆ ಎಂಬ ಅವರ ನಿಲವು ಭದ್ರಗೊಂಡಿತು. ಇಷ್ಟಾದರೂ ಈ ನಿದಾನವೇ ತಮ್ಮ ಅಂತಿಮ ನಿರ್ಣಯವೆಂದು ಮುಂದಿಡಲು ಬೆನಿಟೆಸ್‌ರವರ ಮನಸ್ಸಿನಲ್ಲಿ ಇನ್ನೂ ಸ್ವಲ್ಪ ಅಳುಕು ಉಳಿದಿತ್ತು.

ಇಹಿ ಎಂಬ ಸಂಕೇತಾಕ್ಷರಗಳ ಆ ವ್ಯಕ್ತಿ ಯಾರು?

ಅಷ್ಟರಲ್ಲಿ ಒಂದು ಘಟನೆ ಜರಗಿತು. ಒಂದು ಸಂಜೆ ಡಾ| ಬೆನಿಟೆಸ್‌ರವರ ಸಹೋದ್ಯೋಗಿಯೊಬ್ಬರು ಅದೂ ಇದೂ ಮಾತನಾಡುತ್ತಾ, ನೀವು ಆ ರೋಗಿ ಯಾರೆಂದು ಬಲ್ಲಿರಾ ? ಎಂದು ಕೇಳಿದರು. ಇದುವರೆಗೆ ಡಾ| ಬೆನಿಟೆಸ್ ರೋಗಿಯ ರೋಗದ ಬಗೆಗಿನ ಮಾಹಿತಿಯಲ್ಲಿಯೇ ಮಗ್ನರಾಗಿ ಹೋಗಿದ್ದರು. ರೋಗಿಯ ಹೆಸರಿನ ಕಡೆಗೆ ಅಷ್ಟೊಂದು ಗಮನವನ್ನು ಹರಿಸಿರಲಿಲ್ಲ. ಅವರ ಸಹೋದ್ಯೋಗಿಗಳ ಪ್ರಶ್ನೆ ಅವರ ಗಮನವನ್ನು

ತ ಕಡೆ ಸೆಳೆಯಿತು. ಮತ್ತೊಮ್ಮೆ ರೋಗಿಯ ಮಾಹಿತಿ ದಾಖಲು ಪತ್ರದ ಮೇಲೆ ಜಾಗರೂಕತೆಯಿಂದ ಕಣ್ಣು ಹಾಯಿಸಿದರು. ಅಲ್ಲಿ ರೋಗಿಯ ಹೆಸರಿನ ಸಂಕೇತಾಕ್ಷರಗಳಾದ ಇಎಪಿ ಎಂಬ ಬರವಣಿಗೆಯ ಅಡಿಯಲ್ಲಿ "ಲೇಖಕರು, ಬಾಲ್ಟಿಮೋರ್ ನಗರ' ಎಂದು ಬರೆದಿದ್ದರು. ತತ್‌ಕ್ಷಣವೇ ಅವರಿಗೆ ಹೊಳೆಯಿತು- ಈ ಇಎಪಿ ಸಂಕೇತಾಕ್ಷರಗಳ ವ್ಯಕ್ತಿ 'ಎಡ್ಗರ್ ಅಲನ್ ಪೋ' ಇರಬೇಕೆಂದು .

ಎಡ್ಗರ್ ಅಲನ್ ಪೋ ಅಮೆರಿಕೆಯ ಭೂತಪೂರ್ವ ಸುಪ್ರಸಿದ್ಧ ಲೇಖಕರು. ಅವರು ಆಂಗ್ಲ ಕವಿಗಳಷ್ಟೇ ಅಲ್ಲ, ಆಧುನಿಕ ಪತ್ತೇದಾರಿ ಕಾದಂಬರಿಗಳ ಕ್ಷೇತ್ರದ ಮೂಲ ಪುರುಷರು ಕೂಡ. ಪತ್ತೇದಾರಿ ಕಾದಂಬರಿಗಳ ಭಯಂಕರ ಸನ್ನಿವೇಶಗಳ ಸೃಷ್ಟಿಯಲ್ಲಿ ಅಲನ್ ಪೋ ಸಿದ್ಧಹಸ್ತರು. ಅವರು ರಚಿಸಿರುವ "ರೇವನ್" ಎಂಬ ಪದ್ಯ ಬಹಳ ಪ್ರಸಿದ್ಧವಾದುದು. ಡಾ|ಬೆನಿಟೆಸ್ ಎಳೆಯವರಿದ್ದಾಗ ಎಡ್ಗರ್ ಅಲನ್ ಪೋ ರಚಿಸಿದ ರಕ್ತ ಹೆಪ್ಪುಗಟ್ಟುವಂಥ ಅನೇಕ ಕಥೆಗಳನ್ನು ಓದಿದ್ದರು.

ಸರಿ ಮುಂದಿನ ಹೆಜ್ಜೆ ಈ ಪ್ರಸಿದ್ಧ ಲೇಖಕನ ಜೀವನ ಪಥದ ಬಗೆಗಿನ ಮಾಹಿತಿ ಸಂಗ್ರಹಣೆ. ಡಾ|ಬೆನಿಟೆಸ್ ಸಾರ್ವಜನಿಕ ಗ್ರಂಥಾಲಯಕ್ಕೆ ಓಡಿದರು. ಅಲ್ಲಿ ಅಲನ್ ಪೋ ಅವರು ಬರೆದ ಕೃತಿಗಳನ್ನೆಲ್ಲಾ ಓದಲಾರಂಭಿಸಿದರು. ಅಲನ್ ಪೋ ಅವರದು ಅಲ್ಪಕಾಲದ ಬದುಕಾಗಿತ್ತು. ಆ ಅಲ್ಪಕಾಲದ ಜೀವಿತದಲ್ಲೂ ಅವರು ದುಃಖಮಯವಾದ ದಾರುಣ ಜೀವನವನ್ನು ನಡೆಸಿದ್ದರು. ೧೮೦೯ನೇ ಇಸವಿಯ ಜನವರಿ ೧೯ರಂದು ಜನಿಸಿದ ಅವರು ಮೂರು ವರ್ಷಗಳ ಎಳೆಯ ಹುಡುಗನಾಗಿದ್ದಾಗಲೇ ತಂದೆ ತಾಯಿಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದರು. ಮುಂದೆ ಅವರು ತಮ್ಮ ಸೋದರ ವರಸೆಯಸ್ತ್ರೀ ವರ್ಜೀನಿಯಾ ಕ್ಲೆಮ್ ಎಂಬಾಕೆಯನ್ನು ಮದುವೆಯಾಗಿದ್ದರೂ ಆಕೆ ಕ್ಷಯ ರೋಗ ಬಂದು ನರಳಿ-ನರಳಿ ಸತ್ತುಹೋಗಿದ್ದಳು. ಈ ನತದೃಷ್ಟ ಜೀವನದ ಛಾಯೆಯನ್ನು ಅವರ 'ದಿ ಪ್ರಿಮೆಚೂರ್ ಬರಿಯಲ್' ಮುಂತಾದ ಕಥೆಗಳಲ್ಲಿ ಗುರುತಿಸಬಹುದೇನೋ! ಈ ನಿರಾಶೆ, ಅತಿಪಾನದಿಂದುಂಟಾದ ಮನಃಖಿನ್ನತೆಯ ನಡುವೆಯೂ ಅವರ ಕೃತಿಗಳನೇಕವು ಅಲನ್ ಪೋ ಅವರ ಪ್ರಚಂಡ ಧೀಶಕ್ತಿಯನ್ನು ಪ್ರಚುರಪಡಿಸುತ್ತವೆ.

ಡಾ|ಬೆನಿಟೆಸ್ ಲೇಖಕ ಅಲನ್ ಪೋ ಅವರ ಅಂತಿಮ ದಿನಗಳ ಬಗೆಗೂ ಓದಿ ಮಾಹಿತಿ ಪಡೆದುಕೊಂಡರು. ಒಂದು ದಿನ ಬಾಲ್ಟಿಮೋರ್ ನಗರದ ಹೊಲಸು ಹೊಲಸಾಗಿ ಕಾಣುತ್ತಿದ್ದ ಪಾನಗೃಹ ಒಂದರಲ್ಲಿ ಅಲನ್ ಪೋ ಜ್ಞಾನ ತಪ್ಪಿ ಬಿದ್ದಿದ್ದರಂತೆ. ಆಗ ಅವರ ತಲೆಕೂದಲೆಲ್ಲಾ ಕೆದರಿ ಹೋಗಿ ಅಸ್ತವ್ಯಸ್ತವಾಗಿತ್ತು. ಬಟ್ಟೆ ಮಾಸಿ ಕೊಳಕು ಕೊಳಕಾಗಿತ್ತು. ಅಸಂಬದ್ಧವಾಗಿ ಏನೇನೋ ಬಡಬಡಿಸುತ್ತಿದ್ದ ಅವರನ್ನು ಯಾರೋ ವಾಷಿಂಗ್ಟನ್ ಕಾಲೇಜ್ ಆಸ್ಪತ್ರೆಗೆ ಒಯ್ದು ಸೇರಿಸಿದ್ದರು. ಅಲ್ಲಿ ಅವರಿಗೆ ಪ್ರಜ್ಞೆ ಹಿಂದಿರುಗಿತ್ತು. ಅನಂತರ ಭ್ರಮೆಗೆ ಒಳಗಾಗಿ 'ಗೋಡೆಯ ಮೇಲೆಲ್ಲಾ ದೆವ್ವಗಳನ್ನು ಭ್ರಮಿಸಿಕೊಂಡು ಕೂಗಾಡುತ್ತಿದ್ದರು. ಯಾರಾದರೂ ನನ್ನ ತಲೆಗೆ ಗುಂಡು ಹಾರಿಸಿ ಅದನ್ನು ಸಿಡಿದು ಹಾಕಿ' ಎಂದು ಒರಲುತ್ತಿದ್ದರು. ಕಡೆಗೆ ಹೀಗೆ ಅರಿವು-ಭ್ರಾಂತಿಗಳ ಮಧ್ಯೆ ಅನೇಕಬಾರಿ ತೊಳಲಾಡಿ, ಸ್ವಲ್ಪಕಾಲ ಸ್ತಬ್ಧರಾಗಿದ್ದು "ಭಗವಂತ ನೀನೇ ನನ್ನನ್ನು ಕಾಪಾಡಬೇಕು" ಎಂದು ಹೇಳಿ ಕಣ್ಣು ಮುಚ್ಚಿದ್ದರಂತೆ.

ಅಲನ್ ಪೋ ಅವರ ಅಂತ್ಯದ ಬಗ್ಗೆ ಬೇರೆ ಬೇರೆ ಲೇಖಕರ ಬರವಣಿಗೆಯನ್ನು ಪರಿಶೀಲಿಸಿದಾಗ ಅಲ್ಲಿ, ಇಲ್ಲಿ ಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ, ಡಾ| ಬೆನಿಟೆಸ್ ಪರೀಕ್ಷಿಸುತ್ತಿದ್ದ

ರೋಗಿಯ ಅಂತ್ಯದ ವಿವರಗಳನ್ನು ಅವು ಬಹುಮಟ್ಟಿಗೆ ಹೋಲುತ್ತಿದ್ದುವು. ಆದರೆ ಯಾರೂ ಎಡ್ಗರ್ ಅಲನ್‌ಪೋ ರೇಬೀಸ್ ರೋಗದಿಂದ ಸತ್ತನೆಂದು ಬರೆದಿರಲಿಲ್ಲ. ಇತಿಹಾಸಕಾರರ ದೃಷ್ಟಿಯಲ್ಲಿ ಅತ ೧೮೪೯ನೇ ಇಸವಿ ಅಕ್ಟೋಬರ್ ಏಳರಂದು ಮಿತಿ ಮೀರಿ ಕುಡಿದು ಪ್ರಾಣ ಬಿಟ್ಟಿದ್ದ.

ಸ್ವಲ್ಪ ದಿನಗಳ ನಂತರ ಸೇರಿದ ಸಿಪಿಸಿ ಗೋಷ್ಠಿಯಲ್ಲಿ ಡಾ। ಬೆನಿಟೆಸ್ ತಮ್ಮ ನಿಲುವನ್ನು ಸ್ಪಷ್ಟವಾಗಿ ಮಂಡಿಸಿದರು. ಬೇರೆಲ್ಲಾ ನಿದಾನಗಳ ಸಾಧ್ಯತೆಯನ್ನು ಹಂತ ಹಂತವಾಗಿ ತೊಡೆದು ಹಾಕಿ ಮಾಹಿತಿಯ ಸಾಕ್ಷ್ಯಾಧಾರಗಳಿಂದ ಆ ರೋಗಿ ರೇಬೀಸ್ ರೋಗದಿಂದಲೇ ಸತ್ತನೆಂದು ಪ್ರತಿಪಾದಿಸಿದರು. ಶ್ರೋತೃವೃಂದ ನಿಬ್ಬೆರಗಾಗಿ ಕೇಳುತ್ತಿತ್ತು. ಕೊನೆಯಲ್ಲಿ ಆ ರೋಗಿ ಬೇರೆ ಯಾರೂ ಅಲ್ಲದೆ ಅಮೆರಿಕದ ಪ್ರಸಿದ್ಧ ಕವಿ, ಸಾಹಿತಿ-ಎಡ್ಗರ್ ಅಲನ್‌ಪೋ ಎಂದು ಆಧಾರ ಸಹಿತವಾಗಿ ಅಧಿಕಾರವಾಣಿಯಿಂದ ನುಡಿದಾಗ ಇಡೀ ಸಭೆಯೇ ಕಿವಿಗಿಚ್ಚುವಂತೆ ಕರತಾಡನ ಮಾಡಿತು.

ಪ್ರಸಿದ್ಧ ಲೇಖಕನೊಬ್ಬನ ಸಾವಿನ ಬಗ್ಗೆ ಸಂಶೋಧನೆಯಿಂದ ಪುಷ್ಟಿಗೊಂಡ ಈ ಕುತೂಹಲಕಾರೀ ನೂತನ ರೋಗ ನಿದಾನವನ್ನು ಕುರಿತ ಲೇಖನಗಳು ಪತ್ರಿಕೆಗಳಲ್ಲೆಲ್ಲಾ ಪ್ರಕಟವಾದುವು. ವಿದ್ವಜ್ಜನರಲ್ಲಿ ಕೆಲವರಿಗೆ ದುರಂತಗಳಿಂದ ಕೂಡಿದ್ದ ಅಲನ್ ಪೋ ಅವರ ಜೀವನ ಕುಡಿತದ ಅಮಲಿನಲ್ಲಿ ಅಂತ್ಯವಾಯಿತು ಎಂಬ ಸಾಂಪ್ರದಾಯಿಕ ದೃಷ್ಟಿಯೇ ಬಣ್ಣ ಬಣ್ಣವಾಗಿ ಕಂಡು ಹೆಚ್ಚು ಹಿಡಿಸುತ್ತದೆ. ಆದರೆ ವೈದ್ಯಕೀಯ ಹಿನ್ನೆಲೆಯಿಂದ ಕೂಡಿದ ಡಾ। ಬೆನಿಟೆಸ್ ಅವರ ವಿಚಾರ ಸರಣಿ ಕೂಡಾ ಅನೇಕರಿಗೆ ಒಪ್ಪಿಗೆಯಾಗುತ್ತದೆ. ರೇಬೀಸ್ ರೋಗದಲ್ಲೇ ಹೆಚ್ಚು ಪರಿಣತರಾದ ಸೋಂಕು ರೋಗ ತಜ್ಞ ಡಾ। ಹೆನ್ರಿವೈಲ್ಡ್‌ರವರು ಎಡ್ಗರ್ ಅಲನ್ ಪೋ ಅವರಿಗೆ ಅಂತ್ಯಕಾಲದಲ್ಲಿ ರೇಬೀಸ್‌ನ ಸಮಸ್ತ ಲಕ್ಷಣಗಳೂ ಇದ್ದುವೆಂದು ನಂಬುತ್ತಾರೆ.

ಡಾ।ಬೆನಿಟೆಸ್ ತಮ್ಮ ಅನ್ವೇಷಣೆಯನ್ನು ಪ್ರಾರಂಭಿಸಿದ ಮೊದಲಿನಲ್ಲಿ ಅವರಿಗೆ ರೋಗಿ ಯಾರೆಂಬುದಾಗಲೀ, ಅವನ ಸಾವಿನ ಬಗ್ಗೆ ಬೇರೆಯವರ ದೃಷ್ಟಿ ಏನಾಗಿತ್ತೆಂಬುದಾಗಲೀ ತಿಳಿದಿರಲಿಲ್ಲ. ಇದರಿಂದ ಅವರು ಕುಡಿತದಿಂದಲೋ ಮಾದಕ ದ್ರವ್ಯ ಸೇವನೆಯಿಂದಲೋ ಸತ್ತರೆಂದು ನಂಬಲಾಗಿದ್ದ ಅಲನ್ ಪೋ ಅವರ ಅಂತ್ಯವನ್ನು ಯಾವ ಪೂರ್ವಾಗ್ರಹವೂ ಇಲ್ಲದೆ ವಿಶ್ಲೇಷಿಸಿದ್ದರು. ''ಈ ರೀತಿ ಆಧುನಿಕ ವೈದ್ಯರೊಬ್ಬರು ಅಲನ್ ಪೋ ಅವರ ಸಾವನ್ನು ಯಾವ ಪೂರ್ವಾಗ್ರಹವೂ ಇಲ್ಲದೆ ಪರಿಶೀಲಿಸಿರುವುದು ಇದೇ ಮೊದಲ ಬಾರಿ. ಡಾ। ಬೆನಿಟೆಸ್ ಅವರ ನಿದಾನದಲ್ಲಿ ವಿಶ್ವಾಸವಿಡಲು ಅಷ್ಟೇ ಸಾಕು''. ಎಂದು ಬಾಲ್ಟಿಮೋರ್‌ನ ಎಡ್ಗರ್ ಅಲನ್‌ಪೋ ಸಂಗ್ರಹಾಲಯದ ಕ್ಯೂರೇಟರ್ ಆಗಿರುವ ಜೆಫ್ ಜರೋಮ್ ಅಭಿಪ್ರಾಯ ಪಡುತ್ತಾರೆ.

ಸಾವಿನ ಒಗಟು ಬಿಡಿಸಿದ ಮೇಲೆ ಡಾ।ಬೆನಿಟೆಸ್‌ಗೆ ಅಲನ್‌ಪೋ ಮಹಾಶಯ ಕೊನೆಯುಸಿರೆಳೆದಿದ್ದ ಆಸ್ಪತ್ರೆಯ ಕೊಠಡಿಯನ್ನು ನೋಡಲು ಆಸಕ್ತಿ ಹುಟ್ಟಿತು. ಈಗ ವಾಷಿಂಗ್‌ಟನ್ ಕಾಲೇಜ್ ಆಸ್ಪತ್ರೆಯ ಹೆಸರನ್ನು ಬದಲಾಯಿಸಿ ಚರ್ಚ್ ಹೋಮ್ ಮತ್ತು ಆಸ್ಪತ್ರೆ ಎಂದು ಕರೆಯುತ್ತಾರೆ. ಅಲ್ಲಿ ಕೆಲಸ ಮಾಡುತ್ತಿದ್ದ ಡಾ।ಬೆನಿಟೆಸ್ ಅವರ ಸ್ನೇಹಿತನನ್ನು ವಿಚಾರಿಸಲಾಗಿ, ''ಈಗ ಆ ಅಲನ್ ಪೋ ಅವರ ಅಂತ್ಯವನ್ನು ಕಂಡ ಕೊಠಡಿ ಇನ್ನೂ ಉಳಿದಿಲ್ಲ. ಅದರ ಕಟ್ಟಡ ಬಿದ್ದು ಹೋಗಿ ಒಂದು ಗೋಡೆ ಮಾತ್ರ ಉಳಿದು ಕೊಂಡಿದೆ. ಆಗ ಮೇಲೇರಿ ಹೋಗಲು ಬಳಸುತ್ತಿದ್ದ

ಕಬ್ಬಿಣದ ಸುತ್ತು ಮೆಟ್ಟಿಲಿನ ಏಣಿ ಕಾಲಾಂತರದಿಂದ ಸವೆದು ಹೋಗಿದ್ದರೂ ಇನ್ನೂ ಉಳಿದಿದೆ. ಅದನ್ನು ಹತ್ತಿಕೊಂಡು ಹೋದರೆ ಆ ಗೋಡೆಯ ದರ್ಶನ ಪಡೆಯಬಹುದು '' ಎಂಬ ವಿವರಣೆ ಇತ್ತು.

ಮರಣೋತ್ತರ ಪರೀಕ್ಷೆಯ ಮಾಹಿತಿ ದೊರೆಯದೇ ಇರುವುದರಿಂದ ಎಡ್ಗರ್ ಅಲನ್ ಪೋ ಅವರ ಸಾವಿಗೆ ಕಾರಣವನ್ನು ನಿರ್ಧರಿಸಲು ಪುರಾವೆಗಳು ಸಂಪೂರ್ಣವಾಗಿ ನಮಗೆ ದೊರೆಯುವುದಿಲ್ಲ. ಆದರೂ ಡಾ।ಬೆನಿಟೆಸ್ ಅವರ ಸಂಶೋಧನೆ ಆ ಸುಪ್ರಸಿದ್ಧ ಆಂಗ್ಲ ಲೇಖಕನ ಅಂತ್ಯದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ರಹಸ್ಯ ಪತ್ತೇದಾರಿ ಕಾದಂಬರಿಗಳ ಕರ್ತೃ ಅಲನ್ ಪೋ ತಮ್ಮ ಕಥೆಗಳಲ್ಲಿಯ ಪಾತ್ರಗಳಂತೆ ತಮ್ಮ ಸಾವಿನ ಕಾರಣದ ಸುಳಿವನ್ನು ಉಳಿಸದೆಯೇ ಅದೃಶ್ಯರಾಗಿದ್ದಾರೆ.

ಮನಸುಬೆಳೆಯಲಿ ಭುಜಿಸಿ ನೂರುನೂರನುಭವವ
ಹೊಸಲು ನೂರೀ ಬಾಳ ಕಡಲಸುಬ್ಬಿಸಲಿ
ತನುಬಂಧ ಕಳಚಿ, ಜೀವವಖಂಡ ಚೇತನದ
ಕುಣಿತದಲಿ ಕೂಡಿರಲಿ ಮಂಕುತಿಮ್ಮ

ಇಂದಿಗೂ ನಮ್ಮ ದೇಶದಲ್ಲಿ ಪ್ರತಿವರ್ಷವೂ ಅನೇಕರು ಹುಚ್ಚುನಾಯಿ ಕಡಿದು ಬಂದಂಥ ರೇಬೀಸ್ ರೋಗಕ್ಕೆ ತುತ್ತಾಗಿ ಸಾಯುತ್ತಿದ್ದಾರೆ. ಇಂತ ಸಾವಿಗೆ ಜನರ ಅಸಡ್ಡೆಯೇ ಕಾರಣ. ಹುಚ್ಚುನಾಯಿಕಡಿದು, ರೇಬೀಸ್ ವಿಷಾಣು ನಮ್ಮ ಮಿದುಳನ್ನು ತಲುಪಿ, ನಮಗೆ ಮತಿಭ್ರಮಣೆಯಾಗುವ ತನಕ ಕಾದು ನಾವು ಸಾಯಬೇಕಿಲ್ಲ! ಯಾವ ನಾಯಿಯಾದರೂ ಕಡಿದ ಕೂಡಲೆ ವೈದ್ಯರಲ್ಲಿಗೆ ತೆರಳಿ ಕಚ್ಚಿದ ಗಾಯವನ್ನು ಶುದ್ಧಿಪಡಿಸಿಕೊಂಡು, ಲಸಿಕೆಗಳನ್ನು ಹಾಕಿಸಿಕೊಂಡರೆ ವಿಷಾಣು ಮಿದುಳನ್ನು ತಲುಪುವುದನ್ನು ತಡೆಯಬಹುದು. ಆಗ ರೇಬೀಸ್ ಬರುವುದಿಲ್ಲ. ಈಗಲಂತೂ ಬಹಳ ಪ್ರಭಾವ ಶಾಲಿಗಳಾದ ಊತಕಕೃಷಿಯಿಂದ ತಯಾರಿಸಿದ ಲಸಿಕೆಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.

ವಿಕಾಸವೇ ಬದುಕು. ಸಂಕೋಚವೇ ಮರಣ. ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.
-ಸ್ವಾಮಿವಿವೇಕಾನಂದ

ಪರಿಸರ ಸಂರಕ್ಷಣೆ ಮತ್ತು ಸಾವಯವ ಕೃಷಿ

ಎ.ಪಿ. ಚಂದ್ರಶೇಖರ
ಇಂದ್ರಪ್ರಸ್ಥ ಜೀವಧಾರಕ ಸಸ್ಯವಾಟಿ
ಕಳಲವಾಡಿ, ಉದ್ಬೂರು ಅಂಚೆ
ಮೈಸೂರು - ೫೭೦ ೦೦೮

"ಪರಿಸರ ಉಳಿಸಿ ಕಾಡು ಬೆಳೆಸಿ" ಇಂಥಾ ನೂರಾರು ಘೋಷಣೆಗಳು ಇಂದು ನಮ್ಮ ಮುಂದಿವೆ. ಓಝೋನ್ ಪದರ ನಾಶ, ಗಾಳಿಯಲ್ಲಿ ಇಂಗಾಲಾಮ್ಲದ ಹೆಚ್ಚಳ, ಇಳಿಯುತ್ತಿರುವ ಅಂತರ್ಜಲ, ವಿಷಪೂರಿತವಾಗುತ್ತಿರುವ ಆಹಾರ, ಹೀಗೆ ನಮ್ಮ ಪರಿಸರ ದಲ್ಲಿ ಸಮತೋಲ ತಪ್ಪಿರುವ ಬಗೆಗೆ ನೂರಾರು ದಾಖಲೆಗಳಿವೆ. ವೈಜ್ಞಾನಿಕ ವಿಶ್ಲೇಷಣೆಗಳಿವೆ. ಕೌಟುಂಬಿಕ, ಸಾಮಾಜಿಕ ಮುಂದುವರಿದು ಜಾಗತಿಕ, ಹಾಗಲ್ಲದೆ ಸಾಂಸ್ಕೃತಿಕ, ಶೈಕ್ಷಣಿಕ ಆರ್ಥಿಕ ಹೀಗೆ ಮಾನವನಿಗೆ ಇಂದು ಜೀವನದಲ್ಲಿ ನೂರಾರು ಸಮಸ್ಯೆಗಳಿವೆ. ಜೀವ ವೈವಿಧ್ಯಗಳು ನಾಶವಾಗುತ್ತಿವೆ. ಜೀವಧಾರಕ ಚಿಂತನೆಯುಳ್ಳವರನ್ನು ಚಿಂತೆಗೀಡುಮಾಡಿವೆ. ಎಂತಲೇ ಅಲ್ಲಲ್ಲಿ ಪರಿಸರ ಸಂರಕ್ಷಣೆಯ ಕುರಿತಾಗಿ ಸಭೆ, ಗೋಷ್ಠಿ, ಜಾಥಾ, ಚಟುವಟಿಕೆಗಳು ನಡೆಯುತ್ತಿವೆ.

ಹಾಳಾಗುತ್ತಿರುವ ನಮ್ಮ ಪರಿಸರದ ಕುರಿತಾದ ಜ್ಞಾನ, ಆ ಜ್ಞಾನದಪ್ರಸಾರ ಸಂತೋಷ. ಆ ಕುರಿತಾದ ಕಾಳಜಿಯೂ ಸಂತೋಷ. ಪರಿಸರ ಸಂರಕ್ಷಣೆಯ ಕುರಿತಾದ ಸಂವೇದನೆಯೂ ಸಂತೋಷವೆ. ಆದರೆ ಪರಿಸರ ಸಂರಕ್ಷಣೆಯ ಕುರಿತಾದ ಪ್ರಯತ್ನಗಳೆಲ್ಲಾ ಇಂದು ಮತ್ತೆ ಮತ್ತೆ ವಿಫಲವಾಗುತ್ತಾ ಪರಿಸರ ಹಂತಹಂತವಾಗಿ ಹಾಳಾಗುತ್ತಲೇ ನಡೆದಿದೆ. ನಾನು ಈಗಾಗಲೇ ಪಟ್ಟಿ ಮಾಡಿರುವ ಸಮಸ್ಯೆಗಳೆಲ್ಲಾ ಹೆಚ್ಚುತ್ತಲೇ ಸಾಗಿವೆ. ಹೀಗೇಕೆ? ನಮ್ಮನ್ನೂ ಒಳಗೊಂಡಂತೆ ಎಲ್ಲ ಜೀವಿಗಳೂ, ನಿರ್ಜೀವಿಗಳೂ ಇರುವ ನಮ್ಮ ಜೀವನಕ್ಷೇತ್ರವೇ ನಮ್ಮ ಪರಿಸರ. ಈ ಪರಿಸರದಲ್ಲಿ ನಮ್ಮನ್ನು ಹೊರತಾಗಿ ಪ್ರತಿಯೊಂದು ವಸ್ತುವೂ, ಜೀವಿಯೂ ಪ್ರಕೃತಿ ನಿಯಮದಂತೆಯೇ ವರ್ತಿಸುತ್ತವೆ. ಅವು ತಮ್ಮ ಜೀವಿತಾವಧಿಯಲ್ಲಿಪ್ರಕೃತಿಯನ್ನು ಹೆಚ್ಚು ಹೆಚ್ಚು ಜೀವಧಾರಕವನ್ನಾಗಿ ಮಾಡುತ್ತವೆ. ಸೌರಶಕ್ತಿಯನ್ನು ಹೆಚ್ಚು ಹೆಚ್ಚಾಗಿ ಸಂಗ್ರಹಿಸುತ್ತಾ ಪ್ರಕೃತಿಯನ್ನು ಸಬಲಗೊಳಿಸುತ್ತವೆ. ಪ್ರಕೃತಿಯ ಇಂಥಾ ಧನಾತ್ಮಕ ವಿದ್ಯಮಾನ ವನ್ನು ಋಣಾತ್ಮಕವಾಗಿ ಬದಲಾಯಿಸಿದವನು ಮಾನವ ಹಾಗೂ ಮಾನವ ಮಾತ್ರ.

ಪ್ರಕೃತಿಯಲ್ಲಿ ಎಲ್ಲ ಸಸ್ಯಗಳೂ ತಮ್ಮ ಆಹಾರವನ್ನು ತಾವೇ ತಯಾರಿಸುತ್ತಾ ತಿನ್ನುತ್ತಾ ಆ ಸಾಮರ್ಥ್ಯವಿಲ್ಲದ ನಮ್ಮಂಥಾ ಇತರ ಜೀವಿಗಳಿಗೆ ಆಹಾರವನ್ನು ಉಣಬಡಿಸುತ್ತವೆ. ಸಸ್ಯಗಳ ಹಾಗೂ ಇತರ ಯಾವುದೇ ಜೀವಿಗಳ ಜೀವನಕ್ಕೆ ಮಾನವನ ಅಗತ್ಯವಿಲ್ಲ. ಅವಲಂಬನೆ ಇಲ್ಲ. ಆದರೆ ಅವು ಇಲ್ಲದೆ ಮನುಷ್ಯನಿಗೆ ಬದುಕು ಸಾಧ್ಯವಿಲ್ಲ. ಹೀಗಿದ್ದಾಗ್ಯೂ ತಾನು ಬದುಕುವ ಅತಿ ಆಸೆಯಿಂದ ಮನುಷ್ಯ ಅವುಗಳ ಬದುಕನ್ನು ಕೆಡಿಸಿದ್ದರಿಂದ ನಮ್ಮ ಪರಿಸರ ಕೆಟ್ಟಿದೆ. ಪರಿಸರ ಹಾಳಾಗಿದೆ ಎಂದರೆ ನಮ್ಮ ಬದುಕು ಹಾಳಾಗಿದೆ ಎಂಬುದೇ ತಾತ್ಪರ್ಯ. ಪರಿಸರವನ್ನು ಸಂರಕ್ಷಿಸುವುದು ಎಂದರೆ ನಮ್ಮ ಬದುಕನ್ನು ಸಂರಕ್ಷಿಸುವುದು. ನಮ್ಮ ಬದುಕನ್ನು ತಿದ್ದುವುದು ಎಂಬ ಪರ್ಯಾಯ ಅರ್ಥಗಳು ಚಿಂತನೆಗಳು ನಮ್ಮಲ್ಲಿ ಇನ್ನೂ ಬಂದಂತಿಲ್ಲ. ಬದುಕಿನ ಮೌಲ್ಯವು

ತ್ಯಾಗವೇ ಹೊರತು ಭೋಗವಲ್ಲ ಎಂಬ ಆದರ್ಶ ಬೆಳೆಯದೆ ಪರಿಸರ ಸಂರಕ್ಷಣೆ ಎಂದೂ ಸಾಧ್ಯವಿಲ್ಲ.

ಉದಾಹರಣೆಗೆ, ಕಾರ್ಖಾನೆಗಳಿಂದ ಮಲಿನ ನೀರು ಹೊರಗೆ ಬಂದು ಜೀವನದಿಗೆ ಸೇರುತ್ತದೆ. ನೀರು ಕುಡಿಯಲು ಅನರ್ಹವಾಗುತ್ತದೆ. ಜಲಚರಗಳೆಲ್ಲಾ ಸಾಯುತ್ತವೆ. ಕೃಷಿಗೆ ಅಸಾಧ್ಯವಾಗುತ್ತದೆ ಎಂಬ ಪ್ರಶ್ನೆ ಬಂದಾಗ ಇಂದಿನ ವಿಜ್ಞಾನದ ಲಹರಿ ಹೀಗಿದೆ. ಮಲಿನ ನೀರನ್ನು ಶುದ್ಧಗೊಳಿಸಲು ಮತ್ತೊಂದು ತಂತ್ರವಿದ್ಯೆ ಸಿದ್ಧವಾಗುತ್ತದೆ. ಮಲಿನ ನೀರನ್ನು ಶುದ್ಧಗೊಳಿಸಲು ಪಕ್ಕದಲ್ಲೇ ಇನ್ನೊಂದು ಸ್ಥಾವರ ಸಜ್ಜುಗೊಳ್ಳುತ್ತದೆ. ಮಲಿನ ನೀರಿನಲ್ಲಿರುವ ವಿಷಗಳನ್ನು ಹೊರ ತೆಗೆಯುತ್ತಾರೆ. ಅದರಲ್ಲಿರುವ ಕಸಗಳನ್ನು ಹೊರತೆಗೆಯುತ್ತಾರೆ. ಅವಕ್ಕೆ ಆಮ್ಲಜನಕವನ್ನು ಸೇರಿಸುತ್ತಾರೆ. ಶುದ್ಧ ನೀರನ್ನು ಹೊಳೆ ನೀರಿಗೆ ಬಿಡುತ್ತಾರೆ. ಎಂಬಲ್ಲಿಗೆ ನಮಗೆಲ್ಲ ಸಂತೃಪ್ತಿ. ಪರಿಸರ ಮಾಲಿನ್ಯ ತಪ್ಪಿತು, ಹೊಳೆನೀರಿಗೆ ಶುದ್ಧ ನೀರೇ ಸೇರಿತು. ಭಲೇ ತಂತ್ರವಿದ್ಯೆ ಎಂದು ಬೀಗುತ್ತೇವೆ.

ಆದರೆ ವಿಷ ಸೃಷ್ಟಿಸುವ ತಂತ್ರವಿದ್ಯೆಗೆ ಪ್ರತಿಯಾಗಿ ವಿಷ ತೆಗೆಯುವ ಮತ್ತು ಪರಿಸರವನ್ನು ರಕ್ಷಿಸುವ ತಂತ್ರವಿದ್ಯೆಯೂ ಇದೆ ಎಂದು ನಂಬಿ ವಾದಿಸುವವರು ಕಣ್ಣು ತೆರೆದು ಪರಿಸರವನ್ನು ನೋಡಬೇಕು. ವೈಯಕ್ತಿಕದಿಂದ ತೊಡಗಿ ಅಂತಾರಾಷ್ಟ್ರೀಯ ಮಟ್ಟದ ವರೆಗಿನ ಸಮಸ್ಯೆಗಳನ್ನು ಕುರಿತು ನೇರವಾಗಿ ನೋಡಬೇಕು. ಪರಿಸರ ಸಮತೋಲನದ ಲಕ್ಷಣಗಳಾದ ಗಾಳಿ, ನೀರು, ಆಹಾರ, ಹಸುರು ಹೊದಿಕೆ, ಜೀವ ಸಮತೋಲಗಳ ಕುರಿತು ವಿಜ್ಞಾನ-ವೇದಾಂತಗಳನ್ನು ಸಮ್ಮಿಳಿಸಿ ಗಮನಿಸಬೇಕು. ತಂತ್ರವಿದ್ಯೆ ಬೆಳೆಯುತ್ತಿರುವಂತೆ ಒಂದೊಂದು ವಿಷಯವೂ ಗಂಭೀರ ಸಮಸ್ಯೆಗೆ ಕಾರಣವಾಗುವುದರ ಹಿನ್ನೆಲೆಯಲ್ಲಿರುವ ಪ್ರಕೃತಿ ರಹಸ್ಯವಾದರೂ ಏನು ? ವಾಸ್ತವವಾಗಿ ಪ್ರಕೃತಿಯ ಉಳಿವಿಗೆ ತಂತ್ರವಿದ್ಯೆ ಎಂಬುದು ಇಲ್ಲ. ಒಂದೊಂದು ತಂತ್ರವಿದ್ಯೆಯೂ ಪ್ರಕೃತಿ ನಾಶದ ಕ್ರಿಯೆಯೇ ಆಗಿದೆ. ಪ್ರಕೃತಿಯನ್ನು ಉಳಿಸುವ ಕಾರ್ಖಾನೆ ಎಂಬುದು ಇಲ್ಲ. ತನ್ನ ಜೀವನದ ಸಂತೋಷಕ್ಕೆ ಸುಲಭಕ್ಕೆ ಬೇಕೆಂದು ಮಾನವ ಬೆಳೆಸಿಕೊಂಡ ತಂತ್ರವಿದ್ಯೆಯ ಮಿತಿ ಇಂದು ವಿರುದ್ಧ ಗತಿಯನ್ನು ತಾಳಿರುವುದರಿಂದ ನಾವಿಂದು ಬಹಳಷ್ಟು ಕಾರ್ಖಾನೆಗಳನ್ನು ತ್ಯಜಿಸಿದ ಹೊರತು ಪರಿಸರದ ಉಳಿವು ಸಾಧ್ಯವೇ ಇಲ್ಲ. ಇದು ಪರಿಸರಕ್ಕಾಗಿ ಅಲ್ಲ, ನಮಗಾಗಿ ಎಂಬ ಅಂಶವನ್ನು ನಾವು ಮತ್ತೆ ಮತ್ತೆ ಗಮನಿಸಬೇಕಾಗಿದೆ.

ಮಲಿನ ನೀರನ್ನು ಶುದ್ಧೀಕರಿಸಲು ಇನ್ನೊಂದು ಸ್ಥಾವರ ರಚಿಸಿದ ಕಥೆಗೆ ಮತ್ತೊಮ್ಮೆ ಗಮನಹರಿಸೋಣ. ಇಲ್ಲಿ ಶುದ್ಧೀಕರಣ ಸ್ಥಾವರ ಎಂದರೆ ಒಂದು ಕಾರ್ಖಾನೆಯ ಹತ್ತಿರ ಇನ್ನೊಂದು ಕಾರ್ಖಾನೆ. ಈ ಶುದ್ಧೀಕರಣದ ಕಾರ್ಖಾನೆಗೆ ಎಷ್ಟೊಂದು ಕಟ್ಟಡ ಸಾಮಗ್ರಿಗಳು, ಎಷ್ಟೊಂದು ಯಂತ್ರ ತಂತ್ರಗಳು, ಎಷ್ಟೊಂದು ವಿದ್ಯುತ್ ಶಕ್ತಿ, ಎಷ್ಟೊಂದು ಜನರ ಕೆಲಸ, ಇವೆಲ್ಲ ಉಚಿತವಾಗಿ ಬರಲು ಸಾಧ್ಯವೇ ? ಈ ಎಲ್ಲ ಸಂಪತ್ತಿನ ಹಿಂದೆ ಎಷ್ಟೊಂದು ಪ್ರಕೃತಿ ಮತ್ತಷ್ಟು ಮತ್ತಷ್ಟು ನಾಶವಾಗುತ್ತದೆ ಎಂಬುದನ್ನು ಯೋಚಿಸಲಾರದ ಪರಿಸರ ಸಂರಕ್ಷಣೆ ಕಾರ್ಯಕ್ರಮಗಳು ಎಂದೂ ಸಂರಕ್ಷಣೆಯನ್ನು ಮಾಡಲು ಸಾಧ್ಯವಿಲ್ಲ. ನಿಸರ್ಗದಲ್ಲಿ ಬಿಟ್ಟಿ ಕೂಳಿಲ್ಲ!

ನಾವು ಬದುಕಿರಲು ಅಗತ್ಯವಾದ ಪರಿಸರದ ಉಳಿವಿಗಾಗಿ ನಾವು ತ್ಯಜಿಸಲೇಬೇಕಾದ ವಸ್ತುಗಳ ಪಟ್ಟಿ ಬಹಳ ದೊಡ್ಡದಿದೆ. ಟೂತ್ ಪೇಸ್ಟ್, ಡಿಟರ್ಜೆಂಟ್, ಶೇವಿಂಗ್ ಕ್ರೀಂ, ಐಸ್‌ಕ್ರೀಂ, ತಂಪುಪಾನೀಯಗಳು, ಸಿದ್ಧ ಆಹಾರಗಳು, ಬೇಕರಿ, ಹೋಟೆಲ್ ವಸ್ತುಗಳು ಸಮತೋಲ ತಪ್ಪಿಸುವ ಏರುಹಿಮ್ಮಡಿ ಚಪ್ಪಲಿಗಳು, ಉಸಿರುಕಟ್ಟಿಸುವ ಬೆವರು ಉಕ್ಕಿಸುವ ಮಾಂಸಹಿಂಡುವ ವಿಚಿತ್ರ ಬಟ್ಟೆಗಳು, ಸೊಂಟನೋವು ಬರಿಸುವ ಹಾಸಿಗೆಗಳು, ವಿದ್ಯುತ್ ದೀಪದ ಬೆಳಕಿನ-ಆಟೋಟಗಳು ಪಂದ್ಯಾಟಗಳು ಬದುಕಲು ಬೇಕಾಗದ ಮನೆಗಳು, ಕೃತಕ ಸಸ್ಯಕುಂಡಗಳು ಹೀಗೆ ಬಹಳಾ ಬಹಳಾ ಇವೆ. ಇಂದಿನ ಜೀವಮಾರಕ ಪರಿಸರದ ಪರಿಸ್ಥಿತಿಯ ಕುರಿತಾದ ನಿಜವಾದ ಜ್ಞಾನ ಹಾಗೂ ಕಾಳಜಿ ನಮ್ಮಲ್ಲಿ ಇರುವುದೇ ಹೌದಾದರೆ ಇವುಗಳನ್ನೆಲ್ಲಾ ಬಿಡುವುದು ಅನಿವಾರ್ಯವಾಗಿದೆ ಹಾಗೂ ಸುಲಭವೂ ಇದೆ. ಇವುಗಳಿಂದ ಜೀವನದಲ್ಲಿ ತೃಪ್ತಿ ಸಿಗುತ್ತದೆ ಎಂಬುದು ಕೇವಲ ಭ್ರಮೆಯಾಗಿದೆ. ತೋರಣಕ್ಕೆ ಮರುಳಾಗಿ ಹೂರಣವನ್ನು ಕಳೆದುಕೊಳ್ಳಬಾರದು!

ಇಂಥಾ ವಸ್ತುಗಳನ್ನು ಬಿಡುವುದರಿಂದ ವಿಷವನ್ನು, ಮಾಲಿನ್ಯವನ್ನು ಉತ್ಪತ್ತಿ ಮಾಡುವ ಸಾಕಷ್ಟು ಕಾರ್ಖಾನೆಗಳು ಕಡಿಮೆಯಾಗುತ್ತವೆ. ಮಾಲಿನ್ಯವನ್ನು ಕಡಿಮೆ ಮಾಡಿ ಪರಿಸರದ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ ಚಿಂತನೆ ಬಂದಾಗ ಅತ್ಯಂತ ಪ್ರಮುಖ ಪಾತ್ರವನ್ನು ಸಾವಯುವ ಕೃಷಿ ಅಥವಾ ಸಹಜ ಕೃಷಿ ವಹಿಸುತ್ತದೆ. ಇಂದು ಇರುವ ಕಾರ್ಖಾನೆಗಳಲ್ಲಿ ಶೇಕಡಾ ಐವತ್ತಕ್ಕಿಂತ ಹೆಚ್ಚು ಕಾರ್ಖಾನೆಗಳು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಕೃಷಿ ಸಂಬಂಧಿಗಳೇ ಆಗಿವೆ.

ಕೃಷಿ ಅಥವಾ ಬೀಜದ ಹುಟ್ಟು, ಬೆಳವಣಿಗೆ ಬೀಜೋತ್ಪತ್ತಿ ಸಾವಿನ ಕ್ರಿಯೆಗಳು ಪ್ರಕೃತಿಯಲ್ಲಿ ನಿರಂತರವಾಗಿ ಸ್ವಾಭಾವಿಕವಾಗಿ ನಡೆಯುವ ಕ್ರಿಯೆ. ಇದಕ್ಕೆ ನಿಜವಾಗಿ ಯಾವುದೇ ಸಹಾಯ ಅಷ್ಟಾಗಿ ಬೇಡ. ಯಾವುದೇ ಕಾರ್ಖಾನೆಯ ಪೋಷಣೆ ಇಂದಿನ ಮರ್ಜಿಯಲ್ಲಿ ಬೇಡ. ಈ ಬೇಡಗಳನ್ನು ಬೇಡಗೊಳಿಸಿದಾಗ ಹೇಗಿರಬಹುದು ಎಂಬುದನ್ನು ನೋಡಿ.

ಕೃಷಿ ಎಂಬ ಶಬ್ದವು ಕರ್ಷಣ ಎಂದರೆ ಕೆರೆತ ಎಂಬುದರಿಂದ ಬಂದಿದೆ. ಬೀಜ ಬಿತ್ತಬೇಕಾದರೆ ಭೂಮಿಯನ್ನು ಕೆರೆಯಬೇಕು ಎಂಬುದಕ್ಕಾಗಿ ಪಿಕ್ಕಾಸಿ, ಗುದ್ದಲಿ, ನೇಗಿಲು ಇತ್ಯಾದಿ ಬಂದುವು. ನಮ್ಮ ದೇಹದಲ್ಲಿ ಕಜ್ಜಿಯಾದಾಗ ಕೆರೆದರೆ ಸುಖವಾಗುತ್ತದೆ, ಹಿತವಾಗುತ್ತದೆ. ಆದರೆ ಕೆರೆತ ಅತಿಯಾದರೆ? ಪಿಕ್ಕಾಸಿ, ನೇಗಿಲುಗಳ ಹಿತವಾದ ಕೆರೆತ ಹೋಗಿ, ಉರಿಬರುವ, ರಕ್ತ ಸೋರುವ ಟ್ರ್ಯಾಕ್ಟರ್ ಕೆರೆತ ಇಂದು ಪ್ರಾರಂಭವಾಗಿದೆ. ಭೂಮಿಯ ಉಳುಮೆಗಾಗಿ ನೇಗಿಲು ಹಾಗೂ ಎತ್ತಿನ ಸ್ಥಾನವನ್ನು ಟ್ರ್ಯಾಕ್ಟರ್ ಆಕ್ರಮಿಸಿದ್ದರಿಂದ ಏನೇನು ಆಗಿದೆ ಎಂಬುದನ್ನಾದರೂ ಗಮನಿಸಿ. ಟ್ರ್ಯಾಕ್ಟರ್ ಎಂದರೆ ಮಾರಿಹಲುಬೆ, ಮಾರಿಗೌತಣ ನೀಡುವ ಶಿಲುಬೆ!

ನೇಗಿಲು ಒಂದು ಮರದ ತಯಾರಿ. ಅದನ್ನು ಊರ ಆಚಾರಿ ಬಹಳ ಸುಲಭವಾಗಿ ಮಾಡಬಲ್ಲ. ನೇಗಿಲಿಗಾಗುವ ಮರ ತನ್ನಷ್ಟಕ್ಕೆ, ಯಾವುದೋ ಹಕ್ಕಿಯ ಹಿಕ್ಕೆಯಾಗಿ, ಪ್ರಾಣಿಯ ಮಲವಾಗಿ, ಗಾಳಿಯಲ್ಲಿ ಹಾರುವ ಬೀಜವಾಗಿ ಎಲ್ಲೆಲ್ಲೋ ಹುಟ್ಟಿ ಬೆಳೆಯಬಲ್ಲುದು. ಇಂಥಾ ಬೆಳವಣಿಗೆಯೊಳಗೆ ಸೌರಶಕ್ತಿಯನ್ನು ಹೀರುವ ಕೆಲಸ ಮಾಡುವುದು. ಇತರ ಜೀವಿಗಳಿಗೆ ಶಕ್ತಿಯ ವರ್ಗಾವಣೆಯಾಗುವುದು. ಆದರೆ

ನೇಗಿಲಿಗಾಗುವ ಮರ ತನ್ನಷ್ಟಕ್ಕೆ ಹುಟ್ಟಿ ತಾನಾಗಿ ಬೆಳೆಯುವಂತೆ ಟ್ರಾಕ್ಟರ್ ಸೃಷ್ಟಿಗೊಳ್ಳಲಾರದಲ್ಲಾ!

ಟ್ರ್ಯಾಕ್ಟರಿಗೆ ಕಾರ್ಖಾನೆ ಬೇಕು. ಕಬ್ಬಿಣ ಇತ್ಯಾದಿ ಮೂಲವಸ್ತುಗಳಿಗಾಗಿ ಭೂಮಿ ಅಗೆಯಬೇಕು. ಹಳ್ಳಿಯಲ್ಲಿ ನೇಗಿಲು ಹಿಡಿಯಬೇಕಾದವರು ಟ್ರ್ಯಾಕ್ಟರ್ ಕಾರ್ಖಾನೆಯ ಕಾರ್ಮಿಕರಾಗಿ ಬರಬೇಕು. ಅವರಿಗಾಗಿ ಪೇಟೆ ಬೆಳೆಯಬೇಕು. ಹಳ್ಳಿಯಲ್ಲಿದ್ದಾಗ ಅವರ ಅಗತ್ಯಗಳನ್ನು ಅವರೇ ಪೂರೈಸಿಕೊಳ್ಳುತ್ತಿದ್ದರೆ ಪೇಟೆಯೊಳಗೆ ಅಂಥಾ ಅಗತ್ಯಗಳ ಪೂರೈಕೆಗಾಗಿ ನಗರಪಾಲಿಕೆ ಕೆಲಸ ಮಾಡಬೇಕು. ಕೃಷಿ ಗಿಡಗಳಿಗೆ ಗೊಬ್ಬರವಾಗಬೇಕಾದ ಪರಿಸರ ಸ್ನೇಹೀ ಮಲಮೂತ್ರಾದಿಗಳೆಲ್ಲಾ ಪರಿಸರ ಪ್ರದೂಷಣ ಕಷ್ಮಲವಾಗಿ ಪೇಟೆಗಳಲ್ಲಿ ಸಂಚಯಗೊಳ್ಳಬೇಕು. ಹಳ್ಳಿಗಳಲ್ಲಿ ಬೆಳೆದ ಆಹಾರ ವಸ್ತುಗಳು ಪೇಟೆಯ ಮಂದಿಗೆ ಡೀಸಿಲ್ ಹೊಗೆ ಕಕ್ಕುವ ಲಾರಿಗಳಲ್ಲಿ ಸಾಗಿ ಬರಬೇಕು. ನೇಗಿಲನ್ನು ತಯಾರಿಸುವ ವಿದ್ಯೆಗೆ ಆತನಿಗೆ ಶಾಲೆ ಬೇಡ, ಶಿಕ್ಷಣ ಬೇಡ. ಅದಕ್ಕಾಗಿ ಯಾವುದೇ ಖರ್ಚು ಬೇಡ. ಆದರೆ ಟ್ರ್ಯಾಕ್ಟರ್ ತಯಾರಿ ಶಿಕ್ಷಣಕ್ಕಾಗಿ ಎಷ್ಟೊಂದು ಜನರು ಕೆಲಸ ಮಾಡಬೇಕು? ಕಾಲೇಜುಗಳು ಬೇಕು? ಹೀಗೆ ಪೇಟೆಯ ಬಂಧಗಳು ಅಸಂಬದ್ಧವಾಗಿ ಬೆಳೆಯುತ್ತಾ ಹೋದಂತೆ ಮಾಲಿನ್ಯದ ತೀವ್ರತೆ ಏರುತ್ತಾ ಹೋಗುತ್ತದೆ.

ನೇಗಿಲ ಉಳುಮೆಗೆ ಎತ್ತು ಬೇಕು. ಈ ಪ್ರಕೃತಿಯಲ್ಲಿ ಮನುಷ್ಯ ಹೇಗೆ ಇರಬೇಕೋ ಹಾಗೇ ಎತ್ತುಗಳೂ ಇರಬೇಕು. ಮನುಷ್ಯನ ತನ್ನ ಇರುವಿಕೆಗಾಗಿ ಕನಿಷ್ಠ ಕೆರೆತವನ್ನು ಸ್ವಾಗತಿಸಿದಾಗ ಉಳುಮೆಗೆ ಎತ್ತುಗಳು ಉಪಯೋಗಿಸಲ್ಪಟ್ಟಾಗ ಪ್ರಾಕೃತಿಕವಾಗಿ ಇರುವ ಎತ್ತಿನ ಸದುಪಯೋಗವಾದಂತಾಗುತ್ತಿತ್ತು. ಹೇಗಾದರೂ ತಿಂದುಂಡ ಎತ್ತು ಇದೆ. ಅದು ಶಕ್ತವಾಗಿ ನಿಂತಿದೆ. ಅಂಥಾ ಎತ್ತನ್ನು ಉಳುಮೆಗೆ ಉಪಯೋಗಿಸಿದಾಗ ಶಕ್ತಿಯ ಉಪಯೋಗ ಮಾತ್ರ ಆಯಿತು. ಇಲ್ಲಿ ಶಕ್ತಿಯ ನಷ್ಟ ಇಲ್ಲ. ಆದರೆ ಟ್ರ್ಯಾಕ್ಟರಿಗೆ ಡೀಸಿಲ್ ಹಾಕಿದಾಗ ಶಕ್ತಿಯು ನಷ್ಟವಾಗುತ್ತದೆ. ನಮ್ಮ ದೇಶಕ್ಕೆ ಅತ್ಯಂತ ದೊಡ್ಡ ಹೊರೆಯಾದ ಡೀಸಿಲ್ ಭ್ರಷ್ಟವಾಗುತ್ತದೆ.

ಟ್ರ್ಯಾಕ್ಟರೂ ಉಳುಮೆ ಮಾಡುವಾಗ ಹೊಗೆ ಉಗುಳುತ್ತದೆ. ಪರಿಸರ ಪ್ರದೂಷಣೆ ಮಾಡುತ್ತದೆ. ಆದರೆ ಎತ್ತು ಉಳುಮೆ ಮಾಡುವಾಗ ಸಗಣಿ ಹಾಕುತ್ತದೆ. ಗಿಡಗಳಿಗೆ ಶಕ್ತಿ ಕಟ್ಟುತ್ತದೆ.

ಟ್ರ್ಯಾಕ್ಟರ್ ಉಳುಮೆಯ ಗಂಭೀರತೆಯನ್ನು ಮತ್ತಷ್ಟು ಗಮನಿಸಿ. ಟ್ರ್ಯಾಕ್ಟರ್ ಉದ್ದಿಮೆ ಬೆಳೆಯುತ್ತಿದ್ದಂತೆ ಹಣವು ಉದ್ಯಮಿಗಳಲ್ಲಿ ಸಂಚಯಿಸುತ್ತಾ ಹಳ್ಳಿಯ ಹಣ ಪೇಟೆ ಸೇರುತ್ತಾ ಸಂಚಯಿತ ಹಣವೇ ವಿಷವಾಗಿ ಕೆಲಸ ಮಾಡುವುದು. ಅತಿಯಾಗಿ ಸಂಚಯಗೊಂಡದ್ದು ಪ್ರತಿಯೊಂದೂ ವಿಷವೇ. ಈ ಹಣ ಅಥವಾ ವಿಷ ಮತ್ತೆ ಮತ್ತೆ ಪರಿಸರ ವಿನಾಶದ ಕೆಲಸಗಳನ್ನು ಮಾಡುತ್ತಾ ಸಾಗುವುದು.

ಹಳ್ಳಿಯ ಹಣದ ಜೊತೆಗೆ ಹಳ್ಳಿಯ ಜನವೂ ಪೇಟೆ ಸೇರುತ್ತಿರುವಂತೆ ಹಳ್ಳಿಯಲ್ಲಿ ಆಳುಗಳ ಸಮಸ್ಯೆ ಹೆಚ್ಚಿದಂತೆ ಟ್ರ್ಯಾಕ್ಟರಿನ ಅಗತ್ಯ, ಅನಿವಾರ್ಯತೆ ಹೆಚ್ಚುತ್ತಾ ಸಾಗಿವೆ. ಇಂದು ಹಳ್ಳಿಗಳಲ್ಲಿ ಹಸುಸಾಕಣೆ ಅಸಾಧ್ಯವೆಂಬ ಸ್ಥಿತಿಗೆ ತಲುಪಿದೆ. ಕೆಲವು ವರ್ಷಗಳ ಹಿಂದೆ ಇಪ್ಪತ್ತು ಸಾವಿರ ರೂಪಾಯಿಗಳಿದ್ದ ಜೋಡೆತ್ತಿನ ಬೆಲೆ ಇಂದು ಹತ್ತು ಸಾವಿರಕ್ಕಿಂತ ಕಮ್ಮಿಗೆ ಇಳಿದಿದೆ.

ಆಗಲೇ ತಿಳಿಸಿದಂತೆ ಟ್ರ್ಯಾಕ್ಟರ್‌ಗಳು ಹೊಗೆ ಉಗುಳುತ್ತಿದ್ದರೆ ಎತ್ತುಗಳು ಸಗಣಿ ಹಾಕುತ್ತವೆ. ಈ ಸಗಣಿ ಉತ್ತಮ ಗೊಬ್ಬರವಿದೆ. ಆದರೆ ಇಂದು ದನ ಸಾಕಲಾಗದ ಪರಿಸ್ಥಿತಿ ಮೇಲಾಗಿ

ಅಧಿಕ ಇಳುವರಿಯ ಭ್ರಾಮಕ ಹಾಗೂ ರಾಕ್ಷಸೀಯ ಪರಿಕಲ್ಪನೆಯನ್ನು ತುಂಬಿದ ದುಃಸ್ಥಿತಿ. ರಾಸಾಯನಿಕ ಗೊಬ್ಬರಗಳು ಸ್ಥಾನ ಗಿಟ್ಟಿಸಿಕೊಂಡವು.

ಗಮನಿಸಿ, ರಾಸಾಯನಿಕ ಗೊಬ್ಬರಗಳಿಗಾಗಿ ಇನ್ನೊಂದಷ್ಟು ಕಾರ್ಖಾನೆಗಳು, ಪೇಟೆಗಳು, ಮಧ್ಯೆ ಹಣ ಮಾಡುವ ಸೋಮಾರಿಗಳ ತಂಡಗಳು, ತಜ್ಞರೆಂದೂ, ತಂತ್ರಜ್ಞರೆಂದೂ, ವಿಜ್ಞಾನಿಗಳೆಂದೂ ಕರೆಸಿಕೊಳ್ಳುತ್ತಾ ರೈತನ ದುಡಿಮೆಯ ಫಲವನ್ನು ಸಂಬಳ ರೂಪದಲ್ಲಿ ಪಡೆಯುತ್ತಾ ಪರಿಸರ ಮಾರಕ ಪ್ರವೃತ್ತಿಯನ್ನು ಪೋಷಿಸುವವರು ಹೆಚ್ಚುತ್ತಲೇ ಇದ್ದಾರೆ. ರಾಸಾಯನಿಕ ಗೊಬ್ಬರದ ಕಾರಣವಾಗಿ ವರ್ಷ ವರ್ಷವೂ ಕೃಷಿ ಜಮೀನುಗಳು ಸಾಯುತ್ತಿವೆ. ಕೃಷಿಕರು ಸಾಯುತ್ತಿದ್ದಾರೆ ಜೊತೆ ಜೊತೆಯಾಗಿ.

ಟ್ರ್ಯಾಕ್ಟರ್‌ನ್ನು ಬಿಟ್ಟು ಮುಂದೆ ಹೋಗಲು ನನಗೆ ಮನಸ್ಸಿಲ್ಲ. ಅಷ್ಟಿದೆ ಅದರೊಳಗೆ ಆಕರ್ಷಣೆ. ನೇಗಿಲುಗಳು ಎರಡಿಂಚು ಮಣ್ಣನ್ನು ಕೆರೆದರೆ ಟ್ರ್ಯಾಕ್ಟರ್‌ಗಳು ಹನ್ನೆರಡಿಂಚು ಮಣ್ಣನ್ನು ಬಿಚ್ಚುತ್ತವೆ. ಪರಿಣಾಮವೇನು? ಮಳೆ ನೀರು ಕೊಚ್ಚಿಕೊಂಡು ಹೋಗುವ ಸತ್ವಯುತ ಮೇಲ್ಮಣ್ಣಿನ ಪ್ರಮಾಣ (ಗಮನಿಸಿ-ಒಂದಿಂಚು ಮೇಲ್ಮಣ್ಣು ತಯಾರಾಗಲು ಒಂದು ಸಾವಿರ ವರ್ಷ ಬೇಕು!) ಹಲವು ಹತ್ತು ಪಟ್ಟು ಹೆಚ್ಚು. ಸತ್ವಯುತ ಕೃಷಿ ಮಣ್ಣು ಹೋಯಿತು ಎಂಬಲ್ಲಿಗೆ ನಿಲ್ಲಿಸೋಣವೇ? ಈ ಮೇಲ್ಮಣ್ಣು ನಮ್ಮ ಜಲವಾಹಿನಿಗಳಲ್ಲಿ ಹೂಳಾಗಿ ತುಂಬುವುದು. ಕೆರೆಗಳು ಮುಚ್ಚಿ ಅಂಗಳಗಳಾಗುವುವು. ಅಂತರ್ಜಲ ವ್ಯವಸ್ಥೆ ಕುಸಿಯುವುದು. ನೀರೆಲ್ಲವೂ ರಾಸಾಯನಿಕ ಮಯವಾಗುವುದು.

ಭೂಮಿಯ ಉಳುಮೆಗೆ ಸ್ವಾಭಾವಿಕ ವ್ಯವಸ್ಥೆ ಇದೆ. ಸೂಕ್ಷ್ಮಾತಿಸೂಕ್ಷ್ಮ ಬ್ಯಾಕ್ಟೀರಿಯಾಗಳಿಂದ ಹಿಡಿದು, ಎರೆಹುಳು, ಏಡಿ, ಮಣ್ಣಹಾವು, ಇಲಿ, ಮುಂಗುಸಿ, ಹೀಗೆ ಪ್ರಕೃತಿಯಲ್ಲಿ ನೂರಾರು ಸುಸಂಬದ್ಧ ವ್ಯವಸ್ಥೆ ಇದೆ. ಇದನ್ನೆಲ್ಲಾ ಟ್ರ್ಯಾಕ್ಟರಿನ ಭಾರೀ ಉಳುಮೆ ನಾಶ ಮಾಡುತ್ತದೆ. ಪ್ರಕೃತಿಯಲ್ಲಿ ಸ್ಪಷ್ಟ ಉದ್ದೇಶಗಳಿಂದ ಚಿತ್ರಿಸಲ್ಪಟ್ಟ ಗರಿಕೆ, ಕೊನಾರಿ, ಕಾಡುತುಳಸಿ ಇತ್ಯಾದಿ ವೈಶಿಷ್ಟ್ಯಪೂರ್ಣ ಕಳೆಗಳನ್ನು ಟ್ರ್ಯಾಕ್ಟರ್ ನಾಶ ಮಾಡುತ್ತಾ ಪಾರ್ಥೇನಿಯಮ್‌ನಂಥಾ ಕನಿಷ್ಠ ದರ್ಜೆಯ ಕಳೆಗಳು ಅನಿವಾರ್ಯವಾಗುವಂತೆ ಮಾಡಿದೆ.' ಇಷ್ಟೆಲ್ಲಾ ಮಾಡಿದ ಟ್ರ್ಯಾಕ್ಟರ್ ಭೂಮಿಯನ್ನು ನಿಜವಾಗಿಯೂ ಸುಸೂಲು (ಸಡಿಲ) ಗೊಳಿಸುತ್ತದೆಯೇ ಎಂದು ಕೇಳಿದರೆ ಉತ್ತರ ನಕಾರಾತ್ಮಕವೇ. ಎತ್ತಿನ ತೂಕ ಮೂರು ಕ್ವಿಂಟಾಲ್ ಆದರೆ ಟ್ರ್ಯಾಕ್ಟರಿನ ತೂಕ ಮೂವತ್ತು ಕ್ವಿಂಟಾಲ್. ವಿಷವೆಂದರೆ ಏನು? ಯಾವುದೇ ವಿಷಯ ಅಥವಾ ವಸ್ತು ಅತಿಯಾಗಿ ಸಾಂದ್ರೀಕೃತಗೊಂಡರೆ ಅದು ವಿಷ ಎಂಬ ಮಾತನ್ನು ಮತ್ತೆ ಮತ್ತೆ ಗಮನಿಸಿ. ಅತಿ ತೂಕದ ಟ್ರ್ಯಾಕ್ಟರಿನ ತೂಕವನ್ನು ತಾಳಲಾಗದೆ ಭೂಮಿಯು ಐದಡಿ ಆಳದವರೆಗೆ ಬಿಗಿಗೊಳ್ಳುತ್ತಾ ಹೋಗುತ್ತವೆ. ವರ್ಷಗಳು ಕಳೆದಂತೆ ಸಸ್ಯಗಳು ಸಂಕಷ್ಟವನ್ನು ಅನುಭವಿಸುತ್ತವೆ.

ಆಧುನಿಕ ಕೃಷಿಯ ಮತ್ತೊಬ್ಬ ಅಪರಾಧಿ ಸಂಕರ ಬೀಜ. ಪ್ರಾಕೃತಿಕ ಬೀಜಗಳನ್ನು ಅಂದರೆ ತಾವಾಗಿ ಹುಟ್ಟುವ ಬೀಜಗಳನ್ನು, ಷಂಡ(ನಪುಂಸಕ) ಬೀಜಗಳಾಗಿ ಪರಿವರ್ತಿಸುವ ವಿಧಾನವೇ ಬೀಜತಂತ್ರವಿದ್ಯೆ (Seed technology) ಎಂದರೆ ಈ ಬಗ್ಗೆ ಖುದ್ದು ಅನುಭವವಿರುವವರಿಗೆ ಆಶ್ಚರ್ಯವಾಗದು.

ಮತ್ತೆ ಈ ಷಂಡಬೀಜಗಳ ತಯಾರಿಕೆಗೆ ಕಾರ್ಖಾನೆ, ಮಾರಾಟಕ್ಕೆ ಪೇಟೆ, ಬಿತ್ತಿದಾಗ ಉಪಯೋಗಿಸಲು ಕೃತಕ ರಾಸಾಯನಿಕಗಳು-ವಿಷಪತ್ರ್ಕಾಲಿ ಬೆಳೆಯುತ್ತದೆ. ಫಸಲು ಕಡಿಮೆ, ರುಚಿ ಇಲ್ಲ, ಹಣ, ಶ್ರಮ ಹೂಡಿಕೆ ಅಧಿಕ-ಕೊನೆಗೆ ಷಂಡನಾಗುವುದು. ಈ ಬಿಸಿಲ್ಗುದುರೆಯನ್ನು ನಂಬಿದ ಮುಗ್ಧ ರೈತ.

ನಮ್ಮ ದೇಹ ಹಾಗೂ ಬುದ್ಧಿ ಅತ್ಯಂತ ಸಮರ್ಥ ಸಾವಯುವ ವಸ್ತುಗಳಾಗಿವೆ. ಇವನ್ನು ಉಪಯೋಗಿಸಿ ಮಾಡುವ ಕೃಷಿಯೇ ಸಾವಯುವ ಕೃಷಿ. ಇಂಥಾ ಕೃಷಿಯಲ್ಲಿ ಉತ್ಪಾದಕ ಮತ್ತು ಗ್ರಾಹಕರ ನಡುವೆ ಅಂತರ ಕಡಿಮೆಯಾಗುತ್ತಾ ಹೋಗುತ್ತದೆ. ಉತ್ಪಾದಕನೇ ಗ್ರಾಹಕನೂ ಆಗುತ್ತಾನೆ. ತನ್ನ ಜೀವನಾವಶ್ಯಕತೆಗಳನ್ನು ತಾನೇ ಉತ್ಪಾದಿಸುವ ಸ್ಥಿತಿಗೆ ಕೃಷಿಕ ತಲುಪುತ್ತಾನೆ. ಗ್ರಾಹಕ-ಉತ್ಪಾದಕ. ಪೇಟೆ-ಹಳ್ಳಿ ಅಂತರ ಕಡಿಮೆಯಾದಾಗಲೇ ಪರಿಸರದ ಪ್ರದೂಷಣೆ ತಪ್ಪಲು ಸಾಧ್ಯ. ಕೃಷಿಗೆ ರಾಸಾಯನಿಕ ಒಳಸುರಿಗಳ ಬದಲಾಗಿ ಸಾವಯುವ ಸಂಪನ್ಮೂಲಗಳ ಅಗತ್ಯ, ಅನಿವಾರ್ಯತೆ, ಯೋಗ್ಯತೆ ತಿಳಿದಾಗ ಹಸುರಿಗೆ ಮಹತ್ವ ಬರುತ್ತದೆ. ಕಳೆಗಳಿಗೆ ಗೌರವ ಸಿಗುತ್ತದೆ. ಶುದ್ಧಗಾಳಿ, ಶುದ್ಧನೀರು, ಶುದ್ಧ ಆಹಾರ ಸಿಕ್ಕಾಗ ಶುದ್ಧ ಚಿಂತನೆ ಪ್ರಾರಂಭವಾಗುತ್ತದೆ. ಶುದ್ಧ ಚಿಂತನೆ ಬೆಳೆದಾಗ -ಆಗೊಮ್ಮೆ ಪಟ್ಟಿಮಾಡಿದೆನಲ್ಲಾ-ನಾವು ತ್ಯಜಿಸಬೇಕಾದದ್ದು-ಡಿಟರ್ಜೆಂಟ್, ಐಸ್‌ಕ್ರೀಂ ಇತ್ಯಾದಿಗಳೆಲ್ಲಾ ನಮಗೆ ಬೇಡದ ವಸ್ತುಗಳೆಂದು ನಮಗಾಗಿಯೇ ಅನಿಸುತ್ತವೆ. ಇಂಥಾ ಸುಸಂಬದ್ಧ ಚಿಂತನ ವಿರಣಿಯೊಳಗೆ, ಜೀವನ ಶೈಲಿಯೊಳಗೆ ನಾವೆಲ್ಲ ನಮ್ಮ ಸಮಸ್ಯೆಗಳನ್ನು ಕಳೆದುಕೊಂಡು ಪರಸ್ಪರ ಸೋದರ ಭಾವದಿಂದ ಸಹಬಾಳ್ವೆ ಮಾಡುವ ಭವಿಷ್ಯವನ್ನು ನಿರೀಕ್ಷಿಸೋಣ.

ಸಾವಯುವ ಬೇಸಾಯವೆಂದು ಹೀಗಳೆಯದಿರು
ಜೀವಧಾರಕ-ಪೋಷಕವದು ನಿನ್ನುಸಿರು ನಿಜ ಪ-
ರಾವಲಂಬನೆ ತೊಡೆದು ಸ್ವಾವಲಂಬನೆ ಬೆಸೆವ
ಭಾವಸಂದೀಪ್ತಿ ಸಂಜೀವಿನೀ ಅತ್ರಿಸೂನು



ರುದ್ರ ಮನೋಹರ ಗ್ರ್ಯಾಂಡ್ ಕ್ಯಾನಿಯನ್: ಒಂದು ಪ್ರವಾಸ ಕಥನ

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೧, ಚಾಮುಂಡಿಪುರಂ
ಮೈಸೂರು-೫೭೦ ೦೦೪

ನಾನು, ನನ್ನ ಪತ್ನಿ ೧೯೯೩ರಲ್ಲಿ ಅಮೆರಿಕಕ್ಕೆ ಹೋಗಿದ್ದಾಗ ಅತ್ಯದ್ಭುತವೆನಿಸಿದ ನಯಾಗರ ಹಾಗೂ ಸುಪ್ರಸಿದ್ಧ ಹಾಲಿವುಡ್ ನಲ್ಲಿರುವ ಡಿಸ್ನಿಲ್ಯಾಂಡ್ ಹಾಗೂ ಯೂನಿವರ್ಸಲ್ ಸ್ಟುಡಿಯೋ ನೋಡಿ ಪುಲಕಿತರಾಗಿದ್ದೆವು. ವಿಶ್ವದ ಏಳು ನೈಸರ್ಗಿಕ ವಿಸ್ಮಯಗಳಲ್ಲೊಂದು ಎಂದು ಹೆಸರಾದ ಗ್ರ್ಯಾಂಡ್ ಕ್ಯಾನಿಯನ್ ಅನ್ನು ನಾವು ನೋಡಲಾಗಿರಲಿಲ್ಲ. ಅದನ್ನು ನೋಡದಿರುವುದು ಮನದಾಳದಲ್ಲಿ ಕೊರೆಯುತ್ತಿತ್ತು. ಅದನ್ನು ನೋಡುವ ಅವಕಾಶ ನಮಗಾದದ್ದು ೨೯-ಮೇ-೧೯೯೯ ರಂದು. ಆರಿಜೋನ ರಾಜ್ಯದ ರಾಜಧಾನಿ ಫೀನಿಕ್ಸ್ ನಿಂದ ಗ್ರ್ಯಾಂಡ್ ಕ್ಯಾನಿಯನ್ ೩೫೭ ಕಿಮೀ ದೂರ. (ನಾವಿರುವ ಚಾಂಡಲರ್‌ನಿಂದ ಸುಮಾರು ೩೮೪ ಕಿಮೀ) ಕಾರಿನಲ್ಲಿ ಸುಮಾರು ನಾಲ್ಕು ಗಂಟೆ ಪ್ರಯಾಣ.

ಅಂದು ಬೆಳಗ್ಗೆ ೬ ಗಂಟೆ. ನಮಗೆ ಬೇಕಾದ ಉಪಾಹಾರ, ಕಾಫಿ, ಮಧ್ಯಾಹ್ನದ ಊಟ ಎಲ್ಲವನ್ನು ಸೊಸೆ ತಯಾರಿಸಿ ಕಾರಿನ 'ಬೂಟ್'ನಲ್ಲಿಟ್ಟಳು. ಸೊಸೆ ಮತ್ತು ಮೊಮ್ಮಗಳಿಗೆ 'ಬೈ'ಹೇಳಿ ನಾವು ಕಾರು ಹತ್ತಿದೆವು. ಮಗ ವಿಶ್ವ ಡ್ರೈವರ್ ಸೀಟು ಏರಿದ. ಕಾರು ನಿಧಾನವಾಗಿ ಚಲಿಸಿತು. ಟೇಪ್ ರೆಕಾರ್ಡ್‌ನಿಂದ ಸುಪ್ರಭಾತದ ಹಾಡುಗಳು, ಕಿಟಕಿ ಮೂಲಕ ಬರುವ ತಂಗಾಳಿ. ಸುಮಾರು ೧೬೦ ಕಿಮೀ ಮೈಲಿ ಪ್ರಯಾಣಿಸಿದ ಮೇಲೆ ರಸ್ತೆಯ ಪಕ್ಕದಲ್ಲಿ ವೃಕ್ಷಗಳ ಮಧ್ಯೆ ಇದ್ದ ತಂಗುದಾಣದಲ್ಲಿ ಕುಳಿತು ನಾವು ತಂದಿದ್ದನ್ನು ತಿಂದು ಕಾಫಿ ಕುಡಿದೆವು. ಸುಮಾರು ಕಾಲು ಗಂಟೆ ಕಾಲಾಡಿಸಿದ ನಂತರ ನಮ್ಮ ಪ್ರಯಾಣ ಮುಂದುವರೆಯಿತು.

ನಾವು ಕ್ಯಾನಿಯನ್‌ಗೆ ಬಂದಾಗ ಸಮಾರು ೧೧ ಗಂಟೆ. ಕಾರನ್ನು ಸ್ಟಾಂಡ್‌ನಲ್ಲಿ ನಿಲ್ಲಿಸಿ ಪಕ್ಕದ ಹೋಟೆಲ್‌ನಲ್ಲಿ ಕಾಫಿ ಕುಡಿದು ಗ್ರ್ಯಾಂಡ್ ಕ್ಯಾನಿಯನ್ ಅನ್ನು ನೋಡಲು ಹೊರಟೆವು. ಅಂದ ಹಾಗೆ, ಗ್ರ್ಯಾಂಡ್ ಕ್ಯಾನಿಯನ್ ಎಂಬುದು ಏನು? ಅದು ಏಕೆ ಇಷ್ಟು ಪ್ರಸಿದ್ಧಿ?

ಅದೊಂದು ಭಾರಿ ಕೊರಕಲು, ಊಹಿಸಲಾರದಷ್ಟು ದೊಡ್ಡದು- ಉದ್ದ ೪೪೩ ಕಿಮೀ, ೨೯ಕಿಮೀ ಅಗಲ, ಮೇಲೆ ರಿಮ್‌ನಿಂದ ಪಾತಾಳದಲ್ಲಿ ಹರಿಯುವ ನದಿಗೆ ಒಂದು ಮೈಲಿ ಆಳ. ಆಳ ಮತ್ತು ಅಗಲ ಅಲ್ಲಲ್ಲಿ ವ್ಯತ್ಯಾಸವಾಗಬಹುದು. ಲಕ್ಷಾಂತರ ವರ್ಷಗಳ ಹಿಂದೆ ಕೊಲೊರಾಡೋ ನದಿ ತನ್ನ ಪಾತ್ರವನ್ನು ಕೊರೆದು ಈ ಕೊರಕಲನ್ನು ಮಾಡಿತು ಎನ್ನುತ್ತಾರೆ. ಕೊರಕಲಿನ ಎರಡು ಪಾರ್ಶ್ವಗಳಲ್ಲೂ ಬಣ್ಣದ ಕಲ್ಲುಗಳಿಂದಾದ ಕಲ್ಲಿನ ಗೋಡೆ. ಬಣ್ಣದ ಕಲ್ಲಿನ ಪದರಗಳು ಭೂಮಿಯ ಇತಿಹಾಸವನ್ನು ತಿಳಿಸುತ್ತದೆ. ಆದಿವಾಸಿಗಳು ಕೊರಕಲನ್ನು ಕೈಬಬ್ (Kaibab) 'ಮಲಗಿರುವ ಪರ್ವತ' ಎಂದು ಕರೆದರೆ ಜಾನ್ ವೆಸ್ಲಿ ಪೋವೆಲ್ ೧೮೬೯ರಲ್ಲಿ ಇದಕ್ಕೆ ಗ್ರ್ಯಾಂಡ್ ಕ್ಯಾನಿಯನ್ ಎಂದು ಹೆಸರಿಟ್ಟ. ಹೆಸರೇನೇ ಇರಲಿ ಇದೊಂದು ವಿಸ್ಮಯ. ೪೦೦೦ ವರ್ಷಗಳ ಹಿಂದೆಯೇ ಬೇಟೆಯಾಡಿ ಜೀವಿಸುತ್ತಿದ್ದ ಜನರು ಇದರಲ್ಲಿರುವ ಗುಹೆಗಳಲ್ಲಿ ವಾಸವಾಗಿದ್ದರೆಂದು ಗೊತ್ತಾಗಿದೆ.

ಗ್ರ್ಯಾಂಡ್ ಕ್ಯಾನಿಯನ್ ಅನ್ನು ಭೌಗೋಳಿಕವಾಗಿ ಮೂರು ಭಾಗಗಳಾಗಿ ಮಾಡಬಹುದು-ಸೌತ್ ರಿಮ್, ನಾರ್ತ್ ರಿಮ್ ಮತ್ತು ಇನ್ನರ್ ಕ್ಯಾನಿಯನ್ . ನಾವು ಸೌತ್ ರಿಮ್‌ನಿಂದ ಈಸ್ಟ್ ರಿಮ್ ಮತ್ತು ವೆಸ್ಟ್ ರಿಮ್‌ಗಳಿಗೆ ಷಟಲ್ ಬಸ್‌ಗಳಲ್ಲಿ ಹೋಗಿ, ಬೇರೆ ಬೇರೆ ವ್ಯೂ ಪಾಯಿಂಟ್ಸ್‌ಗಳಿಂದ ಕೊರಕಲನ್ನು ಬಗ್ಗಿ ನೋಡಿದೆವು. ಸಾವಿರಾರು ಅಡಿ ಆಳ, ಮಧ್ಯೆ ಮಧ್ಯೆ ಸ್ವಲ್ಪ ಭಾಗ ಇಟ್ಟಿಗೆ ತೆಗೆದಿರುವ 'ಇಟ್ಟಿಗೆ ಗೂಡಿ'ನಂತೆ ಕಾಣುವ ಎತ್ತರದ ಕಲ್ಲು ದಿಣ್ಣೆಗಳು. ಅವುಗಳ ಬಣ್ಣ ಕೆಲವು ಕಡೆ ಬಿಳಿ, ಕೆಲವು ಕಡೆ ಕೆಂಪು, ಹಸಿರು. ಅವುಗಳ ಬಿರುಕುಗಳಲ್ಲಿ ವಿವಿಧ ರೀತಿಯ ಸಸ್ಯಗಳು, ಪಾತಾಳದಲ್ಲಿ ಬಚ್ಚಲಿನಂತೆ ಹರಿಯುವ ಆದರೆ ನಿಜವಾಗಿಯೂ ಅಗಾಧ ವಾದ ಕೊಲೊರ್‍ಯಾಡೊ ನದಿ. ಈ ಅಸದೃಶ ದೃಶ್ಯವನ್ನು ಕಂಡ ಕೂಡಲೇ ನಮ್ಮ ಬಾಯಿಯಿಂದ ಬಂದದ್ದು-ಎಷ್ಟು ರುದ್ರ ಮನೋಹರ!

ಕೆಲವು ಉತ್ಸಾಹಿ ಪ್ರೇಕ್ಷಕರು, ಯುವಕ ಯುವತಿಯರು ನಡೆದು ಅಥವಾ ಹೇಸರ ಕತ್ತೆ ಕುದುರೆಗಳ ಮೇಲೆ ಇನ್ನರ್ ಕ್ಯಾನಿಯನ್‌ಗೆ ಹೋಗಿ ಬರುತ್ತಾರೆ. ಯಾಕಿ ಪಾಯಿಂಟ್ ಎಂಬ ಜಾಗದಿಂದ ೪೬೨೦ ಅಡಿ ಕೆಳಗಿರುವ ಕೊಲೊರ್‍ಯಾಡೊ ನದಿಗೆ ಕೈಬಬ್ ಟ್ರೇಲ್ ಮೂಲಕ ಇಳಿದು ಬರಬಹುದು. ಸುಮಾರು ೧೧ಕಿಮೀ. ದೂರ , ಕಡಿದಾದ ರಸ್ತೆ. ಬ್ರೈಟ್ ಏಂಜೆಲ್ ಟ್ರೇಲ್ ಮೂಲಕ ಕೆಳಗಿಳಿಯಲು ೧೪ಕಿಮೀ. ಹೀಗೆ ಹತ್ತಿ ಇಳಿಯುವುದು ಶ್ರಮ. ಸದರನ್ ರಿಮ್ ಸಮುದ್ರ ಮಟ್ಟಕ್ಕೆ ೭೦೦೦ ಅಡಿ ಎತ್ತರದಲ್ಲಿದ್ದರೆ ಸಾವಿರಾರು ಅಡಿ ಕೆಳಗೆ ನದಿ. ವಾತಾವರಣದಲ್ಲಿ ಆಗುವ ಬದಲಾವಣೆ, ಕಡಿದಾದ ರಸ್ತೆ ಕೆಳಗೆ ಇಳಿದು ಬರಲು ಕಷ್ಟವೆನಿಸುತ್ತದೆ. ಆದರೆ ಇನ್ನರ್ ಕ್ಯಾನಿಯನ್‌ನಲ್ಲಿ ಪ್ರಾಣಿ ಪಕ್ಷಿ ಸಸ್ಯಗಳನ್ನು ನೋಡಬಹುದು. ರ್‍ಯಾಟಲ್ ಸ್ನೇಕ್, ಚುಕ್ ವಾಲ, ಶಾರ್ಟ್ ಹಾರ್ನ್ಡ್ ಲಿಜಾರ್ಡ್, ಕಯಟ, ಡಿಯರ್ ರಿಂಗ್ ಟೇಲ್ ಕ್ಯಾಟ್ ಬಿಗ್ ಹಾರ್ನ್ ಶೀಪ್ ಪ್ರಾಣಿಗಳನ್ನೂ, ರೆಡ್ ಟೇಲ್ಡ್ ಹಾಕ್, ಕ್ಯಾನಿಯನ್ ರೆನ್ ಮುಂತಾದ ಪಕ್ಷಿಗಳನ್ನೂ, ಮತ್ತು ಅಪರೂಪದ ಸಸ್ಯಗಳನ್ನು ನೋಡಬಹುದು. ಕೆಲವು ಸಸ್ಯಗಳ ಹೂವುಗಳು ಅತ್ಯಾಕರ್ಷಕ, ಪ್ರಾಣಿ ಪಕ್ಷಿ ಸಸ್ಯಗಳ ತಂಟೆಗೆ ನಾವು ಹೋಗಬಾರದು. ಕೆಲವು ವಿಷ ಅವುಗಳಿಂದ ನಮಗೆ, ನಮ್ಮಿಂದ ಅವಕ್ಕೆ ತೊಂದರೆಯಾಗಬಹುದು. 'ನೋಡಿ, ಆದರೆ ಮುಟ್ಟಬೇಡಿ' ಎನ್ನುವ ಎಚ್ಚರಿಕೆಯ ಮಾತುಗಳನ್ನು ಇಲ್ಲಿನ ಅಧಿಕಾರಿಗಳು ಪ್ರವಾಸಿಗರಿಗೆ ಆಗಾಗ್ಗೆ ತಿಳಿಸುತ್ತಾರೆ.

ಗ್ರ್ಯಾಂಡ್ ಕ್ಯಾನಿಯನ್‌ನ 'ಪಕ್ಷಿ ನೋಟ'ಕ್ಕೆ ಅತ್ಯುತ್ತಮ ಮಾರ್ಗವೆಂದರೆ ವಿಮಾನದಿಂದ ನೋಡುವುದು ಅಥವಾ ಹೆಲಿಕಾಪ್ಟರ್‌ನಲ್ಲಿ ಕುಳಿತು ಕೊರಕಲಿಗೆ, ಹೆಚ್ಚು ಕಡಿಮೆ ಪಾತಾಳಕ್ಕೂ ಹೋಗಿ ಬರುವುದು. ಹೆಲಿಕಾಪ್ಟರ್ ಟೂರ್‌ಗೆ ಕೇವಲ ಎಪ್ಪತ್ತೈದು ಡಾಲರ್.

ಇನ್ನರ್ ಕ್ಯಾನಿಯನ್ ಅನ್ನು ನೋಡಲು ಇನ್ನೊಂದು ಮಾರ್ಗವೆಂದರೆ ದೋಣಿಯಲ್ಲಿ ಹೋಗುವುದು. ಅನೇಕ ಕಂಪೆನಿಗಳು ಒಂದು ದಿನದ ಅಥವಾ ಎರಡು ಮೂರು ವಾರಗಳ ದೋಣಿ ಪ್ರವಾಸವನ್ನು ಏರ್ಪಡಿಸುತ್ತವೆ. ನಾರ್ತ್ ರಿಮ್‌ಗೆ ಹೆಚ್ಚು ಪ್ರವಾಸಿಗರು ಹೋಗುವುದಿಲ್ಲ.

ಗ್ರ್ಯಾಂಡ್ ಕ್ಯಾನಿಯನ್ ನ್ಯಾಶನಲ್ ಪಾರ್ಕ್ ೧.೨ ದಶಲಕ್ಷ ಎಕರೆಯಷ್ಟು ಜಾಗವನ್ನು ಆಕ್ರಮಿಸಿದೆ. ಇದರ ಬಹುತೇಕ ಭಾಗದಲ್ಲಿ

ಪ್ರಾಣಿ ಪಕ್ಷಿ ಗಿಡ ಮರಗಳಲ್ಲದೆ ಮಾನವರು ಇರಲು ಕಷ್ಟ, ಕೊಲೊರ್ಯಾಡೊ ನದಿ ಕ್ಯಾನಿಯನ್ ಅನ್ನು ಇಬ್ಭಾಗ ಮಾಡುತ್ತದೆ. ಫ್ಯಾಂಟಮ್ ರ್ಯಾಂಚ್‌ನಲ್ಲಿ ನದಿಯನ್ನು ದಾಟಬಹುದು. ಆಗಲೇ ಹೇಳಿದಂತೆ ೫೦೦೦ ಅಡಿ ಕೆಳಗೆ ಹರಿಯುವ ನದಿಯನ್ನು ರಿಮ್‌ನಿಂದ(ದಡದಿಂದ) ಕೆಲವೇ ಜಾಗಗಳಿಂದ (ವ್ಯೂಪಾಯಿಂಟ್) ನೋಡಬಹುದು.

ಇಲ್ಲಿರುವ ಗ್ರ್ಯಾಂಡ್ ಕ್ಯಾನಿಯನ್ ಐಮ್ಯಾಕ್ಸ್ ಥಿಯೇಟರ್‌ನಲ್ಲಿ ೩೪ ನಿಮಿಷಗಳ 'ದಿ ಹಿಡನ್ ಸೀಕ್ರೆಟ್ಸ್' ಎಂಬ ಚಿತ್ರ ತೋರಿಸುತ್ತಾರೆ. ಆರು ಮಹಡಿಗಳಷ್ಟು ಎತ್ತರ, ೮೨ ಅಡಿ ಅಗಲದ ತೆರೆಯ ಮೇಲೆ ಗ್ರ್ಯಾಂಡ್ ಕ್ಯಾನಿಯನ್‌ನ ಎಲ್ಲಾ ಭಾಗಗಳನ್ನೂ, ನಾವು ಸುಲಭವಾಗಿ ಕಾಣಲಾಗದ ಅನೇಕ ಭಾಗಗಳನ್ನು ಇದರಲ್ಲಿ ನೋಡಬಹುದು. ಆದಿವಾಸಿಗಳು, ಮೊದಲು ಬಂದ ಯೂರೋಪಿಯನ್ನರು, ಮೇಜರ್ ಜಾನ್ ವೆಸ್ಲಿ ಪೋವೆರ್ ೧೮೬೯ರಲ್ಲಿ ದೋಣಿಯಲ್ಲಿ ಕೊಲೊರ್ಯಾಡೊ ನದಿಯಲ್ಲಿ ಪ್ರಯಾಣಿಸಿದ್ದು, ಇನ್ನರ್ ಕ್ಯಾನಿಯನ್‌ನಲ್ಲಿರುವ ಪ್ರಾಣಿ ಪಕ್ಷಿ ಗಿಡ ಮರಗಳು ಇವೆಲ್ಲವನ್ನೂ ನೋಡಬಹುದು. ಹೀಗೆ ನೋಡುವುದು ಮರೆಯಲಾಗದ ಅನುಭವ. ಬೆಳಗ್ಗೆ ೯.೩೦ ರಿಂದ ಸಂಜೆ ೮.೩೦ರವರೆಗೆ ಪ್ರತಿ ಒಂದೊಂದು ಗಂಟೆಗೂ ಈ ಚಿತ್ರ ತೋರಿಸುತ್ತಾರೆ.

ಸೂರ್ಯಾಸ್ತ ಸಮಯದಲ್ಲಿ ಕ್ಯಾನಿಯನ್‌ನ ಕಲ್ಲು ಗೋಡೆಗಳಲ್ಲಿ ತೋರುವ ವರ್ಣ ಬದಲಾವಣೆ ಮರೆಯಲಾಗದಂತಹ ದೃಶ್ಯ. ಸೂರ್ಯೋದಯದ ಬೆಳಕು ಕಲ್ಲುಬಂಡೆಗಳ ಮೇಲೆ ಬಿದ್ದಾಗ ಅವುಗಳಿಂದ ಪ್ರತಿಫಲಿಸುವ ವಿವಿಧ ಬಣ್ಣಗಳ ಸೌಂದರ್ಯ ವರ್ಣನಾತೀತ. ಕ್ಯಾನಿಯನ್‌ನ ಸೌಂದರ್ಯವನ್ನು ಸವಿಯಲು ಸೌಂದರ್ಯೋಪಾಸಕರು ನಾಲ್ಕಾರು ದಿನ ಅಲ್ಲೇ ಉಳಿಯುವುದುಂಟು, ಕೆಲವರು ವರ್ಷ ವರ್ಷವೂ ಬರುತ್ತಾರೆ.

ಗ್ರ್ಯಾಂಡ್ ಕ್ಯಾನಿಯನ್ ನ್ಯಾಷನಲ್ ಪಾರ್ಕ್ ಹೆಚ್ಚೆಚ್ಚು ಜನಪ್ರಿಯವಾಗುತ್ತಾ ಬಂದಿದೆ. ಜನಪ್ರಿಯತೆಯೇ ಅದರ ಮೃತ್ಯುವಾಗಿ ಪರಿಣಮಿಸುವಂತಾಗಿದೆ. ೧೯೧೯ರಲ್ಲಿ ಗ್ರ್ಯಾಂಡ್ ಕ್ಯಾನಿಯನ್ ಅನ್ನು ನೋಡಲು ೪೪ ಸಾವಿರ ಪ್ರವಾಸಿಗರು ಬಂದರೆ ಈಗ ವರ್ಷಂಪ್ರತಿ ೫ ಲಕ್ಷ ಜನ ಬರುತ್ತಾರೆ. ಕೆಲವರು ಪರಿಸರವನ್ನು ಹಾಳು ಮಾಡುತ್ತಾರೆ. ಕೆಲವು ಪ್ರಾಣಿಗಳ ಕಡಿತ ಮೃತ್ಯುಪ್ರಾಯ, ಕೆಲವು ಸಸ್ಯಗಳು ವಿಷಪೂರಿತ. ಆದುದರಿಂದ ಪ್ರವಾಸಿಗರು ಅವುಗಳ ತಂಟೆಗೆ ಹೋಗದಿದ್ದರೆ ಕ್ಷೇಮ.

ಈ ಅದ್ಭುತ ಕೊರಕಲನ್ನು ನೋಡಿ ಪುಳಕಿತರಾಗದವರು ಯಾರೂ ಇಲ್ಲ.

ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸಬೇಕು. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ಉದ್ಧಾರವಾಗುತ್ತಾಳೆ.

ಬಿಎಂಶ್ರೀ

ಬೆವರು ಸುರಿಸುವ ಗುಲಾಮರು

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಅಮೆರಿಕೆಯಲ್ಲಿ ದುಡಿಮೆಗೆ ಒಳ್ಳೆಯ ಸಂಭಾವನೆ ದೊರೆಯುತ್ತದೆಂದು ಸುಳ್ಳು ಆಶ್ವಾಸನೆ ನೀಡಿ ಥೈಲ್ಯಾಂಡಿನ ಕೆಲಸಗಾರರನ್ನು ಅವರ ದೇಶದವರೇ ಕ್ರೂರ ರೀತಿಯಲ್ಲಿ ಶೋಷಿಸುತ್ತಿದ್ದಾರೆ.

ಲೀಕಬಾಥಾಂಗ್ ಥೈಲ್ಯಾಂಡಿನ ಒಂದು ಸಣ್ಣ ಬಟ್ಟೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಳು. ಅವಳು ಬಟ್ಟೆ ಹೊಲೆಯುವ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಳು. ಆದರೆ ಕಷ್ಟಪಟ್ಟು ದುಡಿದರೂ ಅವಳ ಗಳಿಕೆ ತಿಂಗಳಿಗೆ ೨೦೦ ಡಾಲರಿಗಿಂತ ಕಡಿಮೆಯಾಗಿತ್ತು. ಒಬ್ಬ ಮಗಳಿದ್ದುದರಿಂದ ಇಷ್ಟರಲ್ಲಿ ಜೀವನ ನಡೆಸುವುದು ಬಹಳ ತ್ರಾಸದಾಯಕವಾಗಿತ್ತು.

೧೯೯೨ರ ಮೇ ತಿಂಗಳಿನ ಒಂದು ದಿನ ಅವಳ ಸಹೋದ್ಯೋಗಿಯೊಬ್ಬಳು ಇವಳ ಮುಂದೆ ಒಂದು ಸುವರ್ಣಾವಕಾಶವೆನ್ನುವಂಥ ಪ್ರಸ್ತಾವವನ್ನಿಟ್ಟಳು. 'ನಾವು ಇಲ್ಲಿ ಒಂದು ವರ್ಷದಲ್ಲಿ ಗಳಿಸುವಷ್ಟನ್ನು ಅಮೆರಿಕೆಯಲ್ಲಿ ಒಂದೇ ತಿಂಗಳಿನಲ್ಲಿ ಸಂಪಾದಿಸಬಹುದು' ಎಂದು ಆ ಮಹಿಳೆ ಹೇಳಿದಳು.

ಶ್ರೀಮಂತ ರಾಷ್ಟ್ರಗಳಿಗೆ ಹೋಗಿ ಚೆನ್ನಾಗಿ ಹಣ ಗಳಿಸಿ ತಾಯ್ನಾಡಿನಲ್ಲಿದ್ದ ತಮ್ಮ ಕುಟುಂಬದವರಿಗೆ ಸಹಾಯ ಮಾಡುತ್ತಿದ್ದ 'ಸಾಹಸಿಗ' ಕೆಲಸಗಾರರ ವಿಷಯ ಥೈಲ್ಯಾಂಡಿನ ಅನೇಕರಿಗೆ ತಿಳಿದಿತ್ತು. ಈಗ ಲೀಕಳಿಗೆ ಅಂಥವರ ಸಾಲಿಗೆ ಸೇರುವ ಅವಕಾಶ ಬಂದಿತ್ತು. ''ಬಾ, ಸಂಚಾಯಿಯನ್ನು ಭೇಟಿಯಾಗು. ಅವನು ಎಲ್ಲಾ ವಿವರಿಸುತ್ತಾನೆ'' ಎಂದು ಅವಳು ಒತ್ತಾಯಿಸಿದಳು.

ಸಂಚಾಯಿ ಮಾನಸುರಂಗತ್, ಒಳ್ಳೆಯ ಕೆಲಸಗಾರರಿಗೆ ಲಾಸ್ ಎಂಜಲೀಸಿನ ಬಡಾವಣೆಯಾದ ಎಲ್ ಮಾಂಟಿನ, ಕ್ಯಾಲಿಫೋರ್ನಿಯಾದಲ್ಲಿ ತೆಗೆಯಲಾದ ಛಾಯಾಚಿತ್ರಗಳನ್ನು ತೋರಿಸಿ ಅವರನ್ನು ಸೆಳೆಯುತ್ತಿದ್ದ. ಆಧುನಿಕ ಹೊಲಿಗೆ ಯಂತ್ರಗಳು, ರಾಶಿರಾಶಿಯಾಗಿ ಬಿದ್ದಿದ್ದ ಉಡುಪುಗಳ ಕೋಣೆಗಳು, ವಿಶ್ರಮಿಸಲು ವಿಶಾಲ ನಿದ್ರಾಶಾಲೆ, ಮಂದಹಾಸ ಬೀರುವ ಥೈಲ್ಯಾಂಡಿನ ಕೆಲಸಗಾರರಿರುವ ಚಿತ್ರಗಳು ಪರಿಣಾಮಕಾರಿ ಕೆಲಸ ಮಾಡುತ್ತಿದ್ದವು.

''ನೀವು ಬೆಳಿಗ್ಗೆ ೮ ರಿಂದ ಸಂಜೆ ೬ ಗಂಟೆವರೆಗೆ ಕೆಲಸಮಾಡಬೇಕು. ವಾರಕ್ಕೆ ೫ ದಿನ ಮಾತ್ರ ಕೆಲಸ. ನೀವು ಪ್ರತಿ ತಿಂಗಳು ೧೨೦೦ ರಿಂದ ೨೪೦೦ ಡಾಲರವರೆಗೆ ಗಳಿಸಬಹುದು. ವಾರಾಂತ್ಯದಲ್ಲಿ ನೀವು ಮೋಜುಮಾಡಬಹುದು. ನಿಮ್ಮನ್ನು ನಾವು ಡಿಸ್ನಿಲ್ಯಾಂಡಿಗೆ ಕರೆದೊಯ್ಯುತ್ತೇವೆ'' ಎಂದು ಸಂಚಾಯಿ ಭರವಸೆ ನೀಡಿದ. ಕೆಲಸಗಾರರನ್ನು ಆ ದೇಶಕ್ಕೆ ವಿಮಾನದಲ್ಲಿ ಕರೆದುಕೊಂಡು ಹೋಗಲು ತಗಲುವ ಪ್ರಯಾಣದ ಮತ್ತು ಇತರ ಖರ್ಚುಗಳನ್ನು ಮಾತ್ರ, ಅಂದರೆ ಸುಮಾರು ೪೮೦೦ ಡಾಲರಿನಷ್ಟು ಹಣವನ್ನು-ಹಿಂದಿರುಗಿಸಬೇಕಾಗಿತ್ತು. ಈ ಹಣ ಎರಡು ತಿಂಗಳ

೧೯೯೪ರ ಸೆಪ್ಟೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ 'ಬ್ರಿಯನ್ ಈವ್ಸ್'ರವರ 'ಸ್ವೆಟ್ ಶಾಪ್ ಸ್ಲೇವ್ಸ್' ಲೇಖನದ ಅನುವಾದ

ಗಳಿಕೆಯಾಗಿದ್ದರಿಂದ ಅಷ್ಟೇನು ದೊಡ್ಡ ಮೊತ್ತವೆನಿಸಲಿಲ್ಲ.

ಎಲ್‌ಮಾಂಟನಲ್ಲಿ ದೊರೆತ ಸ್ವಾಗತ

ಲೇಕಭಾಥೊಂಗ್ ಮತ್ತು ಅವಳ ಇಬ್ಬರು ಗೆಳತಿಯರು ಬಹಳ ಉತ್ಸುಕತೆಯಿಂದ ಅಮೆರಿಕೆಗೆ ಹೋಗಲು ಒಪ್ಪಿಕೊಂಡರು. ಆದರೆ ಅವರೆಣಿಸಿದಂತೆ ಡಿಸ್ನಿಲ್ಯಾಂಡಿಗೆ ಭೇಟಿ ಮತ್ತು ತಾಯ್ನಾಡಿಗೆ ಹಣ ಕಳಿಸುವಷ್ಟು, ಸಂಪಾದನೆಂಬುದೆಲ್ಲಾ ಸುಳ್ಳಾಗಿತ್ತು. ಆದಕ್ಕೆ ಬದಲಾಗಿ ಅಲ್ಲೊಂದು ಬೆವರು ದುಡಿತದ ಮನೆ ಇದ್ದಿತಲ್ಲದೆ, ಇತರರೊಡನೆ ಬೆರೆಯುವದಕ್ಕೂ ಅವಕಾಶವಿರದಂಥ ಘೋರ ಪರಿಸ್ಥಿತಿ ನಿರ್ಮಾಣವಾಗಿತ್ತು.

ಅಮೆರಿಕೆಯಲ್ಲಿನ ವಲಸೆ, ಉದ್ಯೋಗ ಮತ್ತು ನಾಗರಿಕ ಹಕ್ಕುಗಳ ಕಾನೂನನ್ನು ಪದೇಪದೆ ಉಲ್ಲಂಘಿಸಿ ಮನಾಸುರಾಂಗಕುವ ಕುಟುಂಬದವರು, ಮೋಸ ಮಾಡಿ ಮತ್ತು ಸುಳ್ಳು ಹೇಳಿ ಲೇಕರಂಥ ಬಡ ಕೆಲಸಗಾರರನ್ನು ನೇಮಿಸಿ ಕೊಳ್ಳುತ್ತಿದ್ದರು. ಅವರನ್ನು ಕಳ್ಳದಾರಿ ಯಿಂದ ಅಮೆರಿಕೆಗೆ ಸಾಗಿಸಿದನಂತರ, 'ಆಂಟ್' ಎಂದು ಕರೆಯಲಾಗುತ್ತಿದ್ದ ಸುನಿ ಮನಾಸುರಾಂಗಕುನ ಮತ್ತು ಆಕೆಯ ೫ ಗಂಡುಮಕ್ಕಳು, ಈ ಕೆಲಸದಾಳುಗಳು ವಾರದ ಏಳುದಿನ, ಪ್ರತಿದಿನ ೨೦ಗಂಟೆಗಳವರೆಗೆ ದುಡಿಯುವಂತೆ ಒತ್ತಾಯಿಸುತ್ತಿದ್ದರು. ಅವರೇನಾದರೂ ಒಪ್ಪದಿದ್ದರೆ ಥೈಲ್ಯಾಂಡಿನಲ್ಲಿರುವ ಅವರ ಕುಟುಂಬದ ಸದಸ್ಯರಿಗೆ ಹಿಂಸಿಸುವುದಾಗಿ ಹೆದರಿಸುತ್ತಿದ್ದರು.

ಸುಧಾರಿಸಿದ ಕೆಲವು ಗುಂಪುಗಳು ಸುಮಾರು ೩೦೦೦ ಜನರನ್ನು ಥೈಲ್ಯಾಂಡಿನಿಂದ ಕ್ಯಾಲಿಫೋರ್ನಿಯಾಕ್ಕೆ ಕಳ್ಳತನದಿಂದ ಸಾಗಿಸುತ್ತವೆಂದು ಅಮೆರಿಕೆಯ ಅಧಿಕಾರಿಗಳು ಹೇಳುತ್ತಾರೆ. ಪರದೇಶದಲ್ಲಿ ಬಹಳ ಸುಲಭವಾಗಿ ಶ್ರೀಮಂತರಾಗಬಹುದೆಂಬ ಕನಸು ಕಾಣುವ ಯಾವುದೇ ಕೆಲಸಗಾರನಿಗೆ ಲೇಕಳ ಅನುಭವ ಎಚ್ಚರಿಕೆ ನೀಡುವಂತಿದೆ.

ಲೇಕಳು ಪಾಸ್‌ಪೋರ್ಟಿಗಾಗಿ ಅರ್ಜಿ ಹಾಕುತ್ತಿದ್ದಂತೆ, ಸಂಚಾಯಿ ಅವಳ ಹೆಸರಿನಲ್ಲಿ ಒಂದು ಬ್ಯಾಂಕಿನಲ್ಲಿ ಖಾತೆ ತೆರೆದು ಒಂದಿಷ್ಟು ಹಣದ ಮೊತ್ತವನ್ನು ತುಂಬಿದನು. ಲೇಕಳು ಶ್ರೀಮಂತ ಹಾಗೂ ಯಶಸ್ವಿ ವ್ಯಾಪಾರಸ್ಥಳೆಂದು ತೋರಿಸಲು ಅವನು ಕೆಲವು ಖೊಟ್ಟಿ ಕಾಗದ ಪತ್ರಗಳನ್ನು ತೋರಿಸಿದನು. ಬೆಳೆಯುತ್ತಿರುವ ತನ್ನ ವ್ಯವಹಾರದ ದೃಷ್ಟಿಯಿಂದ ಅವಳು ಮತ್ತೆ ಥೈಲ್ಯಾಂಡಿಗೆ ಮರಳುವಳೆಂಬುದು ಖಚಿತವಾಯಿತು.

ಈ ರೀತಿಯಾದ ರಹದಾರಿ ಪಡೆಯುವುದರಲ್ಲಿ ಯಾವ ಅಪಾಯವಿಲ್ಲವೆಂದು ಸಂಚಾಯಿ, ಲೇಕಳಿಗೆ ಮನವರಿಕೆ ಮಾಡಿಕೊಟ್ಟನು. ಬ್ಯಾಂಕಾಂಕಿನಲ್ಲಿನ ಅಮೆರಿಕೆಯ ರಾಯಭಾರಿ ಕಾರ್ಯಾಲಯದಲ್ಲಿ ಪ್ರತಿದಿನ ಇಂಥ ೩೫೦ (ಪ್ರತಿವರ್ಷ ಸಾವಾರು ೯೦,೦೦೦) ವಲಸೆ ಹೋಗುವವರ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. ಇವುಗಳಲ್ಲಿ ೬೨% ಅರ್ಜಿಗಳಿಗೆ ಅನುಮತಿ ದೊರೆಯುತ್ತದೆ.

ಬಹಳಷ್ಟು ವಿವರಗಳಿದ್ದ, ಹತ್ತು ವರ್ಷದ ಅವಧಿಯ ಪಾಸ್‌ಪೋರ್ಟಿನ ಮೇಲೆ ಅನುಮತಿ ಮುದ್ರೆ ಬೀಳುತ್ತಿದ್ದಂತೆ, ಸಂಚಾಯಿಯಿಂದ ಪಡೆದ ೧೦೦೦ ಡಾಲರ್ ನಗದು ಹಣ ಪಡೆದುಕೊಂಡ ಲೇಕ ಒಂದು ವಾಹನದಲ್ಲಿ ಬ್ಯಾಂಕಾಕ ವಿಮಾನ ನಿಲ್ದಾಣಕ್ಕೆ ಹೊರಟಳು. ಅವಳಂತೆ ಆಯ್ಕೆಯಾದ ಇನ್ನೂ ಐವರು, ಬ್ಯಾಂಕಾಂಕಿನಿಂದ ಅಮೆರಿಕೆಗೆ ಹೊರಟ ಪ್ರಸಿದ್ಧ ಪ್ರವಾಸಿ ನಿಯೋಗದ ತಂಡದಲ್ಲಿ ಸೇರಿಕೊಂಡರು.

ಇಂಥ ಪ್ರವಾಸ ಸಂಘಗಳು, ಥೈಲ್ಯಾಂಡಿನಿಂದ ಕೆಲಸಗಾರರನ್ನು ಅಮೆರಿಕೆಗೆ ಕಳ್ಳರೀತಿಯಿಂದ ಸಾಗಿಸುವಲ್ಲಿ ಸಹಾಯ ಮಾಡುತ್ತವೆಂದು, ಅಮೆರಿಕೆಯ ಅಧಿಕಾರಿಗಳ ಅಭಿಪ್ರಾಯ. ಇಲ್ಲಿಯವರೆಗೆ ೬ ಇಂಥ ಪ್ರವಾಸಿ ಮಾರ್ಗದರ್ಶಿಗಳು ಮತ್ತೆ ಅಮೆರಿಕೆ ಪ್ರವೇಶಿಸಬಾರದೆಂದು ಬಹಿಷ್ಕಾರ ಹಾಕಿದೆ.

ಲಾಸ್ ಎಂಜೆಲೀಸ್ ಅಂತರಾಷ್ಟ್ರೀಯ ನಿಲ್ದಾಣದಲ್ಲಿ ಲೇಕ ಮತ್ತು ಅವಳ ೫ ಸಂಗಾತಿಗಳನ್ನು ವಲಸೆ ಕಾರ್ಯಾಲಯದಿಂದ ಸದ್ದಿಲ್ಲದೆ ಸಾಗಿಸಲಾಯಿತು. ಆದರೆ ಅಲ್ಲಿ ಬಂದು ಇಳಿದ ಕೆಲವೇ ಕ್ಷಣಗಳಲ್ಲಿ ಅಮೆರಿಕೆಯ ಕನಸು ಹುಳಿಯಾಗ ಹತ್ತಿತು. ವಿಮಾನ ನಿಲ್ದಾಣದ ಹೊರಗೆ ಬರುತ್ತಿದ್ದಂತೆ, ಅಲ್ಲಿದ್ದ ಒಂದು ವ್ಯಾನಿನ ಹಿಂಭಾಗದಲ್ಲಿ ಕೂಡುವಂತೆ ಆಂಟಿಯ ಇನ್ನೊಬ್ಬ ಮಗ ಘನಸ್ವಾಕ್ ಆದೇಶವಿತ್ತನು. ಹಿಂಭಾಗದಲ್ಲಿ ಆಸನಗಳಿರಲಿಲ್ಲವಾದ್ದರಿಂದ ಈ ಮಹಿಳೆಯರು ತಮ್ಮ ಸಾಮಾನುಗಳ ಜೊತೆ ಮುದುರಿಕೊಂಡು ಕುಳಿತರು. ಎಲ್‌ಮಾಂಟಿನ ಸೆಂಟಾಅನಿಟಾ ಏವೆನ್ಯೂ ತಲುಪಿದಾಗ ಆಗಲೇ ಕತ್ತಲಾಗಿತ್ತು. ಒಂದು ದೊಡ್ಡ ಕಬ್ಬಿಣದ ಬಾಗಿಲನ್ನು ತೆರೆಯಲಾಯಿತು. ಅದೊಂದು ಮನೆಯ ಭಾಗದಲ್ಲಿನ ಮೋಟಾರು ಖಾನೆ. ಅದರ ಬಾಗಿಲು ಸ್ವಲ್ಪ ಮಾತ್ರ ಏರಿಸಲಾಗಿತ್ತು. ಒಳಗೆ ಬೆಳಕಿತ್ತು.

ಅರಳೆ ಬಟ್ಟೆಯ ಷರಾಯಿ ಧರಿಸಿದ್ದ ಮಹಿಳೆ ಪ್ರವೇಶಿಸಿದಳು. ಅವಳ ವಯಸ್ಸು ಸುಮಾರು ೬೦ ಇರಬೇಕು. ಕುಳ್ಳ ಹಾಗೂ ದಪ್ಪ ದೇಹದ ಈ ಮಹಿಳೆಯ ಕೂದಲು ಬೆಳ್ಳಗಾಗ ಹತ್ತಿದ್ದವು. ಚಂದ್ರಾಕಾರದ ತನ್ನ ಮುಖಕ್ಕೆ ಅವಳು ಬಣ್ಣ ಬಡಿದುಕೊಂಡಿದ್ದಳು. ಬೆಲೆಬಾಳುವ ಉಂಗುರಗಳು ಅವಳ ಬಟ್ಟುಗಳ ಮೇಲೆ ಝುಳಪಿಸುತ್ತಿದ್ದವು. ಚೀನೀ ಮೂಲದ ಥೈಲ್ಯಾಂಡಿನ ಈ ಹಿರಿಯ ಮಹಿಳೆ ''ನಾನೇ ಆಂಟಿ. ಇಲ್ಲಿ ನೀವು ಹೆಚ್ಚು ಮಾತಾಡಬಾರದು. ಹೊಸ ಸ್ನೇಹಿತರನ್ನು ಮಾಡಿಕೊಳ್ಳಬಾರದು. ಯಾವುದೇ ಪ್ರಶ್ನೆ ಕೇಳಬಾರದು'' ಎಂದು ಕೆಲಸಗಾರರು ಪಾಲಿಸಬೇಕಾದ ನಿಯಮಗಳನ್ನು ಘೋಷಿಸಿದಳು. ಅವರಲ್ಲಿದ್ದ ಹಣ, ವಿಮಾನ ಟಿಕೇಟು ಮತ್ತು ಪಾಸ್‌ಪೋರ್ಟ್‌ಗಳನ್ನು ತೆಗೆದುಕೊಳ್ಳಲಾಯಿತು.

ರಜೆ ರಹಿತ ದುಡಿಮೆ

ಎರಡು ಮಲಗುವ ಕೋಣೆಗಳು ಹಾಗೂ ಒಂದು ಬಚ್ಚಲು ಮನೆಯಿರುವ ಒಂದು ಚಿಕ್ಕ ಮನೆಯಲ್ಲಿ ಲೇಕ ಮತ್ತು ಇನ್ನೂ ೧೨ ಮಹಿಳೆಯರು ವಾಸಿಸಬೇಕಾಗಿತ್ತು. ಬೆಳಗ್ಗೆ ೫ ಗಂಟೆಗೆ ಎದ್ದು ಸ್ನಾನಕ್ಕಾಗಿ ಸರದಿ ನಿಲ್ಲಬೇಕಾಗುತ್ತಿತ್ತು. ಛೇಟಿ ಕೊಠಡಿಯೆನಿಸಿಕೊಂಡಿದ್ದ ಸ್ಥಳದಲ್ಲಿ ಬೆಳಗಿನ ೭ ಗಂಟೆಯಿಂದ ಕೆಲಸ ಪ್ರಾರಂಭ. ೫-೬ ಮೀಟರಿನಷ್ಟು ಸ್ಥಳಾವಕಾಶವಿರುವಲ್ಲಿ ೧೫ ಹೊಲಿಗೆ ಯಂತ್ರಗಳನ್ನಿಡಲಾಗಿತ್ತು. ಲೇಕ ಪ್ರತಿದಿನ ೧೬ ಗಂಟೆಗಳಿಗಿಂತ ಹೆಚ್ಚು ಅವಧಿಯವರೆಗೆ ದುಡಿದು ೩ ಕುಪ್ಪಸಗಳನ್ನು, ಚಡ್ಡಿಗಳನ್ನು ಮತ್ತು ಟಿ-ಶರ್ಟ್‌ಗಳನ್ನು ಹೊಲೆಯುತ್ತಿದ್ದಳು. ಎಷ್ಟೋ ಸಲ ಅವಳು ರಾತ್ರಿ ೧ ಗಂಟೆಯವರೆಗೆ ದುಡಿದದ್ದುಂಟು. ಇಲಿಗಳು ಮತ್ತು ಜಿರಲೆಗಳು ಸಹಜವಾಗಿ ಆ ಕೊಠಡಿಯ ನೆಲದ ಮೇಲೆ ಹರಿದಾಡುತ್ತಿದ್ದವು.

ಕಾನೂನಿನ ಪ್ರಕಾರ ಪ್ರತಿಗಂಟೆಗೆ ೪-೨೫ ಡಾಲರ್ ಕೂಲಿ ಕೊಡಬೇಕೆಂದಿದ್ದರೂ, ಎಲ್‌ಮಾಂಟಿನ ಈ ಕೆಲಸಗಾರರಿಗೆ, ಹೆಸರಾಂತ ವ್ಯಾಪಾರಿಗಳ ಅಂಗಡಿಗಳಲ್ಲಿನ ಕೆಲಸಗಾರರಿಗೆ ನೀಡಲಾಗುತ್ತಿದ್ದ ಕೂಲಿಯ ಒಂದು ಅಂಶ ಮಾತ್ರ ದೊರೆಯುತ್ತಿತ್ತು. ಬಹಳ ಕೆಲಸವಿದ್ದ

ಒಂದು ತಿಂಗಳಿನಲ್ಲಿ ಲೇಕ ೫೦೦ ಡಾಲರ್ ಸಂಪಾದಿಸಿದಳು. ಆದರೆ ಅವರಲ್ಲಿ ಅರ್ಧದಷ್ಟು ಹಣವನ್ನು ಖರ್ಚುಗಳು ಮತ್ತು 'ಬಾಡಿಗೆ' ಎಂದು ಆಂಟಿ ಕಡಿತ ಮಾಡಿದಳು. ಅವಳಲ್ಲಿದ್ದ ಹಣ ಅವಳು ಥೈಲ್ಯಾಂಡಿನಲ್ಲಿದ್ದಾಗ ಸಂಪಾದಿಸಿದ್ದಕ್ಕಿಂತ ಸ್ವಲ್ಪ ಮಾತ್ರ ಹೆಚ್ಚಾಗುತ್ತಿತ್ತು. ರಜೆದಿನಗಳು ಇರುತ್ತಿರಲಿಲ್ಲ.

ನಿಜ ಹೇಳಬೇಕೆಂದರೆ ಈ ಕೆಲಸಗಾರರು ಬಂದಿಗಳಾಗಿದ್ದರು. ಹೊರಗೆ ಹೋಗಲು ಏಕೈಕ ಮಾರ್ಗವೆಂದರೆ ಸೆಂಟ್ ಅನಿಟಾ ಎವೆನ್ಯೂ ರಸ್ತೆಗೆ ಎದುರಾದ ಮುಖ್ಯದ್ವಾರ. ಕಬ್ಬಿಣದ ಈ ಬಾಗಿಲಿಗೆ ಯಾವಾಗಲೂ ಕೀಲಿ ಹಾಕಲಾಗುತ್ತಿತ್ತು. ಸುತ್ತುವರಿದ ಎತ್ತರದ ಗೋಡೆಯ ಮೇಲೆ ಚೂಪಾದ ದಪ್ಪ ಮೊಳೆಗಳನ್ನು ನೆಡಲಾಗಿತ್ತು. ಈ ಮೊಳೆಗಳನ್ನು ಒಳಭಾಗದ ಕಡೆಗೆ ಬಾಗಿಸಲಾಗಿತ್ತು. ಹೊರಗಿನಿಂದ ಬರುವದನ್ನು ತಡೆಯುವದಕ್ಕಿಂತಲೂ, ಒಳಗಿನವರು ಹೊರಗೆ ಹೋಗದಿರಲೆಂಬುದೇ ಈ ಜೋಡಣೆಯ ಉದ್ದೇಶವಾಗಿತ್ತು. ಏಕಾಂತಕ್ಕೆ ಆಸ್ಪದವಿರಲಿಲ್ಲ. ಎರಡು ಕೋಣೆಗಳು ಹಾಗೂ ಒಂದು ಬಚ್ಚಲು ಇರುವ ಪ್ರತಿಯೊಂದು ಘಟ್ಟದಲ್ಲಿ ೧೨ಕ್ಕಿಂತಲೂ ಹೆಚ್ಚು ಮಹಿಳೆಯರು ವಾಸಿಸುತ್ತಿದ್ದರು.

ಈ ಗೌಪ್ಯತೆಯಿಂದಾಗಿ ಲೇಕ ಮತ್ತು ಇತರರ ಸ್ಥಿತಿ ಇನ್ನೂ ಕೆಡಹತ್ತಿತು. ಹೊಲಿಗೆ ಕೆಲಸ ನಡೆಸುತ್ತಿದ್ದ ಆ ಕೊಠಡಿಯ ಕಿಟಕಿಗಳನ್ನು ಮುಚ್ಚಿದ್ದರಿಂದ ಆ ಕೊಠಡಿಯ ಉಷ್ಣತೆ ೩೫೦ ಗೆ ಏರುತ್ತಿತ್ತು. ಕೆಳಭಾಗದಲ್ಲಿ ಮೋಟಾರು ಖಾನೆಯಲ್ಲಿ ಕೂಡಾ ಹೊಲಿಯುವ ಕೆಲಸ ನಡೆಯುತ್ತಿತ್ತು. ಅಲ್ಲಿನ ಬಾಗಿಲಿಗೆ ೩೦ ಸೆಂಟಿಮೀಟರಿನ ಒಂದು ದಾರ ಜೋತು ಬಿಡಲಾಗಿತ್ತು. ಅದಕ್ಕಿಂತಲೂ ಎತ್ತರಕ್ಕೆ ಬಾಗಿಲನ್ನು ಸರಿಸುವಂತಿರಲಿಲ್ಲ. ಹತ್ತಿರದ ಮನೆಗಳಲ್ಲಿನ ನಿವಾಸಿಗಳಿಗೆ ಇವರುಗಳು ಕಾಣದಿರಲೆಂಬುದೇ ಇದರ ಉದ್ದೇಶ. ಯಾರಾದರೂ ಹೊರಗೆ ಬಂದು ಬಯಲು ಭಾಗದಲ್ಲಿ ಓಡಾಡಿ ಶುಭ್ರಗಾಳಿ ಸೇವಿಸಲೆತ್ನಿಸಿದರೆ ಅವರನ್ನು ಅವಾಚ್ಯವಾಗಿ ಬೈದು ಬಿಡುತ್ತಿದ್ದರು.

ಇತರ ಏಷ್ಯೋ ಸಹೋದ್ಯೋಗಿಗಳಂತೆ ಲೇಕ ಕೂಡಾ, ವಸ್ತ್ರದ ಧೂಳಿನ ಸೇವನೆಯ ಪರಿಣಾಮದಿಂದ ಬಳಲಿದಳು. ಕೆಲವೊಮ್ಮೆ ಉಸಿರಾಡಿಸುವುದು ಕಷ್ಟವಾಗುತ್ತಿತ್ತು. ಮೈಮೇಲೆ ಗುಳ್ಳೆಗಳಾಗಿ ನೋವುಂಟಾಯಿತು. ಇತರರು ತಲೆಶೂಲೆ, ದೃಷ್ಟಿಮಾಂದ್ಯ ಮತ್ತು ಬೆನ್ನು ನೋವಿನಿಂದ ಬಳಲ ಹತ್ತಿದರು. ಡಾಕ್ಟರರನ್ನು ಭೇಟಿಯಾಗಲು ಆಂಟಿ ಅವರಿಗೆ ಬಿಡುತ್ತಿರಲಿಲ್ಲ. ಔಷಧಿ ಬೇಕಾದರೆ ಥೈಲ್ಯಾಂಡಿನಲ್ಲಿರುವ ತಮ್ಮ ಬಂಧುಗಳಿಂದ ತರಿಸಿಕೊಳ್ಳಲಿ ಎಂದೆನ್ನುತ್ತಿದ್ದಳು.

ಈ ಕೆಲಸಗಾರರಲ್ಲಿ ಕೆಲವೇ ಗಂಡಸರಿದ್ದರು. ಅವರಲ್ಲಿ ಮಧ್ಯವಯಸ್ಸಿನ ಮನಿತ ಸಕೊರ್ನ್ ಎಂಬಾತ ಹಲ್ಲುನೋವು ತಾಳಲಾರದೆ ಒಂದು ದಿನ ಅವನು ದಾರ ಹಾಗೂ ಒಂದು ಲೋಹದ ಹಿಡಿಕೆಯನ್ನು ಬಳಸಿಕೊಂಡು ತನ್ನ ಹಲ್ಲನ್ನು ಕಿತ್ತೊಗೆದ. ಇನ್ನೂ ನಾಲ್ಕು ಹಲ್ಲುಗಳನ್ನು ಇದೇರೀತಿ ಕಿತ್ತು ತೆಗೆದನು.

ದಾಳಿ

ಮನಿತ ಮತ್ತು ಇತರರ ಬಿಡುಗಡೆ ಮೊದಲೇ ಆಗಬೇಕಾಗಿತ್ತು. ವಲಸೆ ವಿಭಾಗದ ವಿಶೇಷ ಕಾರ್ಯಕರ್ತ ಫಿಲಿಪ್ ಬೊನರನಿಗೆ ಥೈ ಭಾಷೆ ಚೆನ್ನಾಗಿ ತಿಳಿದಿತ್ತು. ಥೈಲ್ಯಾಂಡಿನಿಂದ ಕೆಲಸಗಾರರನ್ನು ಕಳ್ಳರೀತಿಯಿಂದ ಅಮೆರಿಕೆಗೆ ಸಾಗಿಸಿ, ನ್ಯಾಯಯುತ ಮನ್ನಣೆ ಇರದ ಐದು ಫ್ಯಾಕ್ಟರಿಗಳಲ್ಲಿ ಅವರನ್ನು ದುಡಿಸುತ್ತಿರುವುದು ೧೯೯೧ರಲ್ಲಿ

ಬ್ರೊನರನಿಗೆ ತಿಳಿದು ಬಂತು. ತಾನು ಈ ಪ್ರಕರಣದಲ್ಲಿ ಕೆಲಸ ಮುಂದುವರೆಸಿ ತಪ್ಪಿತಸ್ಥರನ್ನು ಪತ್ತೆ ಹಚ್ಚುವುದಾಗಿ ತನ್ನ ಹಿರಿಯ ಅಧಿಕಾರಿಗಳ ಮನವೊಪ್ಪಿಸಿದನು.

ಒಂದು ವರ್ಷ ಕಳೆಯುವಷ್ಟರಲ್ಲಿ, ಒಬ್ಬ ಅನಾಮಧೇಯ ಬಾತಮಿದಾರನ ಮೂಲಕ ಬೆವರು ದುಡಿತ ಮನೆಯ ವಿಳಾಸ ಹಾಗೂ ಅಲ್ಲಿನ ಸ್ಥಿತಿಯ ಕೆಲವು ವಿವರಗಳು ದೊರೆತವು. ವಿಚಾರಣೆ ನಡೆಸಿದ ಇನ್ನೊಬ್ಬ ಅಧಿಕಾರಿ ಶೋಧನೆಗೆ ಆಜ್ಞಾಪತ್ರ ಕೇಳಿದನು. ಅವನ ಮನವಿಯನ್ನು ತಿರಸ್ಕರಿಸಿದ್ದರಿಂದ ಈ ಪ್ರಕರಣವನ್ನು ಮುಚ್ಚಲಾಯಿತು.

ಇದೇ ಸಮಯಕ್ಕೆ ಎಲ್ ಮಾಂಟಿನಲ್ಲಿ ಕೆಲವು ಕೆಲಸಗಾರರು ಅಲ್ಲಿಂದ ಪಾರಾಗಲು ಯೋಚಿಸಿದ್ದರು. ಇಬ್ಬರು ತರುಣಿಯರು ಖಾಲಿಯಾಗಿದ್ದ ಹವಾನಿಯಂತ್ರಣದ ಡಬ್ಬಿಯೊಳಗೆ ಅಂಬೆಗಾಲಿಟ್ಟು ಹೊರಗೆ ಬಂದು, ಗೋಡೆ ಏರಿ, ಧುಮುಕಿ ಓಡಿಹೋಗಿ ಉತ್ತರ ಹಾಲಿವುಡ್ಡಿನಲ್ಲಿರುವ ಬೌದ್ಧಮಂದಿರವಾದ ವಾಟಥೈಯಲ್ಲಿ ಆಶ್ರಯ ಪಡೆದರು. ಇದೇ ರೀತಿಯಾಗಿ ಇನ್ನೂ ಏಳು ಮಹಿಳೆಯರು ಅಲ್ಲಿಂದ ಜಾರಿಕೊಂಡರು.

ಇದರಿಂದಾಗಿ, ಆಂಟಿಯ ಆಡಳಿತ ಇನ್ನಷ್ಟು ಬಿಗಿಗೊಂಡಿತು. 'ಇಲ್ಲಿಂದ ಪರಾರಿಯಾದರೆ, ನಿಮ್ಮ ಕುಟುಂಬದವರ ಮನೆಯನ್ನು ಸುಡಲಾಗುವುದು. ಒಂದು ಬಾಂಬಿನ ಮೂಲಕ ನಿಮ್ಮ ಮನೆಯವರನ್ನು ಕೊಂದು ಹಾಕುತ್ತೇವೆ.' ಎಂದು ಆಂಟಿಯ ದೃಢಕಾಯದ ಮಗ ಲೇಕಳಿಗೆ ಹೇಳಿದ.

ಆಂಟಿ ತನ್ನ ಮನೆಯ ಸುತ್ತು ಗೋಡೆಯ ಎತ್ತರವನ್ನು ಹೆಚ್ಚಿಸಿದಳಲ್ಲದೆ, ಚೂಪಾದ ಮುಳ್ಳು ತಂತಿಯನ್ನು ಗೋಡೆಯ ಮೇಲೆಲ್ಲಾ ಕಟ್ಟಿಸಿದಳು. ಮೇಲಂತಸ್ತಿನಲ್ಲಿನ ಮಲಗುವ ಕೋಣೆ ಮತ್ತು ಸ್ನಾನ ಗೃಹದ ಕಿಟಕಿಗಳಿಗೆಲ್ಲ ಮೇಲ್ಭಾಗದಲ್ಲಿ ಸ್ವಲ್ಪ ಸ್ಥಳ ಬಿಟ್ಟು ಪದರ ಹಲಿಗೆಗಳನ್ನು ಬಡಿಯಲಾಯಿತು. ಥೈಲ್ಯಾಂಡಿನಿಂದ ಇಬ್ಬರನ್ನು ಕರೆಸಿಕೊಂಡು ಪೂರ್ಣಾವಧಿ ಕಾವಲುಗಾರರೆಂದು ನೇಮಿಸಲಾಯಿತು.

ಈ ಹಿಂದೆ, ಮಹಿಳೆಯರು ತಮ್ಮ ಮನೆಗೆ ಪತ್ರ ಬರೆದಾಗ ಅಥವಾ ದೂರವಾಣಿಯ ಮೂಲಕ ಮಾತಾಡಿದಾಗ ನಗುತ್ತಲಿರಬೇಕೆಂದು ಸೂಚಿಸಲಾಗಿತ್ತು. ಈಗ ಅವರು ಬರೆದ ಪತ್ರಗಳನ್ನು ಮತ್ತು ಅವರಿಗೆ ಬಂದ ಉತ್ತರಗಳನ್ನು ಒಡೆದು ನೋಡ ಹತ್ತಿದರು. ಅವರು ದೂರವಾಣಿಯ ಮೂಲಕ ಮಾತಾಡುವುದನ್ನು ಕದ್ದಾಲಿಸಲು ಪ್ರಾರಂಭಿಸಿದರು. ಒಬ್ಬ ಕೆಲಸಗಾರ್ತಿಯ ಮನೆಯಿಂದ, ಅವಳ ತಂದೆ ಮರಣ ಶಯ್ಯೆಯಲ್ಲಿದ್ದುದರಿಂದ ಅವಳು ಮರಳಿ ಬಂದು ತಂದೆಗೆ ಸಾಂತ್ವನ ನೀಡುವಂತೆ, ಬರೆದಿದ್ದ ಪತ್ರವನ್ನು ಮನಾಸುರಂಗಕನ್ ಕುಟುಂಬದವರು ಮುಚ್ಚಿಟ್ಟ, ವಿಷಯ ಆನಂತರ ಆ ಮಹಿಳೆಗೆ ತಿಳಿಯಿತು.

ಥೈಲ್ಯಾಂಡಿನ ಕೆಲಸಗಾರರಿಗೆ ಎಚ್ಚರಿಕೆ

೧೯೯೫ ರ ಆಗಸ್ಟ್ ೧೫ ರ ಬೆಳಗಿನ ಜಾವ. ಮೇಲಂತಸ್ತಿನ ಕೋಣೆಯಲ್ಲಿದ್ದ ಲೇಕಳಿಗೆ, ಕೆಳಗಿನ ಬಾಗಿಲನ್ನು ಕೊಡಲಿಯಿಂದ ಹೊಡೆಯುತ್ತಿರುವ ಸಪ್ಪಳ ಕೇಳಿಸಿತು. ಅವಳ ಜೊತೆಗೆ ಆ ಕೋಣೆಯಲ್ಲಿ ಮಲಗಿದ್ದ ಪರಾರೂ ಹಾಸಿಗೆಯಿಂದ ಕದಲಲಿಲ್ಲ. ಸುಮಾರು ೧೮ ಗಂಟೆಗಳವರೆಗೆ ಸತತವಾಗಿ ಯಂತ್ರದ ಮೇಲೆ ಬಾಗಿಕೊಂಡು ಕೆಲಸ ಮಾಡಿ ದಣಿದು ಮಲಗಿದ್ದ ಆ ಮಹಿಳೆಯರಿಗೆ ಈ ಸಪ್ಪಳದಿಂದ ಎಚ್ಚರವಾಗಿರಲಿಕ್ಕಿಲ್ಲ. ಲೇಕ ಕೂಡಾ ಇದೊಂದು 'ಕನಸಿರಬೇಕೆಂದು ಭಾವಿಸಿದಳು.

ನಂತರ ದೂರ ಘೋಷಣೆಯೊಂದು

ಕಿವಿಯ ಮೇಲೆ ಬೀಳುತ್ತಿದ್ದಂತೆ ಅವಳ ಮುಂಪರು ಮಾಯವಾಯಿತು. ''ಪೋಲಿಸ್! ಹೆದರಬೇಡಿರಿ. ನಿರಾತಂಕವಾಗಿ ಕೆಳಗಿಳಿದು ಬನ್ನಿರಿ'' ಎಂದು ಅವಳ ತಾಯ್ನಾಡಿನ ಭಾಷೆಯಾದ ಥೈ ಭಾಷೆಯಲ್ಲಿ ಆದೇಶ ಬಂತು. ಆ ಒಡತಿ ಮತ್ತು ಆಕೆಯ ಮಕ್ಕಳನ್ನು ಪೋಲಿಸರು ಪ್ರಶ್ನಿಸುತ್ತಿದ್ದಂತೆ ಲೇಕಳ ಹೃದಯದಲ್ಲಿ ಏಕಕಾಲಕ್ಕೆ ಕಳವಳ ಮತ್ತು ಸಮಾಧಾನದ ತೆರೆಯೆದ್ದವು. ಎಷ್ಟೋ ವರ್ಷಗಳಿಂದ ಎಸಗುತ್ತಿದ್ದ ಅನ್ಯಾಯ ಕೊನೆಗೊಂಡಿದ್ದು ಸಮಾಧಾನ ತಂದಿತು. ತನ್ನನ್ನು ಗಡಿಪಾರು ಮಾಡಬಹುದೆಂಬುದೇ ಅವಳ ಕಳವಳಕ್ಕೆ ಕಾರಣ.

ಆ ಮನೆಯಿಂದ ತಪ್ಪಿಸಿಕೊಂಡು ಹೋಗಿದ್ದ ಮಹಿಳೆಯೊಬ್ಬಳು ಆಂಟಿಯ ಅಕ್ರಮ ವ್ಯವಹಾರವನ್ನು ಬಯಲು ಮಾಡಿದ್ದಳು. ಅವಳು ಒಬ್ಬ ನ್ಯಾಯವಾದಿಯ ಮುಂದೆ ತನ್ನ ಗೋಳನ್ನು ಹೇಳಿದ್ದಳು. ಆ ನ್ಯಾಯವಾದಿ ಅಧಿಕಾರಿಗಳನ್ನು ಸಂಪರ್ಕಿಸಿದನು. ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಯ ಆಧಾರದ ಮೇಲೆ ಬೆವರು ದುಡಿತದ ಮನೆಯ ಮೇಲೆ ದಾಳಿ ಮಾಡಲಾಯಿತು.

ಅಮೆರಿಕೆಯ ಹೆಸರಾಂತ ಚಿಲ್ಲರೆ ವ್ಯಾಪಾರದ ಅಂಗಡಿಗಳಿಗೆ ಕಳಿಸಲು ಸಿದ್ಧಪಡಿಸಲಾಗಿದ್ದ ಸಾವಿರಾರು ಉಡುಪುಗಳು ಅಲ್ಲಿದ್ದುದು, ಕ್ಯಾಲಿಫೋರ್ನಿಯಾದ ಕಾರ್ಮಿಕ ವಿಭಾಗದ ಅಧಿಕಾರಿಗಳ ಹಾಗೂ ಎಲ್‌ಮಾಂಟನ ಪೋಲಿಸ್ ಅಧಿಕಾರಿಗಳ ಗಮನಕ್ಕೆ ಬಂತು. ಎಲ್‌ಮಾಂಟನಿಂದ ಉಡುಪುಗಳನ್ನು ಕೊಳ್ಳುತ್ತಿದ್ದ ಹತ್ತಾರು ಪ್ರಮುಖ ಕಂಪನಿಗಳು ಹಾಗೂ ಇತರ ಚಿಲ್ಲರೆ ವ್ಯಾಪಾರಿಗಳ ವಿವರಗಳನ್ನೆಲ್ಲಾ ಆಗಿನ ಕಾರ್ಮಿಕ ಖಾತೆಯ ಅಧಿಕಾರಿ ರಾಬರ್ಟ್ ರೀಚ ನೀಡಿದನು.

ಆಂಟಿಯ ಮನೆಯಲ್ಲಿನ ಖಜಾನ್‌ಯಲ್ಲಿ ೮,೫೦,೦೦೦ ಡಾಲರಿಗಿಂತಲೂ ಹೆಚ್ಚು ನಗದು ಹಣ, ೫೫೦೦೦ ಡಾಲರಿನಷ್ಟು ಬೆಲೆ ಬಾಳುವ ಚಿನ್ನ ಮತ್ತು ಆಭರಣಗಳು ಈ ಅಧಿಕಾರಿಗಳಿಗೆ ದೊರಕಿದವು. ಅಲ್ಲದೆ ಸಾವಿರಗಟ್ಟಲೆ ಡಾಲರ್ ಹಣವನ್ನು ಥೈಲ್ಯಾಂಡಿನ ಬ್ಯಾಂಕ್ ಖಾತೆಗೆ ವರ್ಗಾಯಿಸಿದ ವಿವರಗಳೂ ದೊರಕಿದವು.

ಎಷ್ಟೋ ವರ್ಷಗಳವರೆಗೆ ಕಷ್ಟಪಟ್ಟು ದುಡಿದರೂ ಕೆಲಸಗಾರರಾರಿಗೂ ಲಾಭವಾಗಿರಲಿಲ್ಲ. ಸುಮಾರು ೩ ವರ್ಷಗಳ ನಂತರ ಲೇಕಳು ಮನಸುರಾಂಗಕನ್ ಕುಟುಂಬದವರಿಂದ ಪಡೆದಿದ್ದ ೪೫೦೦ ಡಾಲರ್ 'ಸಾಲ'ವನ್ನು ತೀರಿಸುವಲ್ಲಿ ಸಫಲಳಾಗಿದ್ದಳು. ಇನ್ನೊಬ್ಬ ಮಹಿಳೆ ತನ್ನ ಸಾಲವನ್ನು ಆರು ತಿಂಗಳ ಹಿಂದೆ ತೀರಿಸಿದ್ದರೂ ಆಂಟಿ ಅವಳನ್ನು ಬಿಡುಗಡೆಗೊಳಿಸಲು ಒಪ್ಪಿರಲಿಲ್ಲವೆಂದು ಕ್ಯಾಲಿಫೋರ್ನಿಯಾದ ಅಧಿಕಾರಿಗಳಿಗೆ ಹೇಳಿದಳು.

೧೯೯೬ರ ಮೇ ತಿಂಗಳಿನಲ್ಲಿ ಕ್ಯಾಲಿಫೋರ್ನಿಯಾದ ನ್ಯಾಯಾಲಯ 'ಆಂಟಿ' ಸುನಿಮನಾಸುರಾಂಗಕನ್ನಳಿಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿತಲ್ಲದೆ, ಅವಳು, (ಸುಮಾರು ೪.೫ ದಶಲಕ್ಷ ಡಾಲರಿನಷ್ಟು ಹಣ) ತನ್ನ ಕೆಲಸಗಾರರಿಗಾದ ನಷ್ಟ ಭರ್ತಿಮಾಡುವಂತೆ ಆದೇಶ ನೀಡಿತು. ಆಕೆಯ ಮೂವರು ಗಂಡು ಮಕ್ಕಳು ಹಾಗೂ ಮೂರು ಪಾಲುದಾರರಿಗೂ ೩ ರಿಂದ ೬ ವರ್ಷಗಳ ಜೈಲು ಶಿಕ್ಷೆಯಾಯಿತು. ಸಂಚಾಯಿ ಮತ್ತು ಚವಾಲಿತರೆಂಬ ಇನ್ನಿಬ್ಬರು ಮಕ್ಕಳು ಮಾತ್ರ ತಪ್ಪಿಸಿಕೊಂಡು ಪಾರಾದರು.

ಎಲ್‌ಮಾಂಟನ ಈ ಘಟನೆ ಥೈಲ್ಯಾಂಡಿನ ಎಲ್ಲ ಸಮಾಚಾರ ಪತ್ರಿಕೆಗಳ ಮುಖಪುಟಗಳಲ್ಲಿ ಮುದ್ರಿತವಾಯಿತಲ್ಲದೆ, ಥೈಲ್ಯಾಂಡಿನ ಎಷ್ಟೋ ಜನರಿಗೆ ಮುಜುಗರ ತಂದಿತು.

"ಥೈಲ್ಯಾಂಡಿನ ಕೆಲವು ವ್ಯಕ್ತಿಗಳು ತಮ್ಮ ಸಹಚರರೊಡನೆ ಇಷ್ಟು ಕ್ರೂರವಾಗಿ ವರ್ತಿಸಿದ ವಿಷಯ ಆಘಾತ ತಂದಿದೆ" ಎಂದು ಬ್ಯಾಂಕಾಂಕಿನ ಮಾನವ ಹಕ್ಕುಗಳ ನ್ಯಾಯವಾದಿ ಥಾಂಗಬೈ ಥೊಂಗ್ಪಾವ್ ಹೇಳಿದ್ದಾನೆ. ಇಂಥ ಅಕ್ರಮ ವ್ಯವಹಾರಸ್ಥರ ಬಗ್ಗೆ ಪದೆ ಪದೆ ಜನರಿಗೆ ಎಚ್ಚರಿಕೆ ನೀಡುವಲ್ಲಿ ಸರ್ಕಾರ ವಿಫಲವಾಗಿದೆಂದು ಅವನು ಥೈಲ್ಯಾಂಡಿನ ಸರ್ಕಾರವನ್ನೇ ದೂಷಿಸಿದ.

ಎಲ್ ಮಾಂಟನಿಂದ ಬಿಡುಗಡೆಯಾದ ಬಹಳಷ್ಟು ಕೆಲಸಗಾರರು ಅಮೆರಿಕೆಯಲ್ಲಿಯೇ ಉಳಿದು ಬಿಟ್ಟಿದ್ದಾರೆ. ಲೇಕ ಈಗ ಕ್ಯಾಲಿಫೋರ್ನಿಯಾದ ಒಂದು ಶಾಸನ ಸಮ್ಮತವಾದ ಉಡುಪುಗಳ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಳಲ್ಲದೆ ತನ್ನ ಬಿಡುವಿನ ಸಮಯದಲ್ಲಿ ಇಂಗ್ಲೀಷ್ ಅಭ್ಯಾಸ ಮಾಡುತ್ತಿರುವಳು. ಸಮುದ್ರದಾಚೆಯ ಚಾಕರಿ ಎಷ್ಟೇ ಆಕರ್ಷಕ 'ವಾಗಿ ಕಂಡರೂ ಅದನ್ನು ಕೂಲಂಕಷವಾಗಿ ಪರೀಕ್ಷಿಸಿ ಖಚಿತಪಡಿಸಿಕೊಳ್ಳಬೇಕೆಂಬುದೇ ಅವಳ ಸಂದೇಶ.



ಆಶಾವಾದಿಗೆ ಸಂಕಟದಲ್ಲೂ ಆಸೆಯ ಬೆಳಕು ಕಾಣುತ್ತದೆ; ನಿರಾಶಾವಾದಿಗೆ ಆಸೆಯಲ್ಲೂ ದುಃಖವೇ ಕಾಣುತ್ತದೆ.

-ಹೆಮಾಕ್ ಎಲ್ಲಿಸ್

ಮಕ್ಕಳ ಮಾರಕರೋಗ ಮಿದುಳು ಜ್ವರ

ಡಾ: ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧
ಜಿಲ್ಲಾ: ಬಾಗಲಕೋಟೆ

''.... ಎರಡ ಎರಡ ದಿನ ಜ್ವರಾ ಬಂದುವು ನೆಗಡಿ ಜಪ್ಪಂತ ಸಡ್ಡ ಬಿಟ್ಟೆ. ಮೂರನೇ ದಿನಾ ಜ್ವರಾ ಅಂದ್ರ, ಅಂಥಾ ಇಂಥಾ ಜ್ವರಾ ಅಲ್ಲ. ಹೊಟ್ಟೆಮ್ಯಾಗ ಅಳ್ಳ ಒಡಿಯುವಷ್ಟು. ತಲಿ ಚಿಟಿ ಚಿಟಿ ಅನ್ನತ್ತಂತ ಹಣಿ ಹಣಿ ಬಡಕೊಂತಿದ್ದಾ. ಒಂದೆರಡ್ಡ ಸೂಜಿನಾ ಮಾಡಿಸ್ದಿ, ಏಟೇಟೂ ಕಡಿಮಿ ಆಗಿಲ್ಲ. ಇವತ್ತ ಮುಂಜ್ಯಾನಿಂದ 'ವಾ' ಅಂತ ಬಾಯಿ ಮುಚ್ಚವಲ್ಲ. ಕೇಲಗಣ್ಣ ಹಾಕ್ಕೊಂಡ ಜೀವಾ ಉಳಸ್ರಿ'' ಎಂದು ಹತ್ತು ವರ್ಷದ ಮಗನನ್ನು ಹೊತ್ತು ತಂದ ಕೆಂಚ ಹಲಬುತ್ತಾನೆ.

ಡಾಕ್ಟರಿಗೆ ಸಂಶಯ ಬರುತ್ತದೆ. ವಾಸಿಸುವ ಮನೆಯ ಸುತ್ತಮುತ್ತಲಿನ ಪರಿಸರದ ಬಗ್ಗೆ ಕೇಳುತ್ತಾರೆ? ಮಗುವಿನ ದೀರ್ಘ ತಪಾಸಣೆ ಮಾಡುತ್ತಾರೆ. ಬೆನ್ನಲ್ಲಿ ನೀರು ತೆಗೆದು ವಿಶ್ಲೇಷಿಸುತ್ತಾರೆ. ರಕ್ತ ಪರೀಕ್ಷೆ ಮಾಡುತ್ತಾರೆ. ವರದಿಗಳನ್ನು ಒರೆಗಚ್ಚಿ ಕ್ರೋಢೀಕರಿಸಿದಾಗ ಸಿಕ್ಕ ಉತ್ತರ-ಮೆದುಳುಜ್ವರ.

ಇದು ಸಾಮಾನ್ಯವಾಗಿ ಚಿಕ್ಕ ಮಕ್ಕಳನ್ನು ಕಾಡಿಸುವ ರೋಗವಾದರೂ, ಎಲ್ಲ ವಯಸ್ಸಿನವರೂ ಈ ರೋಗಕ್ಕೆ ತುತ್ತಾಗಿ ತತ್ತರಿಸಿ ಅಸುನೀಗಿದ ದಾಖಲೆಗಳಿವೆ. ಜಗತ್ತಿನ ಮೂಲೆ ಮೂಲೆಗಳಲ್ಲಿ ಕಂಡು ಬಂದರೂ, ಪೆಸಿಫಿಕ್ ನಡುಗಡ್ಡೆಗಳು, ಫಿಲಿಫೈನ್ಸ್, ತೈವಾನ್, ಮಲೇಶಿಯ, ಸಿಂಗಪೂರಗಳಲ್ಲಿ ತನ್ನ ಕರಾಳ ಛಾಯೆಯಿಂದ ಜನರನ್ನು ಅಂಜಿಸಿದೆ. ಭಾರತದಲ್ಲಿ ಮಾತ್ರ ಆಗಾಗ ಗೋಚರಿಸಿ ಕಣ್ಣು ಮುಚ್ಚಾಲೆ ಆಡುತ್ತಲೆ ಇದೆ. ಸಮಶೀತೋಷ್ಣ ವಲಯಗಳಲ್ಲಿ ಬೇಸಿಗೆಯ ಅಂತ್ಯ ಹಾಗೂ ಮಳೆಗಾಲದ ಪ್ರಾರಂಭದಲ್ಲಿ ಕಂಡ ಬಂದರೆ, ಉಷ್ಣ ವಲಯದಲ್ಲಿ ಎಲ್ಲ ಕಾಲದಲ್ಲೂ ಕಂಡು ಬರುತ್ತದೆ. ಈ ರೋಗದ ವೈಶಿಷ್ಟ್ಯವೆಂದರೆ ರೋಗಕಾರಕ ವೈರಸ್ ನರಮಂಡಲಕ್ಕೆ ಮುತ್ತಿಗೆ ಹಾಕಿ ರೋಗದ ಲಕ್ಷಣಗಳನ್ನು ಹೊರ ಹೊಮ್ಮಿಸುವುದು. ಇದು ಮುಖ್ಯವಾಗಿ ಮೂರು ರೂಪಗಳಲ್ಲಿ ತಲೆದೋರುತ್ತದೆ. ಪಿಡುಗು ರೂಪ, ಸ್ಥಳಜನ್ಯವಾಗಿ, ಅಲ್ಲಲ್ಲಿ ಇದ್ದಕ್ಕಿದ್ದಂತೆ ಗೋಚರಿಸುವುದು. ಪಿಡುಗು ರೂಪದ ಪ್ರದೇಶದಲ್ಲಿ ರಸಿಕೆಯ ಸಮೀಕ್ಷೆಯ ರೋಗಹೊರಗೆಡವದ ಸ್ಥಿತಿಯಲ್ಲಿ ಹೆಚ್ಚು ಜನ ಇರುವುದು, ರೋಗಿಗಳು ಅಲ್ಲೊಂದು ಇಲ್ಲೊಂದು ಕಾಣುವುದನ್ನು ಸಾದರಪಡಿಸಿದೆ.

ಇತಿಹಾಸ:

೧೮೭೧ರಲ್ಲಿ ಮೊಟ್ಟ ಮೊದಲು ಈ ರೋಗ ಜಪಾನಿನಲ್ಲಿ ಕಾಣಿಸಿಕೊಂಡಿತು. ೧೯೩೫ರಲ್ಲಿ ಸಾಂಕ್ರಾಮಿಕ ಸ್ವರೂಪ ತಾಳಿತು. ಸಾವು ನೋವುಗಳ ವಿರಾಟ ದರ್ಶನವಾಯಿತು. ರೋಗಕಾರಕ ವೈರಸ್‌ನ್ನು ಪತ್ತೆ ಹಚ್ಚಲಾಯಿತು. ಪೂರ್ವ ವಿಶ್ವದ ವಿವಿಧ ಭಾಗಗಳಿಗೆ ಹೆಜ್ಜೆ ಹಾಕಿತು. ರಷ್ಯ, ಕೊರಿಯ, ಬರ್ಮಾ, ಮಲೇಶಿಯಗಳಿಗೆ ಮುತ್ತಿಗೆ ಹಾಕಿತು. ಸದ್ದಿಲ್ಲದೇ ಭಾರತದ ಗಡಿ ದಾಟಿತು. ನೆಲೆ ನಿಂತಿತು. ಗುಡುಗು ಹಾಕತೊಡಗಿತು. ಗಂಡೆದೆಯ ಗುಂಡಿಗೆಗಳಲ್ಲೂ ನಡುಕ

ಹುಟ್ಟಿಸಿತು. ೧೯೫೫ರಲ್ಲಿ ಇದಕ್ಕೆ ಸಂಬಂಧಿಸಿದ ವೈರಸ್‌ನ್ನು ವೆಲ್ಲೂರಿನಲ್ಲಿ ಸೊಳ್ಳೆಯಿಂದ ಪ್ರತ್ಯೇಕಿಸಲಾಯಿತು. ಮೊದಮೊದಲು ತಮಿಳು ನಾಡು, ಆಂಧ್ರಪ್ರದೇಶಗಳಲ್ಲಿ ಹಾವಳಿ ಎಬ್ಬಿಸಿತು. ಕಾಲಕ್ರಮೇಣ ಹಾವಳಿಯ ಹರವು ಕರ್ನಾಟಕ, ಕೇರಳ, ಗೋವ, ಉತ್ತರಪ್ರದೇಶ, ಬಿಹಾರ, ಅಸ್ಸಾಂ, ಪಶ್ಚಿಮ ಬಂಗಾಳಕ್ಕೂ ಹಬ್ಬಿತು.

ಜಪಾನಿನ ಕೊಕ್ಕರೆ ಜಾತಿಯ ಹಲವು ಪಕ್ಕಿಗಳಲ್ಲಿ ಮೊದಲು ಈ ವೈರಸ್‌ಗಳು ಕಾಣಿಸಿಕೊಂಡವು. ಕ್ಯೂಲೆಕ್ಸ್ ಜಾತಿಯ ಸೊಳ್ಳೆಗಳು ಈ ಪಕ್ಷಿಗಳನ್ನು ಕಚ್ಚಿದಾಗ ವೈರಸ್‌ಗಳು ಸೊಳ್ಳೆಗಳನ್ನು ಸೇರಿದವು. ವೈರಸ್‌ಗಳನ್ನು ಬಳುವಳಿಯಾಗಿ ಪಡೆದ ಸೊಳ್ಳೆಗಳು ಬೇರೆ ಬೇರೆ ಪಕ್ಷಿ ಮತ್ತು ಪ್ರಾಣಿಗಳಿಗೆ ಅವುಗಳನ್ನು ವರ್ಗಾಯಿಸಿದವು. ಜಪಾನಿನ ಈ ಪಕ್ಷಿಗಳು ಭಾರತಕ್ಕೆ ವಲಸೆ ಬಂದಾಗ ಮೆದುಳು ಜ್ವರಕ್ಕೆ ಕಾರಣೀಭೂತವಾದ ವೈರಸ್‌ಗಳನ್ನು ನಮ್ಮ ದೇಶದ ಪಕ್ಷಿಗಳಿಗೂ ಸೊಳ್ಳೆಗಳ ಮುಖಾಂತರ ಕಾಣಿಕೆ ನೀಡಿದವು. ರೋಗ ಕಾರಣ ವೈರಸ್ ಹೊಂದಿದ ಹಂದಿ ಹಾಗೂ ಇತರ ಸಾಕು ಪ್ರಾಣಿಗಳು, ಪಕ್ಷಿಗಳು ಈ ರೋಗದ ಸೋಂಕಿನ ಮೂಲವಾಗಿರುತ್ತದೆ. ಇವು ವೈರಸ್‌ಗಳ ವೃದ್ಧಿ, ಮಾರ್ಪಾಡು ಹಾಗೂ ಬೆಳವಣಿಗೆಯ ಕೇಂದ್ರಗಳಂತೆ ವರ್ತಿಸುತ್ತವೆ. ಸೊಳ್ಳೆಗಳು ಇಂತಹ ಪಶು-ಪಕ್ಷಿಗಳನ್ನು ಕಚ್ಚಿ ವೈರಸ್‌ಗಳನ್ನು ಪಡೆದು, ನಮ್ಮ ಜನರಿಗೆ ನೀಡಿದವು. ಈ ರೀತಿ ಮೆದುಳುಜ್ವರವು ಜಪಾನಿನಿಂದ ನಮ್ಮ ದೇಶಕ್ಕೆ ಬಂತು.

ರೋಗದ ಪ್ರಕಾರಗಳು

ರೋಗಕಾರಕ ವೈರಸ್ ಮೇಲಿಂದ ಮುಖ್ಯವಾಗಿ ಐದು ಪ್ರಕಾರಗಳನ್ನು ಇಲ್ಲಿಯ ವರೆಗೆ ಗುರುತಿಸಲಾಗಿದೆ.

೧. ಸೇಂಟ್ ಲೂಯಿಸ್ ಮೆದುಳುಜ್ವರ
೨. ಪೂರ್ವ ತಟ್ಟಿನ ಮೆದುಳುಜ್ವರ
೩. ಪಶ್ಚಿಮ ತಟ್ಟಿನ ಮೆದುಳುಜ್ವರ
೪. ಕ್ಯಾಲಿಫೋರ್ನಿಯ ಮೆದುಳುಜ್ವರ
೫. ಜಪಾನಿನ ಮೆದುಳುಜ್ವರ

ಭಾರತದಲ್ಲಿ ಕಂಡು ಬರುವ ಮೆದುಳು ಜ್ವರ 'ಜಪನೀಜ-ಬಿ ಎನ್‌ಕೆಫೆಲೈಜಿಸ್ ವೈರಸ್' ದಿಂದ ಬರುತ್ತದೆ. ಬಳ್ಳಾರಿಗೆ ಬಂದ ಬ್ರೇನ್ ಫೀವರ್ ಭೂತ ಮಕ್ಕಳಿದ್ದ ಮನೆಯ ಬಾಗಿಲನ್ನು ತಟ್ಟಿತು. ಕೈಗೆ ಸಿಕ್ಕವರ ಕಾಡಿಸಿ ಕಾಡಿಸಿ ಪ್ರಾಣ ತೆಗೆಯಿತು. ಬಳ್ಳಾರಿಯ ಬಿಸಿಲಿನ ಬೇಗೆ ಅದಕ್ಕೂ ತಗಲಿರಬೇಕು; ಹೀಗಾಗಿ ರಾಯಚೂರು ಜಿಲ್ಲೆಗೂ ಧಾವಿಸಿತು. ಕೊಪ್ಪಳಕ್ಕೂ ಹೆಜ್ಜೆ ಹಾಕಿತು. ಕೋಲಾರದಲ್ಲೂ ಕೂಗಿತು.. ಚಿತ್ರದುರ್ಗದಲ್ಲಿ ಚೆಲ್ಲಾಟಕ್ಕಿಳಿಯಿತು. ಈ ವರ್ಷ ಈಗಾಗಲೇ ೩೧೦ ಜನರಿಗೆ ಮುತ್ತಿಗೆ ಹಾಕಿ, ೫೨ ಮಕ್ಕಳ ಮೇಲೆ ಮಣ್ಣು ಎಳೆದಿರುವ ಬ್ರೇನ್ ಫೀವರ್ ಭೂತದ ಚೇಷ್ಟೆ ಇನ್ನೂ ತಗ್ಗಿಲ್ಲ...

ವರ್ಷದಲ್ಲಿ ಸೆಪ್ಟೆಂಬರ್‌ನಿಂದ ಜನವರಿ ತಿಂಗಳ ಮಧ್ಯೆ ಕಾಡುವ ಈ ಕಾಯಿಲೆ ಆತಂಕದಲ್ಲಿ ಮುಳುಗಿಸಿ ಅನೇಕ ಎಳೆ ಪ್ರಾಣಗಳನ್ನು ಬಲಿ ತೆಗೆದುಕೊಂಡು ಮರೆಯಾಗುವ 'ಮೆದುಳು ಜ್ವರ'ದ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ 'ತುರ್ತಾಗಿ ಪರಿಹರಿಸಬೇಕಾದ ರೋಗ' ಎಂದು ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಂಟಿ ನಿರ್ಧಾರ ತೆಗೆದುಕೊಳ್ಳದಿದ್ದಲ್ಲಿ, ಹೊಸ ಶತಮಾನದಲ್ಲಿ ಮಕ್ಕಳಿಗೆ, ಬಡಮಕ್ಕಳಿಗೆ ಶಾಪವಾಗಿ ನಿರಂತರವಾಗಿ ಕಾಡುವುದರಲ್ಲಿ ಅನುಮಾನಗಳಿಲ್ಲ. ಆಂಧ್ರಪ್ರದೇಶ, ಕರ್ನಾಟಕದಲ್ಲಿ ಆಗಿರುವ ಸಾವು ನೋವುಗಳಿಂದ ಉದ್ಭವಿಸಿದ ಭೀಕರ ಭಯಾನಕ ಚಿತ್ರ ದೇಶದ ಮುಂದಿದೆ.

ಈ ಜ್ವರದ ತಾಪಕ್ಕೆ ಅನೇಕ ಹಸುಳೆಗಳು ಸಾವನ್ನಪ್ಪಿವೆ. ಬದುಕಿ ಉಳಿದವು ಅಂಗ ವಿಕಲತೆಯ ಬಳುವಳಿ ಪಡೆದಿವೆ.

ರೋಗವಾಹಕ:

ಕ್ಯೂಲೆಕ್ಸ್ ವಿಷ್ಣುಯಿ ಟ್ರೈಟಿನಿಯೊರಿಂಕಸ್ ಜಾತಿಯ ಸೊಳ್ಳೆ ಈ ರೋಗ ಹರಡುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ಬತ್ತದ ಗದ್ದೆಯಲ್ಲಿ, ನಿಂತ ನೀರಲ್ಲಿ ತತ್ತಿಯನ್ನಿಟ್ಟು ವಂಶಾಭಿವೃದ್ಧಿ ಮಾಡುತ್ತದೆ. ''ಸೊಳ್ಳೆಗಳ ಮೊಟ್ಟೆಗಳಿಂದ ಹೊರಬರುವ ಮರಿಗಳನ್ನು ಕಪ್ಪೆಗಳು ತಿಂದು ತೇಗುವುದರಿಂದ ಸೊಳ್ಳೆಗಳ ಸಂತಾನಾಭಿವೃದ್ಧಿ ಕುಂಠಿತವಾಗುತ್ತದೆ. ಆದರೆ ಆ ರೀತಿಯ ಪ್ರಾಕೃತಿಕ ಸಮತೋಲನ ಕಪ್ಪೆಕಾಲುಗಳಿಗಾಗಿ ಕಪ್ಪೆಗಳನ್ನು ಕೊಲ್ಲುವುದರ ಮೂಲಕ ಇತ್ತೀಚಿನ ದಿನಗಳಲ್ಲಿ ತಪ್ಪಿ ಹೋಗುತ್ತಿದೆ. ಈ ನಿಟ್ಟಿನಲ್ಲಿ ಕಪ್ಪೆಯ ಕಾಲುಗಳ ಅಧಿಕ ನಿರ್ಯಾತ ಸೊಳ್ಳೆಗಳ ಹೆಚ್ಚಳಕ್ಕೆ ಕಾರಣ ಎಂದು ತಿಳಿದುಕೊಳ್ಳಬೇಕಾಗಿದೆ''- ಎಂದು ಲೋಕಸಭೆಯಲ್ಲಿ ೧೯೮೭ರ ಸಾಂಕ್ರಾಮಿಕ ವೇಳೆಯಲ್ಲಿ ಸಚಿವರು ಗಮನ ಸೆಳೆಯುವ ಸೂಚನೆ ಮಂಡಿಸಿದ್ದು ಉಲ್ಲೇಖನೀಯ ಸೊಳ್ಳೆಗಳ ಹತೋಟಿಯಲ್ಲಿ ಕಪ್ಪೆಗಳ ಪಾತ್ರವನ್ನು ಮನಗಂಡ ಫ್ರಾನ್ಸ್ ಸರಕಾರ ''ಕಪ್ಪೆಕಾಲುಗಳಿಲ್ಲದೇ ಮನುಷ್ಯ ಬದುಕಬಲ್ಲ. ಆದರೆ ತನ್ನ ಕಾಲುಗಳಿಲ್ಲದ ಕಪ್ಪೆ ಬದುಕಿರಲಾರದು'' ಎಂದು ಘೋಷಿಸಿ, ಕಪ್ಪೆಗಳ ಉಳುವಿಗಾಗಿ ಕರೆನೀಡಿತು. ಸಾರ್ವಜನಿಕರ ಸಹಕಾರ ಕೋರಿತು. ಇದು ನಮ್ಮ ದೇಶಕ್ಕೂ ಇಂದು ಅತ್ಯವಶ್ಯ ಮತ್ತು ಅನಿವಾರ್ಯ.

ಕ್ಯೂಲೆಕ್ಸ್ ಜಾತಿಯ ಈ ಸೊಳ್ಳೆ ಮುಖ್ಯವಾಗಿ ಹಂದಿಯನ್ನು ಕಚ್ಚುತ್ತಾದರೂ ಎತ್ತು, ಎಮ್ಮೆ, ದನ ಕರುಗಳನ್ನು, ಹಕ್ಕಿಗಳನ್ನೂ ಕಚ್ಚುತ್ತದೆ. ಕಾರಣ ಹಂದಿಗಳಿದ್ದಲ್ಲಿ ಮಾತ್ರ ಈ ರೋಗ ಬರುತ್ತದೆ ಎಂಬುದು ತಪ್ಪು ಗ್ರಹಿಕೆ. ಮನುಷ್ಯನು ಆಕಸ್ಮಿಕವಾಗಿ ವಾಹಕ ಸೊಳ್ಳೆಯ ಕಡಿತಕ್ಕೆ ಬಲಿಯಾಗಿ ಮೆದುಳು ಜ್ವರದಿಂದ ನರಳಿ ನರಳಿಸಬೇಕಾಗುತ್ತದೆ.

ರೋಗವಾಹಕ ಸೊಳ್ಳೆ ಆರೋಗ್ಯವಂತನನ್ನು ಕಚ್ಚಿದ್ದಾಗ ರಕ್ತದ ಮೂಲಕ ವೈರಸ್‌ಗಳು ದೇಹ ಪ್ರವೇಶ ಮಾಡುತ್ತವೆ. ಅವು ಬಿಡುಗಡೆ ಮಾಡುವ ವಿಷವಸ್ತುಗಳಿಂದಾಗಿ ರೋಗಿಯು ಜ್ವರದಿಂದ ನರಳತೊಡಗುತ್ತಾನೆ. ಅನಂತರ ವೈರಸ್‌ಗಳು ನರಮಂಡಲಕ್ಕೆ ಮುತ್ತಿಗೆ ಹಾಕುತ್ತದೆ. ಪರಿಣಾಮವಾಗಿ ಶಿಥಿಲಗೊಂಡ ನರಕೋಶಗಳು ರಕ್ತನಾಳಗಳ ಸುತ್ತುವರಿದು ಹತ್ತಿಕ್ಕುವುದರಿಂದ ರಕ್ತಸಂಚಾರದಲ್ಲಿ ಅಡೆತಡೆಯುಂಟಾಗುತ್ತದೆ. ಹೀಗಾಗಿ ಮೆದುಳುಜ್ವರ ಅಪಾಯಕರ ಪರಿಣಾಮಗಳನ್ನುಂಟು ಮಾಡುತ್ತದೆ. ಸೂಕ್ತ ಸಮಯದಲ್ಲಿ ಯೋಗ್ಯ ಚಿಕಿತ್ಸೆ ದೊರೆಯದಿದ್ದಲ್ಲಿ ರೋಗಿಯು ಸಾವನ್ನಪ್ಪುತ್ತಾನೆ. ಒಂದು ವೇಳೆ ಬದುಕಿ ಉಳಿದರೂ ಮಾನಸಿಕ ಇಲ್ಲವೆ ದೈಹಿಕ ನ್ಯೂನ್ಯತೆಗೊಳಗಾಗುತ್ತಾನೆ.

ರೋಗಕಾರಕ

ಇದು ವೈರಸ್‌ನಿಂದ ಬರುವ ಕಾಯಿಲೆ. ಇಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ನೋಡಲು ಚೆಂಡಿನಂತೆ ಕಾಣುವುದು. ಮೈತುಂಬ ಕೂದಲುಗಳಂಥ ಅಂಗಾಂಗಳನ್ನು ಹೊಂದಿರುವುದು. ಇವುಗಳ ಸಹಾಯದಿಂದ ಇದು ಜೀವಕೋಶಗಳ ಮೇಲೆ ಅಡ್ಡಾಡುವುದು, ಓಡಾಡುವುದು, ಅವುಗಳನ್ನು ತಬ್ಬಿಕೊಳ್ಳುವುದು ಜೀವಕೋಶಗಳ ಭಿತ್ತಿಗಳಲ್ಲಿ ರಂಧ್ರಕೊರೆದು ಅವುಗಳ ಅಂತರಂಗಕ್ಕೆ ಸೇರಬಲ್ಲದು. ಜೀವಕೋಶಕ್ಕೆ ಸರಬರಾಜು ಆಗುವ ಆಹಾರಾಂಶಗಳನ್ನು ಅಡ್ಡಿ ಆತಂಕಗಳಿಲ್ಲದೇ ಹೀರಿ ತಾನು ಬದುಕುವುದು. ಆಶ್ರಯದಾತನಿಗೆ

ಅಶಕ್ತತೆಯ ಉಡುಗೊರೆ ನೀಡುವುದು. ಜೀವಕೋಶ ಇದನ್ನೆಲ್ಲಾ ಸಹಿಸಿದರೂ ವೈರಸ್ ಉಪಟಳ ಕಡಿಮೆಯಾಗುವುದಿಲ್ಲ. ಉಂಡಮನೆ ಗಳಾಎಣಿಸುವ ಮನೋಭಾವ ಮೈಗೂಡಿಸಿಕೊಂಡಿರುವ ಈ ವೈರಸ್ ಜೀವ ಕೋಶಗಳಿಗೆ ಚಿತ್ರಹಿಂಸೆ ಕೊಟ್ಟು ಛಿದ್ರ ಛಿದ್ರಗೊಳಿಸಬಹುದು. ಮನುಷ್ಯನ ದೇಹ ದಲ್ಲಿಯ ಯಾವುದೇ ಜೀವಕೋಶಗಳ ಮೇಲೆ ಇದು ದಾಳಿ ಮಾಡಬಹುದು. ಆದರೆ, ಈ ವೈರಸ್‌ಗೆ ಮೆದುಳಿನ ಜೀವಕೋಶಗಳೆಂದರೆ ಅತ್ಯಂತ ಪ್ರೀತಿ.

ಈ ರೋಗಕ್ಕೆ ಕಾರಣವಾಗಿರುವ ವೈರಸ್ ಹಂದಿಗಳ ದೇಹದಲ್ಲಿ ಸಮೃದ್ಧಿಯಾಗಿ ಬೆಳೆಯುವುದು. ಇದರ ವಂಶಾಭಿವೃದ್ಧಿಗೆ ಸ್ಥಳ ದಾನ ಮಾಡಿದ ಹಂದಿಯನ್ನು ಇದು ಎಂದೂ ಪೀಡಿಸುವುದಿಲ್ಲ. ಅಷ್ಟರಮಟ್ಟಿಗೆ ಇದು ಕೃತಜ್ಞ; ಕ್ಯೂಲೆಕ್ಸ್ ವಿಷ್ಣುಯಿ ಟ್ರೈಜನಿಯೋರಿಂಕಸ್ ಜಾತಿಯ ಸೊಳ್ಳೆ ಈ ವೈರಸ್ ಜೀವಿಯನ್ನು ಹಂದಿಯಿಂದ ಹಂದಿಗೆ, ಹಂದಿಯಿಂದ ಇತರೆ ಪ್ರಾಣಿ ಪಕ್ಷಿಗಳಿಗೆ ಸ್ಥಳಾಂತರಿಸುವುದು. ಹಂದಿಯಿಂದ ಮಾನವರಿಗೂ ವರ್ಗಾಯಿಸುವುದು. ಆದರೆ, ಇಂದಿನವರೆಗೆ ಮಾನವರಿಂದ ಮಾನವರಿಗೆ ರೋಗ ಪ್ರಸಾರವಾಗುವುದು ಕಂಡುಬಂದಿಲ್ಲ.

ರೋಗದ ಲಕ್ಷಣಗಳು :

ರೋಗವು ಸಾಮಾನ್ಯವಾಗಿ ೪-೧೪ ದಿನಗಳೊಳಗೆ ಉಲ್ಬಣಗೊಳ್ಳುತ್ತದೆ. ಮಗು ಮಂಕಾಗಿರುತ್ತದೆ. ತೀವ್ರ ತಲೆನೋವು, ಮೈಕೈನೋವು, ವಾಂತಿ, ನಡುಕದಿಂದೊಡಗೂಡಿದ ವಿಪರೀತ ಜ್ವರ ಕಾಣಿಸಿಕೊಂಡ ಒಂದೆರಡು ದಿನಗಳಲ್ಲೇ ಅಂಗಾಂಗಳ ನಿಯಂತ್ರಣ ತಪ್ಪುತ್ತದೆ. ಮಿದುಳಿನಲ್ಲಿ ಉರಿತ ಆನುವಳಿಕೆ, ಬದಲಾವಣೆಗಳು ಕಂಡು ಬರುತ್ತವೆ. ಹೀಗಾಗಿ ಕುತ್ತಿಗೆ ಅಲ್ಲಾಡಿಸಲು ಬರುವುದಿಲ್ಲ. ದಿನಗಳೆದಂತೆ ದೃಷ್ಟಿ ಮಂದವಾಗುವುದಲ್ಲದೇ, ಧ್ವನಿಯೂ ಉಡುಗುತ್ತದೆ. ಅಸಂಬದ್ಧವಾಗಿ ಪ್ರತಿಕ್ರಿಯಿಸುವ ಪಾಪೆ ಮಾಂಸಖಂಡಗಳ ಸೆಳೆತ, ಸೆಳವುಗಳು , ಪ್ರಜ್ಞಾಹೀನತೆ, ಲಕ್ವ ಹೊಡೆಯುವುದು ಈ ರೋಗದ ಅಂತಿಮ ಹಂತದಲ್ಲಿ ಕಂಡು ಬರುವ ಲಕ್ಷಣಗಳು. ತೂಕವು ತ್ವರಿತ ಗತಿಯಲ್ಲಿ ಇಳಿಯುತ್ತದೆ. ಜ್ವರ ಇಳಿಯದೇ ಇರುವುದು, ಬಹಳ ಬೆವರು ಸುರಿಸುವಿಕೆ, ವೇಗದ ಉಸಿರಾಟಗಳು ಅಪಾಯಕರ ಮುನ್ಸೂಚನೆಯನ್ನು ತಿಳಿಸುವ ಚಿನ್ಹೆಗಳು.

ಈ ರೋಗದ ಬಾಹುಬಂಧನದಲ್ಲಿ ಬಂಧಿತ ರಾದವರು ಶೇ. ೬೦ರಷ್ಟು ಜನ ಸಾವನ್ನಪ್ಪುತ್ತಾರೆ. ಉಳಿದವರಲ್ಲಿ ಶೇ.೧೦ ರಿಂದ ೨೦ ಜನ ನರಗಳಿಗೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಾರೆ. ಬುದ್ಧಿ ಮಾಂದ್ಯತೆ, ಅಪಸ್ಮಾರ, ಪಾರ್ಶ್ವವಾಯು, ಕಿವುಡುತನ, ದೃಷ್ಟಿಮಾಂದ್ಯಗಳು ಬಳುವಳಿಯಾಗಿ ಉಳಿಯಬಹುದು.

ಚಿಕಿತ್ಸೆ:

ಇದು ವೈರಸ್‌ನಿಂದ ಬರುವ ರೋಗವಾದ್ದರಿಂದ ತಕ್ಕ ಜೀವಿರೋಧಕಗಳಾವೂ ಇಲ್ಲ. ಔಷಧೋಪಚಾರ ಲಕ್ಷಣಕ್ಕನುಗುಣವಾಗಿ ಉಪಚಾರ ಮಾಡುತ್ತ, ಅಲ್ಲಸಲ್ಲದ ಅಪಾಯಗಳು ಜರುಗದಂತೆ ನಿರೀಕ್ಷಿಸುವುದು ಮಾತ್ರ ಆಗಿರುತ್ತದೆ.

೧. ರೋಗಿಯನ್ನು ಚೆನ್ನಾಗಿ ಗಾಳಿ, ಬೆಳಕು ಇರುವ ಸ್ಥಳದಲ್ಲಿ ಮಲಗಿಸಬೇಕು.

೨.ಮೂತ್ರಕೋಶ, ಗುದನಾಳ, ಶ್ವಾಸನಾಳ ಗಳ ಕಾಳಜಿ ತೆಗೆದುಕೊಳ್ಳುವುದು.

೩. ಜ್ವರ ತೀವ್ರವಾಗಿ ಏರದಂತೆ ನೋಡಿಕೊಳ್ಳುವುದು.

೪. ಸಿರಗಳ ಮೂಲಕ ಗ್ಲೂಕೋಸ್, ಲವಣದ್ರವಗಳನ್ನು ಕೊಟ್ಟು ದೇಹದ್ರವ್ಯಗಳ ಸಮತೋಲನ ಕಾಯ್ದಿಡುವುದು ಇತ್ಯಾದಿ.

ರೋಗ ನಿಯಂತ್ರಣ:

೧. ಯಾರ ಮನೆಯಲ್ಲಿಯೇ ಆಗಲಿ, ಯಾವ ಸ್ಥಳದಲ್ಲಿಯೇ ಆಗಲಿ ಈ ರೋಗ ಬಂದೊಡನೆ ಆರೋಗ್ಯ ಇಲಾಖೆಗೆ ತಿಳಿಸಬೇಕು.

೨. ಈ ರೋಗವು ತಲೆದೋರಬಹುದಾದಂತಹ ಪ್ರದೇಶಗಳಲ್ಲಿ ಜನರಿಗೆ ರೋಗ ನಿರೋಧಕ ಲಸಿಕೆ ಹಾಕಿಸಿ ಸಕ್ರಿಯ ನಿರೋಧ ಶಕ್ತಿಯನ್ನು ಸಾಮೂಹಿಕವಾಗಿ ಉತ್ಪನ್ನ ಮಾಡುವುದು.

೩. ಎಳೆದಿರುವಾಗ ರೋಗ ಗುರುತಿಸಿ ಯಶಸ್ವಿ ಚಿಕಿತ್ಸೆ ಮತ್ತು ಶುಶ್ರೂಷೆ ಮಾಡುವುದು.

೪. ಸೊಳ್ಳೆಗಳಿಂದ ರಕ್ಷಣೆ ಪಡೆಯುವುದು.

ಅ) ಸೊಳ್ಳೆಗಳನ್ನು ಸೂಕ್ತ ಕ್ರಿಮಿನಾಶಕಗಳಿಂದ ನಾಶಪಡಿಸುವುದು.

ಬ) ಮನೆಯ ಸುತ್ತಮುತ್ತ ಕೊಳಚೆ ಪ್ರದೇಶಗಳಿಗೆ ಅವಕಾಶ ಕೊಡದಿರುವುದು.

ಕ) ಮಲಗುವಾಗ ಸೊಳ್ಳೆ ಪರದೆಯನ್ನು ಉಪಯೋಗಿಸುವುದು. ಮನೆಗಳಿಗೆ ಸೊಳ್ಳೆಗಳು ತೂರಲಾರದಂತೆ ತಂತಿ ಜಾಲಗಳನ್ನು ಹಾಕಿಸುವುದು. ಸೊಳ್ಳೆಗಳನ್ನು ಓಡಿಸುವ ಘಾಟು ಪದಾರ್ಥಗಳನ್ನು ಉಪಯೋಗಿಸುವುದು.

೫. ಈ ರೋಗ ಕಂಡು ಬಂದ ಕೂಡಲೇ ಹಂದಿಗಳನ್ನೆಲ್ಲ ಮಾನವನ ವಾಸದಿಂದ ಕನಿಷ್ಠ ೨ ಕಿಮೀ ದೂರ ಓಡಿಸುವುದು. ಹಂದಿಗಳು ಮೆದುಳು ಜ್ವರದ ಪ್ರವರ್ಧಕಗಳಾಗಿರುವುದರಿಂದ ಹಂದಿಗೂಡುಗಳು ಮತ್ತು ಜಾನುವಾರಗಳನ್ನು ಕಟ್ಟಿ ಹಾಕುವ ಜಾಗಗಳು ಮನೆಯ ಪರಿಸರದಿಂದ ದೂರ ಇರುವಂತೆ ನೋಡಿಕೊಳ್ಳುವುದು.

ಮೆದುಳುಜ್ವರ ಈ ದೇಶಕ್ಕೆ ಹೊಸ ರೋಗವಂತೂ ಅಲ್ಲ. ಕಳೆದ ಎರಡೂವರೆ ದಶಕಗಳಿಂದ ದೇಶದಲ್ಲಿ ಚೆಲ್ಲಾಟವಾಡುತ್ತಲೇ ಇದೆ. ಈ ಜ್ವರಕ್ಕೆ ನಿಖರವಾದ, ನಿರ್ದಿಷ್ಟವಾದ ಔಷಧಿಗಳಿಲ್ಲದೇ, ವೈದ್ಯಕೀಯ ವಿಜ್ಞಾನಕ್ಕೆ ಸವಾಲೊಡ್ಡಿರುವುದಂತೂ ನಿಜ. ಆದರೆ, ಈಗಿನ ವ್ಯವಸ್ಥೆಯಲ್ಲಿ 'ಯುದ್ಧ ಕಾಲೇ ಶಸ್ತ್ರಾಭ್ಯಾಸ'ದ ಧೋರಣೆಯಿಂದಾಗಿ, ವರ್ಷ ವರ್ಷವೂ ಇದಕ್ಕೆ ಬಲಿಯಾಗುವವರು ಹೆಚ್ಚುತ್ತಲೇ ಇದ್ದಾರೆ. ಜ್ವರ ಕಾಣಿಸಿಕೊಂಡು ಸುದ್ದಿಯಾದಾಗ, ಸಂಬಂಧಪಟ್ಟ ಸ್ಥಳಗಳಲ್ಲಿ ಅದರ ನಿಯಂತ್ರಣಕ್ಕೆ ಕ್ರಮಗಳನ್ನು ಕೈಕೊಂಡು ಅನಂತರ ಕೈತೊಳೆದುಕೊಳ್ಳುತ್ತಿರುವುದು ಹೊಸತೇನಲ್ಲ. ಈ ಮನೋಭಾವದ ಲಾಭವನ್ನು ಮೆದುಳುಜ್ವರ ಚೆನ್ನಾಗಿ ಬಳಸಿಕೊಂಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಯುಕ್ತವಾಗಿ ಇದರ ನಿಯಂತ್ರಣಕ್ಕೆ ಯುದ್ಧೋಪಾದಿಯಲ್ಲಿ ಸಮಗ್ರ ಕಾರ್ಯಕ್ರಮ ರೂಪಿಸದೇ ಹೋದಲ್ಲಿ ನಾಳೆಯ ಬದುಕನ್ನು ಕಾಣಬೇಕಾದ ಅನೇಕ ಕಂದಮ್ಮಗಳು ಇಂದೇ ಸಾವನ್ನಪ್ಪುವಂತಹ ವ್ಯವಸ್ಥೆ ಹೊಸ ಶತಮಾನಕ್ಕೆ ಮುಂದುವರೆದರೆ ದೇಶದ ಸಾಧನೆ ಸೊನ್ನೆಯೇ ಆದೀತು;

ಚಿಂತೆಯನ್ನು ಗೆಲ್ಲಲು ಐದು ದಾರಿಗಳು

ಗಂಗಾ ಬಿ. ರಾಜಪುರೋಹಿತ
೭೧೬ ರೇಣುಕ ಕೃಪ, ಹದಿನಾರನೆಯ
ಮುಖ್ಯರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ಸುಭಾಷಿತಕಾರ ಹೇಳಿದ್ದಾನೆ ''ಚಿಂತೆಗೂ ಚಿತೆಗೂ ವ್ಯತ್ಯಾಸವಿರುವುದು ಕೇವಲ ಬಿಂದುವಿನಲ್ಲಿ. ಆದರೆ ಚಿತೆಯು ಮೃತನನ್ನು ಸುಡುತ್ತದೆ, ಚಿಂತೆಯಾದರೋ ಜೀವಂತನನ್ನೇ ದಹಿಸುತ್ತದೆ.''

ಚಿಂತೆ ಮಾಡುವುದು ಮನುಷ್ಯನ ಸ್ವಭಾವದ ಒಂದು ಸಹಜ ಕ್ರಿಯೆ. ಇದರಿಂದಾಗಿ ಅವನ ಭಾವನಾಶಕ್ತಿ ಮತ್ತು ವೇಳೆ ಎರಡೂ ವ್ಯರ್ಥ ವ್ಯಯವಾಗುತ್ತವೆ. ಚಿಂತೆ ಮಾಡುವ ಈ ಕುತೂಹಲಕಾರಿ ಪ್ರವೃತ್ತಿಯನ್ನು ನನ್ನ ಎಷ್ಟೋ ರೋಗಿಗಳಲ್ಲಿ ನೋಡುತ್ತ ಬಂದಿದ್ದೇನೆ. ಎಷ್ಟೋ ದಿನಗಳ ಅನಂತರ ನಡೆದೀತೆಂಬ ಭಯದಿಂದ ಅಥವಾ ಎಂದೂ ನಡೆಯದೇ ಇರುವಂಥ ಘಟನೆಯ ಬಗ್ಗೆ ವ್ಯರ್ಥ ಚಿಂತಿಸುವವರನ್ನು ಕಂಡಿದ್ದೇನೆ. ಮುಂದೆಂದೋ ಒಂದು ದಿನ ಹೀಗಾಗಬಹುದೇ, ಹಾಗಾದರೆ ಹೇಗೆ ಎಂಬ ವಿಚಾರದಲ್ಲಿ ನಿದ್ರೆ ಮಾಡದೇ ಚಿಂತಿಸುವವರನ್ನು ನೋಡಿದ್ದೇನೆ. ಒಬ್ಬ ಹೆಂಗಸು ತನ್ನ ಗಂಡನಿಗೆ ಬೇರೆ ಊರಿಗೆ ವರ್ಗವಾಗಬಹುದು, ಯಾವುದೊ ಗೊತ್ತಿಲ್ಲದ ಊರಿಗೆ ಹಾಕಬಹುದು ಎಂದು ಚಿಂತಿಸುತ್ತ ಊಟ ನಿದ್ದೆ ಇಲ್ಲದೇ, ಒಂಬತ್ತು ತಿಂಗಳು ಕೊರಗಿದ್ದನ್ನು ಗಮನಿಸಿದ್ದೇನೆ. ಈ ರೀತಿ ಚಿಂತೆ ಮಾಡುವ ಪ್ರವೃತ್ತಿಯನ್ನು ''ಭವಿಷ್ಯದಿಂದ ಕಷ್ಟವನ್ನು ಎರವಲು ಪಡೆದಂತೆ'' ಎಂದೆನ್ನಬಹುದು. ಇದನ್ನು ''ಬಹು ದೂರದ ಚಿಂತೆಯನ್ನು ಬರಮಾಡಿಕೊಂಡಂತೆ ಎಂದು ಕರೆಯುತ್ತೇನೆ''. ಈ ಪ್ರವೃತ್ತಿ ಬೆಳೆಯುವ ಮೊದಲೇ ಗುರುತಿಸಿ ಇದು ಮನುಷ್ಯನ ಭಾವನೆಗಳ ಮೇಲೆ ಮಾಡುವ ದುಷ್ಪರಿಣಾಮಗಳನ್ನು ತಪ್ಪಿಸುವುದು ತುಂಬಾ ಮಹತ್ವದ ಕೆಲಸವಾಗಿದೆ. ಇದು ಒಂದು ಕಷ್ಟಕರವಾದದ್ದು ಹೌದು. ಈ ಪ್ರಯತ್ನದಲ್ಲಿ ಐದು ಹೆಜ್ಜೆಗಳನ್ನು ಗುರುತಿಸಬಹುದು.

ಒಂದನೆಯ ಹೆಜ್ಜೆ: ಚಿಂತೆಯನ್ನು ಅಲ್ಲಗಳೆಯುವುದು :

ನಡೆಯುವ ಘಟನೆಗಿಂತ ಅದು ನಡೆದೀತೇ ಎಂಬ ಭಯವೇ ಹೆಚ್ಚು ನೋವನ್ನು ಉಂಟುಮಾಡುತ್ತದೆ. ಮನುಷ್ಯ ಎಷ್ಟೋ ಬಗೆಯ ಚಿಂತೆಗಳನ್ನು ಮಾಡುತ್ತಾನೆ. ಅವು ಎಂದೂ ನಡೆಯದೇನೇ ಇರಬಹುದು. ಇದನ್ನು ಮಾಂಟೇನ್ ಎಂಬ ಫ್ರೆಂಚ್ ಪ್ರಬಂಧಕಾರ ''ನನ್ನ ಜೀವನ ಎಂದೂ ನಡೆಯದೇ ಇರುವ ಕಷ್ಟಗಳ ಸರಮಾಲೆ'' ಎಂದು ಅನ್ನುತ್ತಿದ್ದ. ನಿಮ್ಮ ಭಯವನ್ನು ಪ್ರಶ್ನೆ ಮಾಡಿ ನೋಡಿರಿ. ಇಂಥದೊಂದು ಘಟನೆ ನಡೆದೀತೇ ಎಂದು ಪರೀಕ್ಷಿಸಿರಿ. ಅನೇಕ ಸಲ ಇದೇ ರೀತಿ ಭಯ ಬಂದು ಆ ಭಯ ಸುಳ್ಳು ಎಂದು ನಿಮ್ಮ ಅನುಭವಕ್ಕೆ ಬಂದಿರಬಹುದಲ್ಲ? ಇದರ ಅರ್ಥ ಘಟನೆಗಿಂತ

ಈ ಲೇಖನ ಜನವರಿ ೨೦೦೦ ದ ರೀಡರ್ಸ್ ಡೈಜೆಸ್ಟ್‌ನ ಸಂಚಿಕೆಯಲ್ಲಿ ಬಂದ ಡಾ|| ಡೇವಿಡ್ ಬಿ. ಪೋಸನ್ ಅವರ 'ಫೈವ್ ವೇಸ್ ಟು ಕಾನ್‌ಕರ್ ವರಿ' ಎಂಬ ಲೇಕನದ ಭಾವಾನುವಾದ.

ಆದರ ಬಗೆಗಿನ ಭಯವೇ ಹೆಚ್ಚು ಕಷ್ಟಕರವಾಗಿರುತ್ತದೆ. ಆದುದರಿಂದ ಯಾವುದೇ ಬಗೆಯ ಚಿಂತೆಯನ್ನು ಮೊದಲು ಅಲ್ಲಗಳೆಯಿರಿ. ಒಂದು ವೇಳೆ ನಿಜವಾಗುವದೇ ಆದರೆ ಆ ಕಾಲಕ್ಕೆ ನೋಡಿಕೊಂಡರಾಯಿತು ಎಂದು ನಿಮಗೆ ನೀವೇ ಹೇಳಿಕೊಳ್ಳಿರಿ.

ಎರಡನೆಯ ಹೆಜ್ಜೆ : ನಿಮ್ಮ ಚಿಂತೆಯನ್ನು ಮುಂದೂಡುವುದು.

ಒಬ್ಬನಿಗೆ ಬಂದ ಒಂದು ಘೋರ ಕಾಯಿಲೆಯನ್ನು ಕ್ಯಾನ್ಸರ್ ಇರಬಹುದೇ ಎಂದು ಶಂಕಿಸಿದ್ದಾರೆಂದು ತಿಳಿಯಿರಿ. ಬಯಾಪ್ಸಿ ಮಾಡಿದ ರಿಪೋರ್ಟ್ ಬರುವವರೆಗಾದರೂ ನಿಮ್ಮ ಚಿಂತೆಯನ್ನು ಮುಂದೂಡಿರಿ. ''ನೋಡೋಣ ತಡೆಯಿರಿ'' ಎನ್ನುವ ಮಾತು ಆ ನೋವನ್ನು ಎಷ್ಟೋ ತಡೆಯುತ್ತದೆ. ನಿಜವಾಗಿಯೂ ಚಿಂತೆ ಮಾಡಬೇಕಾದ ವಿಷಯವಿದೆ ಎಂದು ಖಚಿತವಾಗಿ ತಿಳಿದು ಬರುವವರೆಗೆ ಚಿಂತೆ ಮಾಡಬಾರದು. ಶುಭ ಚಿಂತನೆ ಮತ್ತು ಚಿಂತೆ ಮಾಡದೇ ಇರುವುದು ಇವೆರಡರ ಸಂಗಮದಿಂದ ಮನುಷ್ಯ ತನ್ನ ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಾಧ್ಯ.

ಮೂರನೆಯ ಹೆಜ್ಜೆ : ಭಯವನ್ನು ಎದುರಿಸಿ.

ನೀವೇ ಏನೇ ಪ್ರಸಂಗ ಬಂದರೂ ಸೃಜನಾತ್ಮಕವಾಗಿ ಮತ್ತು ರಚನಾತ್ಮಕವಾಗಿ ಎದುರಿಸುತ್ತೇನೆ ಎಂಬ ಧೈರ್ಯ ತಂದುಕೊಳ್ಳಿ. ಆ ಧೈರ್ಯ ನಿಮ್ಮಲ್ಲಿ ಬರಬೇಕಾದರೆ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿ.

೧. ಇದಕ್ಕಿಂತಲೂ ಕೆಟ್ಟ ಪ್ರಸಂಗ ಇನ್ನೇನು ಬರಲು ಸಾಧ್ಯ?

೨. ಹಾಗೆ ನಡೆಯುವ ಸಾಧ್ಯತೆ ಎಷ್ಟರ ಮಟ್ಟಿಗೆ ಇದೆ?

೩. ಒಂದು ವೇಳೆ ಹಾಗೆ ನಡೆದೇ ಬಿಟ್ಟರೆ ಅದನ್ನು ಎದುರಿಸುವುದು ಹೇಗೆ?

೪. ಏನೋ ಒಂದು ಘಟನೆ ನಡೆಯುವುದೇ ಆಗಿದ್ದರೆ ಅದನ್ನು ತಪ್ಪಿಸುವ ಅಥವಾ ಎದುರಿಸುವ ದಾರಿಯನ್ನು ಹುಡುಕುವುದು ಹೇಗೆ?

ಈ ನಾಲ್ಕು ಪ್ರಶ್ನೆಗಳಿಗೆ ಉತ್ತರ ಹುಡುಕಿದ್ದೇ ಆದರೆ ನಿಮ್ಮ ಎಲ್ಲ ಚಿಂತೆಗಳನ್ನು ಒಂದು ಆಟದಂತೆ ಪರಿಗಣಿಸಲು ಸಾಧ್ಯ. ಇದರಿಂದ ಜೀವನಕ್ಕೆ ಒಂದು ಭದ್ರತೆ ಸಿಕ್ಕಂತೆ ಅನ್ನಿಸಿ ಚಿಂತೆಯನ್ನು ನಿವಾರಿಸುವ ಉಪಾಯ ಹೊಳೆಯುತ್ತದೆ. ಚಿಂತೆಗೆ ಕಾರಣ ಆರೋಗ್ಯದ ವಿಷಯವಿರಬಹುದು. ಆರ್ಥಿಕ ಸಂಕಷ್ಟವಿರಬಹುದು ಅಥವಾ ನೌಕರಿ ಹೋದ ವಿಷಯವಿರಬಹುದು. ಇಂಥ ಏನೇ ಪ್ರಸಂಗ ಬಂದರೂ ಎದೆಗುಂದದೆ ಧೈರ್ಯದಿಂದ ಎದುರಿಸುವ ಶಕ್ತಿ ಬರುತ್ತದೆ.

ನಾಲ್ಕನೆಯ ಹೆಜ್ಜೆ: ಭಯದ ಬದಲು ಕಾಳಜಿ ಇರಲಿ.

ಚಿಂತೆಯಿಂದ ಮುಖ ತಪ್ಪಿಸಿಕೊಳ್ಳಬಾರದು. ಹಾಗೆ ಮಾಡುವುದು ಎಂದರೆ ನಿಮ್ಮ ತಲೆಯನ್ನು ನೀವೇ ಮರಳಿನಲ್ಲಿ ಹೂತುಹಾಕಿಕೊಂಡಂತೆ ಎಂದು ಕೆಲವರು ಹೇಳುವುದುಂಟು. ಚಿಂತೆ ಕೆಲವೊಮ್ಮೆ ಒಳ್ಳೆಯದನ್ನೂ ಮಾಡುತ್ತದೆ ಎಂದೂ ಅವರು ಅನ್ನುವುದುಂಟು. ನಿಜ, ಚಿಂತೆಯನ್ನು ಅಲ್ಲಗಳೆಯುವುದಾಗಲಿ, ಅಥವಾ ಆದರ ಬಗ್ಗೆ ಕೆಟ್ಟ ಧೈರ್ಯ ಮಾಡುವುದಾಗಲಿ ಮಾಡಿದರೆ ಎರಡೂ ಗಂಡಾಂತರಕಾರಿ ಎನ್ನುವುದಂತೂ ನಿಜ. ಚಿಂತೆಗೆ ಪರಿಹಾರ ಕಂಡುಹಿಡಿಯುವುದು ಶ್ರೇಷ್ಠ, ಕಾಳಜಿಯು ವಿವೇಕಪೂರ್ಣ ಮತ್ತು ರಚನಾತ್ಮಕ ಪರಿಹಾರವನ್ನು ಸೂಚಿಸಬಲ್ಲದು. ಅದೇ ಕಾಳಜಿಯು ವಿಚಾರವಿಲ್ಲದ ಭಯವನ್ನು ಹೋಗಲಾಡಿಸಿ ಶಾಂತ ರೀತಿಯ ಪರಿಹಾರವನ್ನು ಸೂಚಿಸಬಲ್ಲದು.

ಐದನೆಯ ಹೆಜ್ಜೆ : ಸಾಧ್ಯವಿದ್ದರೆ ಪರಿಹಾರ ಹುಡುಕು.

ಎಂಟು ವರ್ಷದ ನನ್ನ ಮಗ ಒಮ್ಮೆ ಹೇಳಿದ, ''ಅಪ್ಪಾ, ಯಾವ ವಿಷಯದ ಬಗ್ಗೆ ನೀನೇನೂ ಮಾಡಲಾರೆಯೋ ಅಂಥ ವಿಷಯದ ಬಗ್ಗೆ ಚಿಂತೆ ಯಾಕೆ ಮಾಡಬೇಕು?'' ಈ ವಿಚಾರ ಅವನಿಗೆ ಹೇಗೆ ಗೊತ್ತಾಯಿತು ಎಂದು ನಾನು ಆಶ್ಚರ್ಯಪಟ್ಟೆ. ಆದರೆ ಮುಂದೆ ಒಂದು ವರ್ಷದ ಅನಂತರ ಅಂಥದೇ ಇನ್ನೊಂದು ಸಂದರ್ಭದಲ್ಲಿ ಮತ್ತೆ ಅವನೇ ಹೇಳಿದ. ''ಅಪ್ಪಾ, ಯಾವ ವಿಷಯದ ಬಗ್ಗೆ ನಿನಗೆ ಏನಾದರೂ ಮಾಡಲು ಸಾಧ್ಯವಿದ್ದರೆ ಅದರ ಬಗ್ಗೆ ಚಿಂತೆ ಏಕೆ ಮಾಡಬೇಕು?'' ಸಮಸ್ಯೆಗೆ ಪರಿಹಾರ ಎಟುಕುವಂತಿದ್ದರೆ ಅದನ್ನು ಪರಿಹರಿಸಿ ಬಿಡುವುದೇ ಮೇಲಲ್ಲವೇ ? ಸಣ್ಣ ಹುಡುಗನ ಮಾತಿನಲ್ಲಿ ಇದ್ದ ಈ ತತ್ವ ದೊಡ್ಡವರ ಕಣ್ಣನ್ನೂ ತೆರೆಸುವಂಥದು. ನೆನಪಿಡಿ. ಯಾವ ವಿಷಯ ನಿಮ್ಮ ಕೈಯಲ್ಲಿ ಇಲ್ಲವೋ ಅದರ ಬಗ್ಗೆ ಚಿಂತೆ ಮಾಡುವುದು ವ್ಯರ್ಥ. ನಿಜವಾದ ಸಮಸ್ಯೆಯಿದ್ದರೆ ಅದರ ಬಗ್ಗೆ ಚಿಂತಿಸುತ್ತ ಕುಳಿತುಕೊಳ್ಳುವದರ ಬದಲು ಪರಿಹಾರವನ್ನು ಕಂಡುಕೊಳ್ಳುವುದು ಯುಕ್ತ. ಏಕೆಂದರೆ, ಚಿಂತೆ ಮಾಡುವುದರಿಂದ ಆಯಾಸ ಮಾತ್ರ ಆಗುತ್ತದೆ.

ಸಾರಾಂಶ: ಚಿಂತೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಬೇರೆ ವಿಧಾನಗಳು :

೧. ವಿಷಯಾಂತರ ಚಿಂತೆ ಮಾಡುತ್ತ ಕುಳಿತುಕೊಳ್ಳುವುದರ ಬದಲು ಬೇರೆ ದೈಹಿಕ ಅಥವಾ ಮಾನಸಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಕೊಳ್ಳುವುದು

೨. ಮನಸ್ಸನ್ನು ಹಗುರ ಮಾಡಿಕೊಳ್ಳುವುದು. ಇನ್ನೊಬ್ಬರ ಹತ್ತಿರ ಮಾತಾಡಿ ತಮ್ಮ ಚಿಂತೆಯನ್ನು, ಭಾವನೆಗಳನ್ನು ಹಂಚಿಕೊಳ್ಳುವುದು.

೩. ನಗುವುದು. ನಿಮಗೆ ಎಷ್ಟೇ ಕಷ್ಟ ಇದ್ದರೂ ಅದನ್ನು ತಮಾಷೆಯಾಗಿ ತೆಗೆದುಕೊಂಡು ನಕ್ಕು ಬಿಡುವುದು.

೪. ವಿಶ್ರಾಮ ದೇಹಕ್ಕೆ ಮತ್ತು ಮನಸ್ಸಿಗೆ ವಿಶ್ರಾಮ ಕೊಡುವ ಯೋಗ ಮಾಡುವುದು.

೫. ಅಧ್ಯಾತ್ಮ. ಯಾವುದು ಆಗಬೇಕು ಎಂದಿದೆಯೋ ಅದು ಆಗಿಯೇ ಆಗುತ್ತದೆ. ಯಾವುದು ಆಗಬಾರದು ಎಂದಿದೆಯೋ ಅದು ಏನು ಮಾಡಿದರೂ ಆಗುವುದಿಲ್ಲ. ಆದುದರಿಂದ ಈ ಮಾತು ನಿಮ್ಮ ನಿತ್ಯದ ಪ್ರಾರ್ಥನೆಯಾಗಲಿ.

ಶಿಶುನಾಳ ಶರೀಫರು ಹಾಡಿರುವಂತೆ-

ಚಿಂತ್ಯಾಕ ಮಾಡುತೀ, ಚಿಂತ್ಯಾಕ ಮಾಡುತೀ,
ಚಿನ್ಮಯನಿದ್ದಾನ, ಚಿನ್ಮಯನಿದ್ದಾನ.
ಲಕ್ಷ್ಮೀಕಾಂತನಿದ್ದಾನ, ಶ್ರೀಕೃಷ್ಣನಿದ್ದಾನ.

ಮೌನದಲ್ಲಿ ಮೂರು ಬಗೆ. ಮಾತಿನ ಮೌನ ಒಳ್ಳೆಯದು. ಕಾರಣ ಅಸಂಗತ ಮಾತುಗಳು ದುಷ್ಪರಿಣಾಮಕಾರಿ. ಆಶೆ ಆಕಾಂಕ್ಷೆಗಳ ಮೌನ ಇದಕ್ಕೂ ಒಳ್ಳೆಯದು. ಇಂಥ ಮೌನ ಆತ್ಮ ಶಾಂತಿ ತರುತ್ತದೆ. ಇದಕ್ಕೂ ಉತ್ತಮವಾದದ್ದು ಅನವಶ್ಯಕವಾದ ಹಾಗೂ ನೆಲೆಯಿಲ್ಲದಾ ಲೋಚನೆಗಳ ಮೌನ. ಈ ಮೌನ ಆಧ್ಯಾತ್ಮಿಕ ಸ್ಫುರಣೆಗೆ ಅತ್ಯಗತ್ಯ.

-ಮೇಡಂ ಡೆಯನ್

ಜೀವಾಧಾರಕ ಕಲೆ ಮತ್ತು ಸೆಲೆ

ಜಯಾ ಶೇಖರ್
೨೫೭, ಕೆ.ಎಚ್.ಬಿ.ಕಾಲನಿ,
ಕೋರಮಂಗಲ
ಬೆಂಗಳೂರು -೫೬೦ ೦೯೫

ನ್ಯೂಯಾರ್ಕಿನ ಆಲ್ಬರ್ಟ್ ಐನ್‌ಸ್ಟೈನ್ ಕಾಲೇಜಿನ ಆಸ್ಪತ್ರೆಯ ತೀವ್ರನಿಗಾ ಘಟಕದಲ್ಲಿಯ ಹಾಸಿಗೆಯೊಂದರ ಮೇಲೆ ಬಾಯಿಲೆಯಿಂದ ವಿಷಣ್ಣನಾಗಿ ಮಲಗಿದ್ದೆ. ನನ್ನ ಜೀವನದಲ್ಲಿ ಒಂದೆಂದೂ ನಾನು ಇಷ್ಟೊಂದು ಭೀತನಾಗಿ, ಅಪ್ರಯೋಜಕನೆಂಬ ಭಾವನೆಯಿಂದ ಬಳಲಿದ್ದಿರಲಿಲ್ಲ. ಹಿಂದಿನ ದಿನವಷ್ಟೇ ನನ್ನ ಹೃದಯದ ಮೂರು ಭಾಗಗಳಲ್ಲಿ ಶಸ್ತ್ರಕ್ರಿಯೆಯಾಗಿತ್ತು. ಅದರಿಂದ ನನ್ನ ಆರೋಗ್ಯ ಪುನಸ್ಥಾಪನೆಯಾಗುತ್ತದೆ ಎಂದು ತಿಳಿಯಲಾಗಿತ್ತಾದರೂ, ಶಸ್ತ್ರಕ್ರಿಯೆಯ ೧೮ ಘಂಟೆಗಳ ತರುವಾಯ ದೇಹದ ಬಲಭಾಗದ ಮೇಲೆ ಪಾರ್ಶ್ವವಾಯುವಿನ ಧಾಳಿಯಾಗಿತ್ತು. ನನ್ನಿಂದ ಬಲಹಸ್ತದ ಬೆರಳುಗಳನ್ನು ಅಲುಗಾಡಿಸಲೂ ಸಾಧ್ಯವಿರಲಿಲ್ಲ. ಬಲಗಾಲಾದರೋ ಯಮಭಾರವೆನಿಸುತ್ತಿತ್ತು.

ನಾನಿದ್ದ ಹಾಸಿಗೆಯ ಬಳಿ ನಿಂತಿದ್ದ ವೈದ್ಯರನ್ನುದ್ದೇಶಿಸಿ, "ಡಾ॥ಫ್ರಾಟರ್, ನೀವು ಶಸ್ತ್ರಕ್ರಿಯೆಯ ಮೇಜಿನ ಮೇಲೆಯೇ ನನ್ನನ್ನು ಸಾಯಗೊಡಬೇಕಿತ್ತು" ಎಂದು ಕಹಿಯಾಗಂದೆ.

ಡಾ॥ರಾಬರ್ಟ್ ಫ್ರಾಟರ್ ಬಂದೇ ಮುಗುಳ್ನಗುತ್ತಾ ಕುಳಿತು, ನನ್ನ ದುರ್ಬಲವಾದ ಬಲಗೈಯನ್ನೆತ್ತಿ "ಥಾಮಸ್, ಲಕ್ವದ ಹೊಡೆತ ಗಂಭೀರವಾದದ್ದೇ ಆದರೂ ಪರಿಸ್ಥಿತಿ ವಿಷಮಿಸಿಲ್ಲ. ನಿಮ್ಮ ಹೃದಯ ಸುಸ್ಥಿತಿಗೆ ಬಂದಿದೆ ಮತ್ತು ನಿಮ್ಮ ಬಲಭಾಗದ ಕಾರ್ಯಕ್ಷಮತೆ ಸುಧಾರಿಸುವ ಅವಕಾಶವೂ ಇದೆ" ಎಂದರು.

ಡಾ॥ಫ್ರಾಟರ್‌ರವರ ಮಾತುಗಳು ನನ್ನಲ್ಲಿ ಸಮಾಧಾನವನ್ನು ತುಂಬಲಿಲ್ಲ. ನನ್ನ ಐವತ್ತೆಂಟನೆಯ ವಯಸ್ಸಿನಲ್ಲಿ, ಮನೆಯಿಂದ ೧೫,೦೦೦ಕಿಮೀ ದೂರ ಇರುವ ಪರದೇಶವೊಂದರಲ್ಲಿ ಖಾಯಿಲೆಯ ದೆಸೆಯಿಂದ ಅಂಗವೈಫಲ್ಯಕ್ಕೀಡಾಗಿ ರುಗ್ಣಶಯ್ಯಾಧಾರಿಯಾಗಿದ್ದೇನೆ ಎಂಬ ನೋವು ನನ್ನ ಚೇತನವನ್ನೆಲ್ಲಾ ಹೀರಿಬಿಟ್ಟಿತ್ತು.

ನನಗೆ ಹೃದಯಬೇನೆ ಒಂಭತ್ತು ವರ್ಷಗಳ ಮೊದಲೇ ಕಾಣಿಸಿಕೊಂಡಿತ್ತು. ಆಗ ನಾನು ಕೇರಳದ ಕೊಟ್ಟಾಯಂನಲ್ಲಿ ಕಾನೂನು ಸಂಸ್ಥೆಯೊಂದರಲ್ಲಿ ಹಿರಿಯ ಪಾಲುದಾರ. ಆ ವೃತ್ತಿಯಲ್ಲಿ ಪೂರ್ತಿ ತನ್ಮಯನಾಗಿ, ತೃಪ್ತಜೀವನ ನಡೆಸುತ್ತಿದ್ದೆ. ೧೯೬೪ರ ಜೂನ್ ತಿಂಗಳ ಒಂದು ಬೆಳಗಿನ ಹೊತ್ತು, ಯಾವ ಮುನ್ಸೂಚನೆಯನ್ನೂ ತೋರದೆ ನನ್ನ ಹೃದಯ ಆಘಾತಕ್ಕೀಡಾಯಿತು. ಕೆಲವು ವಾರಗಳ ಬಳಿಕ ನಾನು ಕೆಲಸಕ್ಕೆ ಹಾಜರಾದೆನಾದರೂ, ಹೃದಯದ ಖಾಯಿಲೆ ಕ್ರಮೇಣವಾಗಿ ವೃದ್ಧಿಸುತ್ತಿತ್ತು ಮತ್ತು ೧೯೭೩ರಲ್ಲಿ ನನಗೆ ಪದೇ ಪದೇ ಬೇನೆ ಕಾಣಿಸಿಕೊಳ್ಳತೊಡಗಿತು. ನಾನು ಅಮೆರಿಕದಲ್ಲಿ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಇಲ್ಲಿಯ ತಜ್ಞ ವೈದ್ಯರು ಅಭಿಪ್ರಾಯಪಟ್ಟರು.

ಹೃದಯ ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಆಗಷ್ಟೇ ನಸುಕು ಮೂಡಿತ್ತು. ಹಾಗಾಗಿ ಇಡಬೇಕಿದ್ದ ಹೆಜ್ಜೆ ಬಹಳ ಎಚ್ಚರಿಕೆಯ

ರೀಡರ್ಸ್ ಡೈಜೆಸ್ಟ್ ಸಂಗ್ರಹಿಸಿದ "ಸಕ್ಸಸ್ ಸ್ಟೋರೀಸ್" ಎಂಬ ಪುಸ್ತಕದಿಂದಾಯ್ದ ಥಾಮಸ್ ವೆಲ್ಲಪಲ್ಲಿಯವರ ಲೇಖನ 'ವೆನ್ ಪೇಂಟಿಂಗ್ ಸೇವ್ಡ್ ಮಿ" ಯ ಅನುವಾದ

ದ್ದಾಗಿರ ಬೇಕಿತ್ತು. ಆದರೂ ನಾನು ನನ್ನನ್ನು ಪಣಕ್ಕಿಟ್ಟು ಹೆಜ್ಜೆ ಇಡಲು ತೀರ್ಮಾನಿಸಿದೆ. ನಾನೋರ್ವ ನಿಖರವಾದಿಯಾಗಿದ್ದೆ. ನಿಷ್ಪ್ರಯೋಜಕ ನೆನಿಸಿಕೊಳ್ಳುವುದನ್ನು ಊಹಿಸಲೂ ಸಾಧ್ಯವಾಗಲಿಲ್ಲ.

ನನ್ನ ಪತ್ನಿ ಪೆನ್ನಮ್ಮಳೊಂದಿಗೆ ಅಮೆರಿಕಕ್ಕೆ ಹಾರಿ, ಡಿಸೆಂಬರ್ ೮ರಂದು ಆಸ್ಪತ್ರೆಗೆ ದಾಖಲಾದೆ. ಶಸ್ತ್ರಕ್ರಿಯೆ ೧೧ರಂದು ನಡೆಯುವುದೆಂದು ತೀರ್ಮಾನವಾಯಿತು. ೧೧ನೇ ತಾರೀಖಿನಂದು ಪೆನ್ನಮ್ಮಳ ಜನ್ಮದಿನವಾಗಿತ್ತು. ನಾನವಳನ್ನು ಎಷ್ಟು ಪ್ರೀತಿಸುತ್ತೇನೆಂದೂ, ಅವಳು ಮತ್ತು ನಮ್ಮ ಮೂವರು ಮಕ್ಕಳು ನನಗೆಷ್ಟು ಸಂತೋಷ ನೀಡಿರುವರೆಂಬುದನ್ನೂ ವರ್ಣಿಸುವ ದೀರ್ಘ ಪತ್ರವೊಂದನ್ನು ಅಂದು ನಾನಾಕೆಗೆ ಉಡುಗೊರೆಯಾಗಿ ನೀಡಿದೆ.

ಪಾರ್ಶ್ವವಾಯುವಿನ ಆಘಾತದಿಂದಾಗಿ ಆಸ್ಪತ್ರೆಯಲ್ಲಿ ನನ್ನ ವೇಳೆ ಕ್ರೋಧ ಹಾಗೂ ಆತ್ಮಾನುಕಂಪದ ಅಲೆಗಳಿಗೆ ಸಿಕ್ಕಿ ಕಳೆದು ಹೋಗುತ್ತಿತ್ತು. ಯಾವುದೇ ವಿಚಾರವಾಗಲಿ, ಅಥವಾ ವ್ಯಕ್ತಿಯಾಗಲಿ, ನನಗೆ ಕಿರಿಕಿರಿ ಎನಿಸುತ್ತಿತ್ತು. ದಾದಿ ನನ್ನ ದಿಂಬನ್ನು ಸರಿಪಡಿಸಿ ನನಗೆ ಆರಾಮ ನೀಡಲೆತ್ನಿಸಿದರೆ ಆ ಕೆಲಸವನ್ನು ನಿಲ್ಲಿಸೆಂದು ಅವಳೆಡೆಗೆ ಚೀರಿ ಹೇಳುತ್ತಿದ್ದೆ. ಪೆನ್ನಮ್ಮ ನನ್ನ ಬಳಿ ಕುಳಿತರೆ, ಆಕೆ ಅಲ್ಲಿಂದ ತೊಲಗುವಂತೆ ಸಿಡುಕಿನಿಂದ ಸನ್ನೆ ಮಾಡುತ್ತಿದ್ದೆ. ನ್ಯೂಯಾರ್ಕಿನಲ್ಲಿ ವಾಸಿಯಾಗಿರುವ ನನ್ನ ಸಂಬಂಧಿಯೋರ್ವ ನಾನು ಆತನೊಂದಿಗೆ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವಂತೆ ಸಲಹೆ ನೀಡಿದಾಗ, ನಾನದನ್ನು ಬಹಳ ಒರಟಾಗಿ ತಿರಸ್ಕರಿಸಿದೆ.

ಕ್ರಿಸ್‌ಮಸ್‌ನ ಹಿಂದಿನ ದಿನ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನನ್ನನ್ನು ಮೂರುತಿಂಗಳ ಮಟ್ಟಿಗೆ ನ್ಯೂಜರ್ಸಿಯಲ್ಲಿ ನನ್ನ ಮಗಳು ರೀಮಾ ಹಾಗೂ ಆಕೆಯ ಪತಿ ಬಿಲ್ಲಿ ವ್ಯಾಲಿಕಲ್‌ರ ಮನೆಗೆ ಕರೆದೊಯ್ಯಲಾಯಿತು.

ಫಿಸಿಯೋಥೆರಪಿ ಚಿಕಿತ್ಸೆಯ ಬಳಿಕ ನಾನು ಕಾಲೆಳೆದುಕೊಂಡು ನಡೆದಾಡುವಷ್ಟು ಚೇತರಿಸಿದೆ. ಆದರೆ ನನ್ನ ಬಲತೋಳು ನಿಷ್ಪ್ರಯೋಜಕವಾಗಿಯೇ ಉಳಿಯಿತು. ಭಾರತಕ್ಕೆ ಹಿಂತಿರುಗುವ ದಿನ ಹತ್ತಿರ ಬರುತ್ತಿದ್ದಂತೆ, ನನ್ನ ದೈಹಿಕಸ್ಥಿತಿಯ ಬಗ್ಗೆ ಜನರಾಡಬಹುದಾದ ನುಡಿಗಳ ಕಲ್ಪನೆಯಿಂದ ಚಿಂತಾವ್ಯಾಕುಲನಾಗಿದ್ದೆ. ಪೆನ್ನಮ್ಮಳಿಗೆ ಹೇಳಿ. ಸ್ನೇಹಿತರು ಹಾಗೂ ಬಂಧುಗಳಿಗೆ ವಿಮಾನ ನಿಲ್ದಾಣಕ್ಕೆ ಬರುವ ಅಗತ್ಯವಿಲ್ಲ ಎಂದು ಸಾರುವ ಪತ್ರವನ್ನು ಬರೆಸಿದೆ.

ಮನೆಗೆ ಹಿಂತಿರುಗಿದ ಕೆಲವು ತಿಂಗಳ ಬಳಿಕ ಕಛೇರಿಗೆ ಹೋಗಲಾರಂಭಿಸಿದೆನಾದರೂ ಜಾಸ್ತಿ ಕೆಲಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ನಾನು ವಿಷಾದಗೊಳ್ಳುತ್ತಿದ್ದೆ. ವಕೀಲಿವೃತ್ತಿ ಮೂವತ್ತು ವರ್ಷಗಳಿಂದ ನನ್ನ ಸಂಗಾತಿಯಾಗಿತ್ತು. ನನ್ನೆಲ್ಲಾ ಗಳಿಕೆಯೂ ವೃತ್ತಿನೈಪುಣ್ಯದಿಂದ ಸಾಧಿಸಿದ್ದಾಗಿತ್ತು. ಈಗ, ನಾನೇನೂ ಆಗಿಲ್ಲವೆಂಬ ಕಹಿಭಾವ ನನ್ನನ್ನು ಆವರಿಸಿತ್ತು.

ಒಂದು ದಿನ, ಚಿಂತೆಯ ತೊಳಲಾಟದ ಮಧ್ಯೆಯಲ್ಲಿಯೇ ಅಭ್ಯಾಸದಲ್ಲಿ ತೊಡಗಿಸಿಕೊಂಡಿದ್ದಾಗ ನನ್ನ ಲಕ್ಷ್ಯವು ನನ್ನ ಬಳಿಯಿರುವ ಕೆಲವು ವರ್ಣಚಿತ್ರಗಳೆಡೆಗೆ ಹರಿಯಿತು. ಥಟ್ಟನೆ, ಆಲೋಚನೆಯ ಅಲೆಯೊಂದು ನನ್ನೊಳಗೆ ಸ್ಫುರಿಸಿತು. ವರ್ಣಚಿತ್ರಗಳನ್ನು ಬಿಡಿಸಿದರೆ ಹೇಗೆ ? ಕಲೆಯ ಕುರಿತು ನನಗೆ ಪ್ರೀತಿಯಿತ್ತು. ಆಗಾಗ ಕಲಾ ಸಂಗ್ರಹಾಲಯಕ್ಕೆ ಭೇಟಿಯನ್ನೂ ಕೊಡುತ್ತಿದ್ದೆ. ಅಲ್ಲದೆ ಚಿತ್ರಗಳ ಪುಟ್ಟ ಸಂಗ್ರಹವನ್ನೂ ಹೊಂದಿದ್ದೆ. ಚಿತ್ರ ಬಿಡಿಸಬೇಕೆಂಬ ಅಭಿಲಾಷೆ ನನಗೆ ಹಿಂದಿನಿಂದಲೇ ಮನದೊಳಗಿದ್ದರೂ, ಆಗ

ಕಾಲದ ಕೊರತೆಯಿತ್ತು. ಈಗಲೋ, ಕಾಲ ಬಾಹುಳ್ಯವಿತ್ತು.

ಆದರೆ, ನನ್ನ ಈ ಅಂತಃಸ್ಫುರಣೆಗೆ ವಿರೋಧವನ್ನುಂಟುಮಾಡುವಂಥ ಅಂಶಗಳಿಗೇನೂ ಕೊರತೆಯಿರಲಿಲ್ಲ. ನನ್ನ ವಯಸ್ಸು ೫೯ ವರ್ಷವಾಗಿತ್ತು. ನನ್ನ ಆಲೋಚನೆಯನ್ನು ಕಾರ್ಯಗತಗೊಳಿಸಲು ತಕ್ಕುದಾದ ವಯಸ್ಸನ್ನು ಮೀರಿದ್ದೆ. ನನಗೆ ಕಲೆಯ ಬಗ್ಗೆ ತರಬೇತಿಯೂ ಇರಲಿಲ್ಲ. ಇವುಗಳಿಗಿಂತಲೂ ಖೇದಕರವಾದ ಅಂಶ ವೆಂದರೆ ನನ್ನ ಬಲಗೈ ನಿರುಪಯೋಗಿ ಆಗಿಬಿಟ್ಟಿತ್ತು. ಆದರೆ, ಈಗಾಗಲೇ ನಾನು ನನ್ನ ಎಡಗೈಯಿಂದ ಹಲವಾರು ಕೆಲಸಗಳನ್ನು ಮಾಡಲು ಕಲಿತಿದ್ದೆ. ಧೋತರವನ್ನು ಉಟ್ಟುಕೊಳ್ಳುತ್ತಿದ್ದೆ. ಗುಂಡಿಗಳನ್ನು ಹಾಕಿಕೊಳ್ಳುತ್ತಿದ್ದೆ. ಷರಟಿನ ತೋಳನ್ನು ಮಡಿಸುವುದು ಅಭ್ಯಾಸವಾಗಿತ್ತು. ಹೀಗಿರುವಾಗ 'ಕುಂಚ' ವನ್ನು ಹಿಡಿಯುವುದೂ ಸಾಧ್ಯವಾದೀತೆಂದು ತರ್ಕಿಸಿದೆ.

ನನ್ನ ಯೋಚನೆಯು ಪೆನ್ನಮ್ಮಳನ್ನು ಸಂತೋಷ ಪುಲಕಿತಳನ್ನಾಗಿಸಿತು. ಅವಳು ಕಲಾಸಾಮಗ್ರಿಗಳ ಖರೀದಿಗೆ ಆದೇಶವನ್ನೂ ಕಳಿಸಿದಳು. ಆದರೆ, ನನಗೆ ಚಿತ್ರಕಲೆಕ್ಲಿಷ್ಟವೆಂದು ತೋರತೊಡಗಿತು. ಬರವಣಿಗೆಯನ್ನು ಆಗ ತಾನೇ ಕಲಿಯುತ್ತಿರುವ ಮಗುವಿನ ಸ್ಥಿತಿಯೇ ನನ್ನದೂ ಆಗಿತ್ತು. ಎಡಗೈ ಸ್ಥಿರವಾಗಿ ಇರುತ್ತಿರದ ಕಾರಣ ಬಹಳ ಬೇಗನೇ ದಣಿಯುತ್ತಿತ್ತು. ನಾನು ಚಿತ್ರಿಸಿದ ಆಕೃತಿಗಳು ಸ್ಫುಟವಾಗಿರುತ್ತಿರಲಿಲ್ಲ. ನಾನೊಂದು ಚಿತ್ರವನ್ನು ಪ್ರಾರಂಭಿಸಿದರೂ, ಅದು ನನ್ನ ಕಲ್ಪನೆಯಂತೆ ಪಡಿಮೂಡದಿದ್ದಾಗ ನಾನು ಅಪಮಾನಿತಗೊಂಡವನಂತೆ ಅದನ್ನು ಸಿಟ್ಟಿನಿಂದ ಎಸೆಯುತ್ತಿದ್ದೆ. ಇದರಿಂದ ನಾನೆಷ್ಟು ಜುಗುಪ್ಸೆಗೊಂಡೆನೆಂದರೆ, ಈ ಕಾಯಕವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ಅಂದುಕೊಳ್ಳುತ್ತಿದ್ದೆ.

ಚಿತ್ರಕಲೆ ಕುರಿತಾದ ಕೆಲವು ಮೂಲಪಾಠಗಳನ್ನು ಹೇಳಿಸಿಕೊಂಡರೆ ನನ್ನ ಕೈ ವಳಗಬಹುದೆಂದು ಯೋಚಿಸಿದೆ. ಆದರೆ, ಕೊಟ್ಟಾಯಂನಲ್ಲಿ ಅಂಗವಿಕಲರಿಗೆ ಕಲಾ ಶಿಕ್ಷಣವನ್ನೀಯುವ ಸೌಲಭ್ಯವಿರಲಿಲ್ಲ. ಮಿಗಿಲಾಗಿ, ನನ್ನ ದುರ್ಬಲತೆ ಅಪರಿಚಿತನ ಕರುಣಾಪೂರಿತ ಅವಹೇಳನಕ್ಕೆ ವಸ್ತುವಾಗುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ನನಗೊಬ್ಬ ವಿಶ್ವಾಸಾರ್ಹ ಸ್ನೇಹಿತನ ಅಗತ್ಯವಿತ್ತು. ನನ್ನ ಆಲೋಚನೆಗೆ ಹೊಳೆದ ಏಕೈಕ ವ್ಯಕ್ತಿಯೆಂದರೆ ಸಿ.ಕೆ.ರಾ- ಕೇರಳದ ಖ್ಯಾತಿವೆತ್ತ ಕಲಾವಿದರಲ್ಲೊಬ್ಬರಾದ ರಾಮಕೃಷ್ಣನ್ ನಾಯರ್.

ದಶಕದ ಹಿಂದೆ ನಮ್ಮ ಭೇಟಿ ನಡೆದುದರ ಬಗ್ಗೆ ಜ್ಞಾಪಕ ಹರಿಯಿತು. ಆ ಪ್ರಥಮ ಭೇಟಿಯಲ್ಲೇ ನಮ್ಮಲ್ಲಿ ಬೆಚ್ಚನೆಯ ಸ್ನೇಹ ಅರಳಿತ್ತು . ನಾನೊಮ್ಮೆ ಕೊಟ್ಟಾಯಂನಿಂದ ೨೦೦ ಕಿಮೀ. ದೂರವಿರುವ ತಿರುವನಂತಪುರಂನ ಲಲಿತ ಕಲಾಶಾಲೆಯಲ್ಲಿ ಕಲಾಪ್ರದರ್ಶನವೊಂದನ್ನು ವೀಕ್ಷಿಸಲು ಹೋಗಿದ್ದೆ. ಅಲ್ಲಿ ಹಲವು ಹೆಂಗಸರು ನಾಟ್ಯವಾಡುತ್ತಿದ್ದ ಚಿತ್ರವನ್ನು ಜಲವರ್ಣದಲ್ಲಿ ಸಂಯೋಜಿಸಿದ್ದನ್ನು ಮೆಚ್ಚುಗೆಯಿಂದ ವೀಕ್ಷಿಸುತ್ತಿದ್ದೆ. ಹಾಗೆಯೇ , ನನ್ನ ಬಳಿ ನಿಂತಿದ್ದ ಪುಟ್ಟ ಆಕೃತಿಯ, ಸೌಮ್ಯಮುಖದ ವ್ಯಕ್ತಿ ಯನ್ನೂ ಗಮನಿಸಿದೆ.

''ಈ ಚಿತ್ರವನ್ನು ರಚಿಸಿದವರು ಯಾರು?'' ಎಂದು ಆತನನ್ನು ಪ್ರಶ್ನಿಸಿದೆ . ''ನಾನೇ'' ಎಂದು ಆ ವ್ಯಕ್ತಿಯಿಂದ ಉತ್ತರ ಬಂದಿತು. ನಾನು ಈ ಮೊದಲು ವರ್ಣ ಚಿತ್ರಗಳನ್ನೆಂದೂ ಕೊಂಡಿರಲಿಲ್ಲ. ಆದರೆ ಈ

ಚಿತ್ರ ನನ್ನ ಬಳಿ ಇರಲೇಬೇಕೆನಿಸಿತು. ನಾನು ಅವರನ್ನು ಮತ್ತೆ ಪ್ರಶ್ನಿಸಿದೆ, ''ಇದರ ಬೆಲೆ ಎಷ್ಟು?'' ನನ್ನ ಪ್ರಶ್ನೆ ಆತನಿಗೆ ಪ್ರಮುಖ ವಾದದ್ದೆನಿಸಲಿಲ್ಲ. ''ನೀವಿಷ್ಟ ಬಂದಷ್ಟು ಕೊಡಿ'' ಎಂದುತ್ತರ ಬಂದಿತು.

ನಾನು ನನ್ನ ಸಂಚಿಯನ್ನು ಹೊರತೆಗೆದು ಆತನಿಗೆ ಕೊಟ್ಟು,''ಇದರೊಳಗೆ ಎಷ್ಟು ಹಣವಿದೆ ಎಂಬುದು ನನಗೆ ತಿಳಿದಿಲ್ಲ, ಇವಿಷ್ಟೂ ನಿಮ್ಮದು''ಎಂದೆ. ಆತನೋ, ಆ ಹಣವನ್ನು ಎಣಿಸುವ ಗೊಡವೆಗೇ ಹೋಗಲಿಲ್ಲ.

ಆ ದಿನದಿಂದ 'ರಾ' ಹಾಗೂ ನಾನು ಒಳ್ಳೆಯ ಸ್ನೇಹಿತರಾದೆವು. ನಾನು ಆತನ ಹಲವಾರು ಚಿತ್ರಗಳನ್ನು ಕೊಂಡುಕೊಂಡೆ. ಅವರು ಹಲವು ವರ್ಷಗಳ ಕಾಲ ಕಲಾಶಿಕ್ಷಕ ನಾಗಿದ್ದು, ನಿವೃತ್ತರಾದ ಬಳಿಕ 'ತಿರುವಲ್ಲ' ಎಂಬ ಊರಿನಲ್ಲಿ ನೆಲಸಿದ್ದರು. ಆ ಊರಿಗೆ ಹೋಗಲು ಕೊಟ್ಟಾಯಂನಿಂದ ಒಂದು ಗಂಟೆಯ ಪ್ರಯಾಣವಾಗುತ್ತಿತ್ತು. ಕೆಲವು ದಿನಗಳನ್ನು ನನ್ನೊಂದಿಗೆ ಕಳೆಯುವಂತೆ ನಾನವರನ್ನು ಆಹ್ವಾನಿಸಿದೆ.

'ರಾ' ನನ್ನ ಕರೆಗೆ ಓಗೊಟ್ಟು ಬಂದರಾದರೂ ನನಗೆ ಚಿತ್ರಕಲೆಯ ಪಾಠ ಹೇಳಲು ನಿರಾಕರಿಸಿದರು. ಇದರಿಂದ ನನಗೆ ನಿರಾಸೆಯುಂಟಾಯಿತು.''ನಿಮಗೆ ಕಲಾತ್ಮಕ ದೃಷ್ಟಿಯಿದೆ, ನನ್ನ ಪಾಠಗಳ ಅಗತ್ಯ ನಿಮಗಿಲ್ಲ'' ಎಂದುಬಿಟ್ಟರು.

ನನ್ನ ಪುರುು ಒತ್ತಾಯದಿಂದ ಅವರ ತೀರ್ಮಾನವೇನೂ ಬದಲಾಗಲಿಲ್ಲ. ಆದರೆ ಅವರು ಚಿತ್ರಿಸುವಾಗ ನಾನು ವೀಕ್ಷಿಸಲು ಅವಕಾಶ ಕೊಟ್ಟರು. ಮರುದಿನದ ಮುಂಜಾನೆ ನಾವು ಕೊಟ್ಟಾಯಂನ ಬೋಟ್‌ಕ್ಲಬ್‌ಗೆ ಹೋದೆವು. ಅದು ಒಂದು ಬೃಹತ್ ಸರೋವರದ ಅಂಚಿನಲ್ಲಿರುವ ಸುಂದರವಾದ ಸ್ಥಳ. ನಾವಲ್ಲಿ ಹೋಗಿ ನೆಲೆಯೂರಿದ ಮೇಲೆ, 'ರಾ' ಸುತ್ತಲೂ ನೋಡಿ ಸಮೀಪದ ಕೆಲವು ಭತ್ತದ ಗದ್ದೆಗಳನ್ನು ಚಿತ್ರಿಸಲು ತೀರ್ಮಾನಿಸಿದರು. ಅವರ ಕೆಲಸ ಮೌನವಾಗಿ, ಆದರೆ ಚುರುಕಾಗಿ ಸಾಗಿತ್ತು. ಹಸಿರು, ನೀಲಿ, ಕಂದು ಮತ್ತು ಕಪ್ಪು ಬಣ್ಣಗಳನ್ನು ಅವರು ಚಿತ್ರವಾಗಿಸಿ ದರು. ತಾಳೆಮರಗಳು, ಗುಡಿಸಲುಗಳು, ದಟ್ಟಹೊಲಗಳು ಆ ಚಿತ್ರಕಾರನ ಕೈಯಲ್ಲಿ ಮೈತಳೆಯುವುದನ್ನು ನಾನು ಆನಂದ ವಿಸ್ಮಿತನಾಗಿ ನೋಡುತ್ತಿದ್ದೆ. ಆದರೆ ಅವರ ಚಿತ್ರರಚನೆ ಮುಗಿದಾಗ ನಾನೆಂದೂ ಈ ರೀತಿಯಾಗಿ ಚಿತ್ರಿಸಲಾರೆ, ಕೇವಲ ಪ್ರಯತ್ನಿಸುವುದರಲ್ಲಿಯೂ ಅರ್ಥವಿಲ್ಲವೆಂಬ ಹತಾಶೆಯ ಭಾವದಿಂದ ನನ್ನ ಮನಸ್ಸು ಕುಗ್ಗಿಹೋಯಿತು.

ನನ್ನ ನೈರಾಶ್ಯವನ್ನು ಗ್ರಹಿಸಿದ ರಾ, ನನ್ನೆಡೆಗೆ ತಿರುಗಿ ಗಂಭೀರವಾದ ನೋಟವನ್ನು ನನ್ನ ಮೇಲೆ ಚೆಲ್ಲುತ್ತಾ ''ಥಾಮಸ್, ಕಲೆಯ ಅಭಿವ್ಯಕ್ತಿಗೆ ನಿರ್ದಿಷ್ಟ ತಂತ್ರವೆಂಬುದಿಲ್ಲ. ನಿನ್ನ ಒಳಗನ್ನು ಅಭಿವ್ಯಕ್ತಗೊಳಿಸುವುದು ಕಲೆಯ ಕೆಲಸ, ನಿಜವಾದ ಕಲಾವಿದ ಅವನಿಗಾಗಿ ಚಿತ್ರಿಸುತ್ತಾನೆಯೇ ವಿನಾ ಬೇರೆಯವರಿಗಾಗಿ ಅಲ್ಲ. ಹೆದರಬೇಡಿ, ಸುಮ್ಮನೆ ಚಿತ್ರಿಸುತ್ತಾ ಹೋಗಿ'' ಎಂದು ಮೃದುವಾಗಿ ಅಂದರು.

ಮರುದಿನ ಬೆಳಿಗ್ಗೆ 'ರಾ' ಹೇಳಿದ್ದರ ಕುರಿತು ಯೋಚಿಸುತ್ತಾ ಅವರು ಹಿಂದಿನ ದಿನ ಅಷ್ಟೊಂದು ನಿಖರವಾಗಿ ಕುಂಚಿಸಿದ ಚಿತ್ರವನ್ನು ನಾನು ಮರುಚಿತ್ರಿಸಹೊರಟೆ. ಕೆಲದಿನಗಳ ಬಳಿಕ ನನ್ನ ಚಿತ್ರರಚನೆ ಮುಕ್ತಾಯಗೊಂಡಾಗ ನಾನಿನ್ನೂ ನನ್ನ ಕಲೆಯನ್ನು 'ರಾ'ರ ಕಲೆಯೊಂದಿಗೆ ಹೋಲಿ

ಸುವ ಮಟ್ಟಿಗಿನ ಹಂತವನ್ನೂ ತಲುಪಿಲ್ಲ ಎಂಬ ಸತ್ಯದ ಅರಿವಾಯಿತು. ಆದರೆ, ಈ ಅಂಶ ನನ್ನನ್ನು ಅಷ್ಟೇನೂ ಬಾಧಿಸಲಿಲ್ಲ. ನಾನು ನನ್ನಿಂದ ಸಾಧ್ಯವಾಗುವಷ್ಟು ಚೆನ್ನಾಗಿ ಬಿಡಿಸಿದ್ದೇನೆಂದು ಸಮಾಧಾನಿಸಿಕೊಂಡೆ.

'ರಾ' ರ ಸಲಹೆ ಚಿತ್ರಕಲೆಯ ಬಗ್ಗೆ ನನಗಿರುವ ಆತಂಕವನ್ನು ದೂರ ಮಾಡಿದರೂ, ನಾನು ಶೈಲಿಯ ಸುಧಾರಣೆಗೆ ಬಹಳ ಹೆಣಗಾಡಬೇಕಾಯಿತು. ಸ್ವಯಂ ಶಿಸ್ತನ್ನು ರೂಢಿಸಿಕೊಳ್ಳಬೇಕಾಯಿತು. ಪ್ರತಿದಿನ ಬೆಳಗ್ಗಿನ ಉಪಾಹಾರದ ಅನಂತರ ಅಭ್ಯಾಸಕ್ಕೆ ತೊಡಗುತ್ತಿದ್ದೆ. ಕೆಲವೊಮ್ಮೆ ಇಂದು ಚಿತ್ರಿಸುವುದು ಬೇಡ ಎಂದು ಮನಸ್ಸು ತಡೆಯುತ್ತಿದ್ದರೂ ಬಲವಂತವಾಗಿ ಮನದ ಮಾತನ್ನು ಮೀರುತ್ತಿದ್ದೆ. ವರ್ಣಸಂಯೋಜನೆ ಸರಿಯಿಲ್ಲವೆಂದೋ, ಆಕೃತಿ ಸುಂದರವಾಗಿ ಮೂಡಿಲ್ಲವೆಂದೋ ಅನಿಸಿದಾಗ ಈ ದೋಷಗಳನ್ನು ಸರಿಪಡಿಸಲು ಪಟ್ಟು ಹಿಡಿದು ಯತ್ನಿಸುತ್ತಿದ್ದೆ. ಚಿತ್ರ ಮುಕ್ತಾಯಗೊಂಡು ನನ್ನ ಕಲ್ಪನೆ ಸಾಕಾರಗೊಳ್ಳುವ ತನಕ ನನ್ನ ಲಕ್ಷ್ಯ ಅನ್ಯತ್ರ ಹರಿಯುತ್ತಿರಲಿಲ್ಲ. ಮಹಾನ್ ಕಲಾವಿದರು ತಮ್ಮ ಕಲಾರಚನೆಯ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಿಕೊಂಡರೆಂಬುದನ್ನು ತಿಳಿದುಕೊಳ್ಳಲು ಸಂಬಂಧಿಸಿದ ಹಲವು ಪುಸ್ತಕಗಳನ್ನು ಅಭ್ಯಸಿಸಿದೆ. ದಿನಗಳೆದಂತೆಲ್ಲ ಚಿತ್ರಕಲೆಯಲ್ಲಿ ನನ್ನ ಕೌಶಲ್ಯ ಸುಧಾರಿಸಿತು. ನನಗೆ ಆತ್ಮವಿಶ್ವಾಸ ಬೆಳೆದಂತೆ ನನ್ನ ರಚನೆಗಳಿಗೆ ಚೌಕಟ್ಟು ತೊಡಿಸಿ, ಮನೆಯ ಗೋಡೆಗಳಿಗೆ ತೂಗುಹಾಕುವ ಧೈರ್ಯ ಮಾಡಿದೆ.

ಸುಧಾರಣೆಯನ್ನು ಈ ರೀತಿಯಲ್ಲಿ, ಸಮಸ್ಯೆಗಳ ನಡುವೆ ವಿಳಂಬಗತಿಯಲ್ಲಿ ಸಾಧಿಸಬೇಕಾಯಿತಾದರೂ ಈ ಸವಾಲಿನಲ್ಲೇ ನಾನು ಸಂತೋಷವನ್ನು ಕಂಡುಕೊಂಡೆ. ನಿಜಹೇಳಬೇಕೆಂದರೆ, ಚಿತ್ರರಚನೆಯಲ್ಲಿ ತೊಡಗಿದ್ದಾಗ ನನಗೆ ಬೇರಾವುದರ ಪರಿವೆಯೂ ಇರುತ್ತಿರಲಿಲ್ಲ. ಒಂದು ಮಧ್ಯಾಹ್ನ ಪೆನ್ನಮ್ಮಳು ನನಗಾಗಿ ತಂದಿಟ್ಟಿದ್ದ ಚಹಾದ ಕಪ್‌ನೊಳಗೆ ಕುಂಚವನ್ನು ಅದ್ದಿ ತೊಳೆದಿದ್ದೆ.

ನನಗೆ ಚಿತ್ರಕಲೆ ಕೇವಲ ಸಮಯ ಕಳೆಯುವ ಹವ್ಯಾಸ ಒದಗಿಸುವ ಸಂತಸಕ್ಕಿಂತಲೂ ಹೆಚ್ಚಿನ ಆನಂದವನ್ನು ನೀಡಿತು. ನನ್ನೊಳಗೊಂದು ಅರಿವನ್ನು ಮೂಡಿಸಿತು. ಆನಂದವನ್ನು ಒಳಗೇ ಕಂಡುಕೊಳ್ಳಲಿರುವ ಅವಕಾಶಗಳ ಅರಿವು. ಈ ಮೊದಲು ವಕೀಲಿವೃತ್ತಿಯ ಹೊರತಾಗಿ ಬೇರೆಡೆ ಗಮನ ಹರಿಸಿರದ ನಾನು ಈಗ, ಸೂರ್ಯಾಸ್ತದ ನಸುರಾದ ವರ್ಣಛಾಯೆಯಿಂದ ಮೊದಲ್ಗೊಂಡು ಬಾನಾಡಿಗಳ ನಿಸ್ಪಂದ ಹಾರಾಟದವರೆಗೆ-ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದೆ. ಪ್ರಕೃತಿಯ ಸೊಬಗಿನ ವಿಲಾಸವನ್ನು ನನ್ನೊಳಗೆ ತುಂಬಿಕೊಳ್ಳುತ್ತಿದ್ದೆ. ಹಿಂದೆಂದಿಗಿಂತಲೂ ಹರ್ಷಚಿತ್ತನಾಗಿರುತ್ತಿದ್ದೆ, ವಿಶ್ರಾಂತಿಯನ್ನು ಸವಿಯುತ್ತಿದ್ದೆ.

'ರಾ' ತನ್ನ ವಿಶಿಷ್ಟರೀತಿಯಲ್ಲಿ ನನ್ನನ್ನು ಪ್ರೋತ್ಸಾಹಿಸುತ್ತಲೇ ಇದ್ದರು. ನನಗೆ ಸೂಚನೆ ಕೊಡುವ ವಿಚಾರದಲ್ಲಿರುವ ತಮ್ಮ ನಿಲುವನ್ನು ಸಡಲಿಸಲಿಲ್ಲವಾದರೂ, ನಾನು ಬಿಡಿಸಿದ ಚಿತ್ರಗಳನ್ನು ಅವರಿಗೆ ತೋರಿಸಿದಾಗೆಲ್ಲ ಅವರ ಮುಖದಲ್ಲಿ ಆನಂದದ ಮಿಂಚು ಸೆಳೆಯೊಡೆಯುತ್ತಿತ್ತು. ''ಸುಂದರಂ, ಸುಂದರಂ'' ಎಂದು ಅವರು ಉದ್ಗರಿಸುತ್ತಿದ್ದರು.

ವರುಷಗಳುರುಳಿದಂತೆಲ್ಲ ನಾನು

ಸುಮಾರು ಮುನ್ನೂರು ಚಿತ್ರಗಳನ್ನು ರಚಿಸಿದೆ. ಅವುಗಳಲ್ಲಿ ಸುಮಾರು ನೂರರಷ್ಟನ್ನು ನನ್ನ ಸ್ನೇಹಿತರಿಗೆ ಕೊಟ್ಟುಬಿಟ್ಟೆ. ನಾನು ರಚಿಸಿದ ಕೇರಳದ ತ್ರಿಸೂರ್ ಪೂರಂ ಹಬ್ಬವನ್ನು ಪ್ರತಿನಿಧಿಸುವ ಚಿತ್ರವು ಮೇ ೧೯೯೧ರ ರೀಡರ್ಸ್ ಡೈಜೆಸ್ಟ್‌ನ ಮುಖಪುಟದಲ್ಲಿ ಪ್ರಕಟವಾಗಿದೆ. ನಿಸರ್ಗಚಿತ್ರಗಳು ಮತ್ತು ಕೇರಳದ ಆಚರಣೆಗಳ ದೃಶ್ಯಗಳನ್ನು ಕುಂಚದಲ್ಲಿ ಮೂಡಿಸುವುದು ನನಗೆ ಬಹುಪ್ರಿಯವಾದ ಸಂಗತಿಯಾಗಿದ್ದರೂ ನಾನು ಬೇರೆ ವಸ್ತುಗಳನ್ನೂ ಬಳಸಿಕೊಂಡಿದ್ದೇನೆ. ೧೯೮೯ರಲ್ಲಿ ತಿಯನಾನ್ಮೆನ್ ಚೌಕದಲ್ಲಿ ನಡೆದ ನರಮೇಧದಿಂದ ನಾನು ಅನುಭವಿಸಿದ ಮಾನಸಿಕಯಾತನೆಯನ್ನು ಬಿಂಬಿಸುವ ಚಿತ್ರ ಮತ್ತು ಮದರ್ ಥೆರೆಸಾರಿಗೆ ಶ್ರದ್ಧಾಂಜಲಿಯನ್ನು ಮಿಡಿದ ಚಿತ್ರ ನಾನಾಯ್ದುಕೊಂಡ ವಸ್ತು ವೈವಿಧ್ಯಗಳಿಗೆ ಉದಾಹರಣೆಗಳು. ನನ್ನೆರಡು ಚಿತ್ರಗಳು ಎರ್ನಾಕುಲಂನ ''ಕೇರಳ ಲಲಿತಕಲಾ ಅಕಾಡೆಮಿ'' ಯಲ್ಲಿ ಮತ್ತು ಎರಡು ಚಿತ್ರಗಳು ಎಡಪಲ್ಲಿಯ ''ಮಾಧವನ್ ನಾಯರ್ ಸಂಸ್ಥೆ'' ಯ ಕಲಾಗ್ಯಾಲರಿಯಲ್ಲಿ ಶಾಶ್ವತ ಪ್ರದರ್ಶನಕ್ಕಿರಿಸಲ್ಪಟ್ಟಿವೆ.

ನನ್ನ ದೃಷ್ಟಿಶಕ್ತಿ ಶೀಘ್ರವೇಗದಲ್ಲಿ ಮಂದವಾಗುತ್ತಿದೆ, ಹೃದಯ ಸಮಸ್ಯೆಯೂ ಗೂಡಾಗಿದೆ. ಆದರೂ ಚಿತ್ರಕಲೆ ನನ್ನ ದಿನಚರಿಯ ಅವಿಭಾಜ್ಯ ಅಂಗವಾಗಿದೆ, ಮತ್ತು ನಾನು ನನ್ನ ವಯಸ್ಸಿನ ಬಹಳ ಮಂದಿಗಿಂತ ಹೆಚ್ಚು ಸಂತೋಷವಾಗಿದ್ದೇನೆ. ೨೫ ವರ್ಷಗಳ ಹಿಂದೆ ನನ್ನ ದೇಹಕ್ಕೆ ಪಾರ್ಶ್ವವಾಯು ನೀಡಿದ ಹೊಡೆತ ನನಗೆ ಒಳ್ಳೆಯದನ್ನೇ ಮಾಡಿದೆ ಎಂದು ಕೆಲವೊಮ್ಮೆ ಅಂದುಕೊಳ್ಳುತ್ತೇನೆ. ಈ ಆಘಾತ ನನಗಾಗದಿರುತ್ತಿದ್ದರೆ ನಾನೋರ್ವ ಕಾರ್ಯದ ಒತ್ತಡ ತುಂಬಿದ ವಕೀಲನಾಗಿ, ಶ್ರೀಮಂತ ಕಕ್ಷಿಗಾರರ ತೆರಿಗೆಯ ಸಮಸ್ಯೆಗಳಿಗೆ ಪರಿಹಾರವನ್ನು ಅನ್ವೇಷಿಸುತ್ತಾ ನನ್ನ ಜೀವನವನ್ನು ಸವೆಯಿಸಬೇಕಿತ್ತು. ಆದರೆ ಪಾರ್ಶ್ವವಾಯುವಿನಿಂದಾಗಿ, ನನ್ನಲ್ಲಿ ಅಡಕವಾಗಿದ್ದ ವಿಶೇಷಶಕ್ತಿಯೊಂದು ಹೊರಬರಲು ದಾರಿಯಾಗಿ, ಜೀವನವನ್ನು ಆಳವಾಗಿ, ಆನಂದದಿಂದ ಅನುಭವಿಸುವುದು ಸಾಧ್ಯವಾಗಿದೆ.

ಚಾಮುಂಡಿ ಬೆಟ್ಟವೇರಲು ದಾರಿ ನೂರಾರು
ಮಾಮೂಲಿ ಜಾಡಿನಲ್ಲೇನಿದೆ ಸವಾಲೆಂದು
ಧೀಮಂತನಾಯುವನು ಕಡು ಕಠಿಣ ಮಾರ್ಗವನು
ಭೂಮತೆಯ ವಿಸ್ತಾರ ಕಾಣುವನು ಅತ್ರಿಸೂನು

ದೋಷಗಳನ್ನು ಕಾಣುವದು ಸುಲಭವಾದರೂ, ಅದನ್ನು ಸಾಧಿಸುವದು ಕಷ್ಟ. ಗುಣಗಳನ್ನು ಕಾಣುವದು ಕಷ್ಟವಾದರೂ ಸಾಧಿಸುವದು ಸುಲಭ. ಆದುದರಿಂದ ಗುಣವನ್ನೇ ಅರಸಿ ಅದನ್ನು ಪ್ರಶಂಸಿಸುವದು ಉಪಯುಕ್ತವೂ ಸುಲಭವೂ ಆಗಿದೆ.

-ಪರಮಹಂಸ

ಪೆಂಬರ್ಟನ್ ರಸ್ತೆಯ ಆ ಮಹಿಳಾಮಣಿ

ಸರಸ್ವತಿ ಬಡೆಕ್ಕಿಲ
ಮನೆ ಸಂಖ್ಯೆ ೧೨, ದೀಪಾನಗರ,
ಬೋಗಾದಿ, ಮೈಸೂರು-೫೭೦೦೦೬

ಕಸಬರಿಕೆ ಒಂದೊಂದು ಹೊಡೆತಕ್ಕೂ ನಮ್ಮ ಬೀದಿಯಲ್ಲಿ ಸ್ನೇಹ ಸಂಪತ್ತು ಸೃಷ್ಟಿಯಾಗುತ್ತಾ ಇತ್ತು!

ಇಲ್ಲಿ ನೋಡಿ! ಅವಳೇ! ಮೇಬೆಲ್ ಹೊವರ್ಡ್. ತನ್ನ ನಾಮಫಲಕದ ಕೆಳಗೆ ನಿಂತಿದ್ದಾಳೆ-ಅಭಿಮಾನದಿಂದ!

ಬಹಳ ವರ್ಷಗಳಿಂದ ನಾನು, ನನ್ನ ಪತ್ನಿ 'ಸ್ಯೂ' ಮಧ್ಯ ಫಿಲಡೆಲ್ಫಿಯಾದ ಅಕ್ಕಪಕ್ಕದಲ್ಲಿ ವಾಸಿಸಬೇಕೆಂಬ ಅಭಿಲಾಷೆಯಿಂದಿದ್ದೆವು. ನಮ್ಮ ಅಳವಿಗೆ ನಮಗೆ ನಿಲುಕಬಹುದಾಗಿದ್ದ ಮನೆ ಅದೊಂದೇ- ಆ ಸಣ್ಣ ರಸ್ತೆಯ ಸಾಲು ಮನೆಗಳಲ್ಲೊಂದು ಸ್ವಲ್ಪ ಹಳೆಯದೇ. ಸಣ್ಣ ಪುಟ್ಟ ತೇಪೆಹಾಕುವ ಅಗತ್ಯವೂ ಅದಕ್ಕೆ ಇತ್ತು, ಮತ್ತು ನನ್ನ ಕೈಗಳು ಅವಕ್ಕೆಲ್ಲ ಸಿದ್ಧವಾಗಿಯೇ ಇದ್ದುವು.

ಆದರೆ ಮನಸ್ಸನ್ನು ಕಲಕುತ್ತಿದ್ದ ವಿಷಯ ಬೇರೊಂದಿತ್ತು. ಸಮೀಪದಲ್ಲೇ, ಬಿರುಕು ಗೊಂಡು ಕುಸಿದ ಕಟ್ಟಡಗಳು, ವಿಕಾರ ದೃಶ್ಯವನ್ನು ನಿರ್ಮಿಸಿದ್ದುವು. ಅಲ್ಲದೆ ಆ ಮುರುಕು ಗೋಡೆಗಳ ನಡುವೆ ನ್ಯಾಯಬಾಹಿರ ಕೃತ್ಯಗಳು ಜರಗುತ್ತಿರುತ್ತವೆಯೆಂದೂ ತಿಳಿಯಿತು. ಇದರಿಂದ ಜುಗುಪ್ಸೆ ಹುಟ್ಟಿ ಒಮ್ಮೆ ಹಿಂಜರಿ ದಂತಾದರೂ, ಉಳಿದೆಲ್ಲ ವಿಚಾರ ಗಳಿಂದ ಬಡಾವಣೆ ಚೆನ್ನಾಗಿದೆಯೆಂದು ಅನಿಸಿತು, ಮನೆಯನ್ನು ಖರೀದಿಸುವುದೆಂದು ತೀರ್ಮಾನ ಮಾಡಿದ್ದೂ ಆಯಿತು. ವ್ಯವಹಾರದ ಎಲ್ಲ ಕ್ರಮಗಳನ್ನು ಪೂರೈಸಿ ನಮ್ಮದಾದ ಮನೆಗೆ ಬಂದೆವು. ಬೀದಿ ನಿರ್ಜನವಾಗತ್ತಾದರೂ, ನಮ್ಮನ್ನು ಯಾರೋ ಲಕ್ಷ್ಯವಿಟ್ಟು ನೋಡುತ್ತಿದ್ದಾರೆಂದು ಭಾಸವಾಯಿತು.

ಮುಂಬಾಗಿಲ ಕದವಿಕ್ಕಿ ಸ್ಯೂ ಮಾಳಿಗೆಯಲ್ಲಿದ್ದಳು. ಮಾಡಿನ ಮುಚ್ಚಿಗೆಗೆ ಏನೆಲ್ಲ ಬೇಕು, ಮರದ ಹಲಗೆ ಎಷ್ಟು ಬೇಕಾಗಬಹುದು, ಅವುಗಳ ಉದ್ದಗಲ ಅಳತೆಗಳ ಲೆಕ್ಕಹಾಕುತ್ತಿದ್ದಳು. ಅಷ್ಟರಲ್ಲಿ ಬಾಗಿಲು ತಟ್ಟಿದ ಸದ್ದು; ಸದ್ದಿನ ಹಿಂದೆಯೇ, ಮಧುರವಾದೊಂದು ಸ್ವರ ''ಹಲೋ...'' ತಂತಿ ಮೀಟಿದಂತಿತ್ತು.

ಮಾಡುತ್ತಿದ್ದ ಕೆಲಸ ನಿಲ್ಲಿಸಿ ಬಾಗಿಲು ತೆರೆದೆ. ಎದುರಲ್ಲೇ ಅರವತ್ತು ಮೀರಿದ ಹೊಳಪುಗಣ್ಣಿನ ಹೆಂಗಸು ನಿಂತಿದ್ದಳು. ಕಣ್ಣ ನೋಟದ ಪ್ರಖರತೆ ಭಯಹುಟ್ಟಿಸುವ ಮತ್ತು ಉಲ್ಲಾಸ ತುಂಬುವ ಭಾವಗಳ ಸಂಗಮದಂತಿತ್ತು. ಶರೀರ ತೆಳ್ಳಗೆ, ಆದರೆ ಕೋಮಲವಂತೂ ಅಲ್ಲವೇ ಅಲ್ಲ; ಅಷ್ಟೇಕೆ? ಅದರ ತದ್ವಿರುದ್ಧ! ಬಲಿಷ್ಠ ಅವಯವಗಳು! ಒಟ್ಟಾರೆ ನೋಡಿದರೆ ಗಿಡುಗವೊಂದು ತನ್ನ ಬೇಟೆಯ ಕಡೆಗೆ ನೋಡುತ್ತಿರುವುದೇನೋ ಎಂಬಂತೆ! ಅವಳೇ ನುಡಿದಳು-''ನಾನು ಮೇಬೆಲ್ ಹಾವರ್ಡ್ ಬ್ಲಾಕ್ ಕ್ಯಾಪ್ಟನ್'' ಇದರ ಬಗ್ಗೆ ನನಗೆ ತುಸುವೇ ತಿಳಿದಿತ್ತು. ಬ್ಲಾಕ್ ಕ್ಯಾಪ್ಟನ್‌ರ ಕೆಲಸಗಳೆಂದರೆ ಬಡಾವಣೆಯ ಕುಂದು

೧೯೯೮ರ ಸೆಪ್ಟೆಂಬರ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಆಲ್ಬರ್ಟ್ ಡಿ ಬಾರ್ಟೋನ್ ಲೋಮಿಯೋರ ದಿ ಲೇಡಿ ಆನ್ ದಿ ಪೆಂಬರ್ಟನ್ ಸ್ಟ್ರೀಟ್ ಲೇಖನದ ಅನುವಾದ

ಕೊರತೆಗಳನ್ನು ನಿವಾರಿಸಲು ನಗರ ಸಭೆಗಳಿಗೆ ಮನವಿ ಮಾಡುವುದು, ನಾಗರಿಕರು ನಗರ ನಿಯಮಗಳನ್ನು ಪರಿಪಾಲಿಸುವಂತೆ ಮನವೊಲಿಸುವುದು ; ಏನಾದರೂ ಅನಾಹುತವಾದಲ್ಲಿ ಪೋಲೀಸರನ್ನು ಕರೆಯುವುದು , ಮತ್ತು ಬಡಾವಣೆಯ ಬೀದಿ ಪಾರ್ಕುಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ಒಟ್ಟಿನಲ್ಲಿ ಆ ಕ್ಷೇತ್ರದ ಎಲ್ಲರ ಜವಾಬ್ದಾರಿಗಳ ಹೊಣೆ ಕ್ಯಾಪ್ಟನ್ ರದಾಗಿರುತ್ತದೆ.

ಉಪ್ಪರಿಗೆಯಿಂದ ನನ್ನಾಕೆ ಕೆಳಗಿಳಿದಾಗ ಮೇಬೆಲ್ಲಳ ಪರಿಚಯ ಹೇಳಹೊರಟ ನಾನು ಅವಳ ಉದ್ದೆಯ ಹೆಸರು ತಿಳಿಸಲು ಅಸಮರ್ಥನಾದಾಗ ಅವಳೇ ಹೇಳಿದಳು -''ನಾನು ಕ್ಷೇತ್ರ ಸಂಚಾಲಕಿ.'' ಮುಂದುವರಿಸುತ್ತಾ ''ಮಂಗಳವಾರ ಕಸಕ್ಕೆ ರಜೆ ಮತ್ತು ಉಳಿದ ದಿನಗಳಲ್ಲಿ ರಾತ್ರಿ ಕಳೆಯುವ ಮೊದಲೇ ಎಂದರೆ ಪ್ರಾತಃಕಾಲ ಗಂಟೆ ಏಳರ ಮೊದಲು -'ಕಚಡಾ' ಹೊರಗಿಡಬೇಡಿ. ಹಾಗೊಂದು ವೇಳೆ ಹೊರಗೆ ಇಟ್ಟಿದ್ದೇ ಆದರೆ ಬೆಕ್ಕು, ಇಲಿ , ಹೆಗ್ಗಣ ಮುಂತಾದ ಪ್ರಾಣಿಗಳು ಅದನ್ನು ಕೆದಕಿ ಸುತ್ತೆಲ್ಲ ಚೆಲ್ಲಿ ಕೊಳೆಗೇರಿ ಮಾಡಿಬಿಡುತ್ತವೆ. ನಮ್ಮ ಈ ಪ್ರದೇಶವೆಲ್ಲ ಚೊಕ್ಕಟವಾಗಿರಬೇಕು. ಅದಕ್ಕೇ ನನ್ನೀ ಪ್ರಯತ್ನ.

''ಹಾ,ಹಾ, ನೋಡಿದ್ದೇವೆ.'' ನಾನೆಂದೆ.

''ನಿಮ್ಮ ಜೀವನಕ್ಕೆ ಏನು ಮಾಡಿಕೊಂಡಿದ್ದೀರಿ?''

ನನ್ನ ಉದ್ಯೋಗವನ್ನು ಅವಳಿಗೆ ವಿವರಿಸಿದೆ ಮತ್ತು ಉದ್ಯೋಗದ ಜತೆಜತೆಯಲ್ಲಿ ನನ್ನದೇ ಕೈಗಾರಿಕೆಯೂ ಇರುವ ವಿಷಯ ತಿಳಿಸಿದೆ.

''ಓ ಒಳ್ಳೆಯದಾಯಿತು ಬಿಡಿ'' ಬಹಳ ಒಳ್ಳೆಯದೆಂಬ ಶಬ್ದವನ್ನು ಎಷ್ಟೊಂದು ಒತ್ತಿ ಎಳೆದು ಹೇಳಿದಳೆಂದರೆ, ರುಚಿ ರುಚಿಯಾದ ಕೇಕನ್ನು ಕಂಡು ಬಾಯಲ್ಲಿ ನೀರೂರುವಂತೆ ಅವಳ ಧಾಟಿ ಇತ್ತು.

ನಾವೂ ಸಂತೋಷದ ನಗೆಯನ್ನು ಪರಸ್ಪರ ಹಂಚಿಕೊಂಡೆವು. ಕೊನೆಗೆ ಈ ಸುಖಕರ ವಾರ್ತಾಲಾಪವನ್ನು ನಿಲ್ಲಿಸಲೇಬೇಕಿತ್ತು. ನಮ್ಮ ಮನೆಯನ್ನು ಸುವ್ಯವಸ್ಥೆಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲೇ ಬೇಕಿತ್ತಲ್ಲವೇ ? ಬಾಗಿಲವರೆಗೂ ನಡೆದು ಮೇಬೆಲ್ಲಳನ್ನು ಕಳುಹಿಸಲು ಬಂದೆ. ಅಷ್ಟರಲ್ಲಿ-''ನೀವು ಆ ಫಲಕ ನೋಡಿದಿರಾ ?'' ಬೀದಿಯ ಪಕ್ಕದ ಕಂಬವೊಂದರ ಕಡೆಗೆ ಬೆರಳು ತೋರಿಸುತ್ತ ಕೇಳಿದಳು. 'ವಾಹನಗಳ ತಂಗುದಾಣ'ವೆಂಬ ಫಲಕವಿತ್ತು, ಅದರ ಕೆಳಭಾಗದಲ್ಲಿಯೇ ಮೇಬೆಲ್ಲಳ ಹೆಸರು ಮತ್ತು ಉಪಾಧಿ- ಮೇಬೆಲ್ ಹಾವರ್ಡ್‌ಬ್ಲಾಕ್ ಕ್ಯಾಪ್ಟನ್ '' ಎಂದು ದಪ್ಪ ಅಕ್ಷರಗಳಲ್ಲಿ ಬರೆದಿತ್ತು.

'' ಓ! ಚೆನ್ನಾಗಿದೆ! '' ಎಂದೆ.

ಹತ್ತು ನಿಮಿಷ ಕಳೆದು ನಾವು ಮನೆಯಿಂದ ಹೊರ ಹೋಗುವಾಗ ರಸ್ತೆಯ ಬದಿಯ ಕಲ್ಲುಹಾಸನ್ನು ಆಕೆ ಗುಡಿಸುತ್ತಿರುವುದು ಕಾಣಿಸಿತು.

ಸ್ವಚ್ಛವಾದ ಗುಡಿಸುವಿಕೆ :

ಪೆಂಬರ್ಟನ್ ಓಣಿಯಲ್ಲಿ ನಮ್ಮ ಮೊದಲ ಪ್ರಾತಃಕಾಲ ಗುಡಿಸುವ ಬರಬರ ಸದ್ದಿಗೆ ಎಚ್ಚರವಾಯಿತು. ಇನ್ನೂ ಸರಿಯಾಗಿ ಬೆಳಕು ಹರಿದಿಲ್ಲ ಕಿಟಕಿಯ ಆಚೆಗೆ ಇಣುಕಿದೆ. ಮುಂಜಾವದ ಮಬ್ಬುಕತ್ತಲಲ್ಲೇ ಮೇಬೆಲ್‌ಳ ಪೊರಕೆಯು ಬೀದಿಯ ಉದ್ದಗಲವನ್ನೆಲ್ಲ ಝಾಡಿಸುತ್ತಾ ಹರಿದೋಡುತ್ತಿತ್ತು. ಮರುದಿನವು ಅಷ್ಟೆ. ನಸುಕಿನಲ್ಲೇ ಅವಳ ಗುಡಿಸಾಟ. ಮುಂದಿನ ಎಲ್ಲ ದಿನಗಳಲ್ಲೂ ಇದೇ ಪರಿಪಾಟ. ಅವಳ

ಪ್ರತಿಯೊಂದು ದಿನವೂ ಪ್ರಾರಂಭವಾಗುವುದೇ ಈ ಪ್ರಕಾರವೆಂದು ಆಮೇಲೆ ತಿಳಿಯಿತು. ಸಣ್ಣಗೆ ಮಳೆ ಹನಿಯುತ್ತಿದ್ದರೂ ಅವಳ ಈ ಕ್ರಮಕ್ಕೆ ಭಂಗವಿಲ್ಲ. ಬೀಸುವ ಗಾಳಿ ತರಗೆಲೆಗಳನ್ನು ಹಾರಿಸುತ್ತಾ ಇದ್ದರೂ ಅವಳ ಕೆಲಸದಲ್ಲಿ ವ್ಯತ್ಯಾಸವಿಲ್ಲ. ಹಿಮಪಾತದಲ್ಲಿಯೂ ಅವಳ ದಿನಚರಿ ಅದೇ. ಅಂಥ ಸಮಯ ನಾವು ಅವಳೆಡೆಗೆ ನೋಡುತ್ತಾ 'ಬೇಡ! ಬೇಡ! ವೆಂದು ತಲೆ ಅಲ್ಲಾಡಿಸುತ್ತಿದ್ದೆವು.

ಪ್ರಾರಂಭದ ದಿನ ಗುಡಿಸುವ ಸದ್ದಿಗೆ ಎಚ್ಚರಗೊಂಡೆನಷ್ಟೆ? ಮತ್ತೆ ಮಲಗಿ ನಿದ್ರಿಸಲಾಗಲಿಲ್ಲ. ಸರಿ, ಮುಂಬಾಗಿಲ ಬೀಗವನ್ನಾದರೂ ಕಳಚಿ ಹೊಸತನ್ನು ಜೋಡಿಸಬಹುದೆಂದು ಆ ಕೆಲಸ ಪ್ರಾರಂಭಿಸಿ ಕೆಲವೇ ನಿಮಿಷ ಕಳೆದಿರಬಹುದು. ಮೇಬೆಲ್ ಹಾಜರಾದಳು-''ಗುಡ್‌ಮಾರ್ನಿಂಗ್ ಸ್ವೀಟೀ ಪೈ!''(ಅವಳು ನನಗಿಟ್ಟ ಹೆಸರು!) ಎಂದು ಪ್ರಾರಂಭಿಸಿದಳು-''ನಿಮ್ಮ ಸಲಕರಣೆ ಪೆಟ್ಟಿಗೆ ಎಷ್ಟು ಚೆನ್ನಾಗಿದೆ!'' ನಿಜವಾಗಿಯೂ ಮೆಚ್ಚಿ ಹೊಗಳಿದ್ದಳಾಕೆ. ''ನನ್ನ ಮನೆಯ ಬೀಗವನ್ನೂ ಬದಲಿಸಬೇಕಾಗಿದೆ. ಅದನ್ನು ನೀವು ಮಾಡಿಕೊಡುವಿರಿ ತಾನೆ?''

''ಓಹೋ! ಖಂಡಿತವಾಗಿ''

ಕಸಹೊಡೆಯಲು ಮುಂದಕ್ಕೆ ಹೋದಳಾಕೆ. ಗುಡಿಸುತ್ತಾ ಏನೋ ಗೊಣಗುತ್ತಿದ್ದುದು ಕೇಳಿಸಿತು. ಖಾಲಿಯಾದ ಇಂಜೆಕ್ಷನ್ ಶೀಶೆಗಳನ್ನು ಆರಿಸಿಕೊಳ್ಳುತ್ತಾ, ಅಸಹನೆಯಿಂದ ತಲೆಕೊಡಹುತ್ತಾ ಗುಣುಗುಣಿಸುತ್ತಿದ್ದಳು.

ಆಮೇಲೆ ಒಂದು ದಿನ ಮೇಬೆಲ್ಲಳ ಹಳೆಯದಾಗಿದ್ದ ಬೀಗವನ್ನು ತೆಗೆದುಹಾಕಿ ಹೊಸದನ್ನು ಕೊಟ್ಟೆ. ಮರುದಿನ ಮುಂಜಾನೆ ನಮ್ಮ ಮನೆಯ ಮುಖಮಂಟಪದಲ್ಲಿ ಒಂದು ಲಕೋಟೆ ಬಿದ್ದಿರುವುದು ಕಂಡಿತು. ತೆರೆದು ನೋಡಿದಾಗ ಅದರೊಳಗೆ ಮೂರು ಡಾಲರ್ ನೋಟುಗಳೂ, ಒಂದು ಚಿಕ್ಕ ಕಾಗದದ ಹಾಳೆಯಲ್ಲಿ ''ಪ್ರೀತಿಪೂರ್ವ, ಧನ್ಯವಾದ;- ಪತ್ರದ ಕೊನೆ ಅಂಚಿನಲ್ಲಿ, ''ಪ್ರೀತಿ, ಮೇಬೆಲ್'' ಎಂದು ಬರೆದಿತ್ತು.

ಮೇಬೆಲ್ ನನ್ನ ಆ ಸಣ್ಣ ಕೆಲಸಕ್ಕೆ ಹಣ ನೀಡಿದ್ದಳು. ಆದರೆ ನನಗದು ಬೇಡವಾಗಿದ್ದು ಅವಳು ಚರ್ಚಿಗೆ ಹೋಗಿರುವ ಸಮಯ ನೋಡಿಕೊಂಡು ಅವಳ ಮನೆಯ ಟಪಾಲು ಪೆಟ್ಟಿಗೆಯಲ್ಲಿ ಲಕೋಟೆಯನ್ನು ಹಾಕಿ ಸದ್ದಿಲ್ಲದೆ ಮನೆಗೆ ಬಂದೆ. ಅದೇ ದಿನ ಅಪರಾಹ್ನ ಆ ಲಕೋಟೆ ನನ್ನ ಮನೆಗೆ ಬಂದು ಮುಟ್ಟಿತು. ನಾನೂ ಬಿಟ್ಟು ಕೊಡಲಿಲ್ಲ. ಕೂಡಲೇ ಮೊದಲಿನಂತೆ ಅವಳಲ್ಲಿಟ್ಟು ಬಂದೆ. ತುಸು ಹೊತ್ತಿನಲ್ಲಿ ಮೇಬೆಲ್ಲಳ ಗಂಡ 'ಜಾರ್ವಿಸ್' ನನ್ನೆದುರು ಕಾಣಿಸಿಕೊಂಡ.

ಕವರನ್ನು ನನ್ನ ಕೈಯಲ್ಲಿಡುತ್ತಾ, ''ದಯವಿಟ್ಟು ನನ್ನವಳನ್ನು ಹಣ ಪಾವತಿಸಲು ಬಿಡಿ. ಇಲ್ಲವಾದರೆ ಅವಳು ರಾತ್ರಿಯೆಲ್ಲ ನಿದ್ದೆಬಾರದೆ ಒದ್ದಾಡುತ್ತಾಳೆ'' ಎಂದು ಅಂಗಲಾಚಿದ. ಮೇಬೆಲ್ಲಳ ಅನಿದ್ರಾರೋಗಕ್ಕೆ ನಾನು ಕಾರಣನಾಗುವುದೇ? ಛೆ! ಛೆ! ಹಾಗಾಗಬಾರದೆಂದು '' ಡಾಲರ್‌ಗಳನ್ನು ನಾನೇ ಇಟ್ಟುಕೊಂಡೆ.

ಒಂದು ಶನಿವಾರ ಬೆಳಗ್ಗೆ, ನಮ್ಮ ಪೆಂಬರ್ಟನ್ ರಸ್ತೆ ಕೊನೆಯಲ್ಲಿದ್ದ ಅಡ್ಡಗಲ್ಲಿ ಕಡೆಗೆ ನನ್ನ ಕರಣಿ ಪೆಟ್ಟಿಗೆಯನ್ನು ಹೆಗಲ

ಮೇಲಿಟ್ಟುಕೊಂಡು ನಡೆದಿದ್ದೆ. ಮೇಬೆಲ್ ಎದುರಾದಳು.

''ಗುಡ್ ಮಾರ್ನಿಂಗ್ ಮೇಬೆಲ್'' ನಾನೆಂದೆ.

''ಗುಡ್‌ಮಾರ್ನಿಂಗ್ ಸ್ವೀಟೀ ಪೈ'' ಮೇಬೆಲ್ಲಳ ಮಧುರ ನುಡಿ.

''ಆ ಗಲ್ಲಿಯ ಗೇಟನ್ನು ಸರಿಮಾಡೋಣಾಂತ...'' ನಾನು ಪ್ರಾರಂಭಿಸಿದೆ. ಅಷ್ಟರಲ್ಲೇ ''ಓ! ಬಹಳ ಒಳ್ಳೆಯ ಕೆಲಸ'' ಎನ್ನುತ್ತಾ ಉತ್ಸಾಹದಿಂದ ನನ್ನನ್ನು ಸರಿಸಿದಳು.

ಮರದಿಂದ ಮಾಡಿದ್ದಗೇಟು ರಿಪೇರಿ ಮಾಡಲು ಶಕ್ಯವಿಲ್ಲದಷ್ಟು ಹಾಳಾಗಿತ್ತು. ಮೇಬೆಲ್ ಹೇಳಿದ್ದಂತೆ'ಲಟಾರ್ ಪಟಾರ್' ಆಗಿತ್ತು. ಆ ಚಿಕ್ಕ ಓಣಿಯನ್ನು ಯಾವುದಕ್ಕೆ ಬಳಸುತ್ತ ಇದ್ದರೋ! ''ದೇವರಿಗೇ ಗೊತ್ತು!'' - ಹಲವು ವಾರಗಳಿಂದ - ಆ ಗೇಟಿನ ಮುರಿದ ಭಾಗಗಳನ್ನು ಕಳಚಿ ಹೊಸ ಹಲಗೆಗಳನ್ನು ಜೋಡಿಸಿ, ಅದಕ್ಕೆ ಭದ್ರವಾದೊಂದು ಬೀಗ ಜಡಿಯಬೇಕೆಂದು ಮೇಬೆಲ್ ನನ್ನೊಡನೆ ಹೇಳುತ್ತಲೇ ಇದ್ದಳು. ಕೊನೆಗೆ, ಇತ್ತೀಚೆಗಷ್ಟೆ ನನಗೆ ಅರ್ಥವಾಗಿತ್ತು - ಆಕೆಯ ಒತ್ತಾಯದ ಒಳಗಿನ ಮರ್ಮ. ಆ ಅಡ್ಡಗಲ್ಲಿಯನ್ನು ಒರಟು ದುರ್ನಡತೆಗಳಿಗೆ ಆಶ್ರಯ ಸ್ಥಾನವಾಗಲು ಬಿಡುವುದೇ ? ಛಿ ! ಛಿ ! ಸಾರ್ವಜನಿಕ ಸ್ಥಳವಾದ ಮಾತ್ರಕ್ಕೆ ಅದನ್ನು ನಿರ್ಲಕ್ಷಿಸುವುದೇ ? ಇಂದೇ ಅವುಗಳಿಗೆಲ್ಲ ಮುಕ್ತಾಯ.

ಅಲ್ಲಿಗೆ ಕೂಡಲೇ ಜಾರ್ವಿಸ್ - ದಿನಪತ್ರಿಕೆ ಓದುತ್ತಿದ್ದವನು - ಅದನ್ನು ಕೈಯಲ್ಲಿ ಹಿಡಿದುಕೊಂಡೇ ಬಂದ. ಬಹಳ ಹಿಂದೆ ಅವನೊಬ್ಬ ಶೆಫ(ದೊಡ್ಡ ಪ್ರತಿಷ್ಠಿತ ಹೋಟೆಲುಗಳಲ್ಲಿ ಅಡುಗೆ ಮಾಡುವವ) ಆಗಿದ್ದ. ಅದರಿಂದ ನಿವೃತ್ತಿಯಾಗಿ ಬಹಳ ವರ್ಷಗಳೂ ಕಳೆದಿವೆ. ಅವನೀಗ ಅಲ್ಲೇ ಪಕ್ಕದ ಒಂದು ಶಾಲೆಯ ಕೆಫೆಟೇರಿಯದಲ್ಲಿ(ಸಣ್ಣ ಚಾ ಕಾಫಿ ಹೊಟೆಲು) ಕೆಲವು ಗಂಟೆ ಕೆಲಸ ಮಾಡುತ್ತಿರುತ್ತಾನೆ. ''ಮಕ್ಕಳೆಂದರೆ ತನಗೆ ತುಂಬ ಪ್ರೀತಿ'' ಎಂದೂ ಆತ ಒಮ್ಮೆ ಹೇಳಿದ್ದ.

ಜಾರ್ವಿಸ್‌ನ ಸಹಾಯದಿಂದ ಗೇಟಿನ ರಿಪೇರಿ ಕೆಲಸ ಅರೆಗಳಿಗೆಯೊಳಗೆ ಮುಗಿಸಿಬಿಟ್ಟೆ. ಕರಣೆಗಳನ್ನು ಎತ್ತಿಕೊಳ್ಳುತ್ತಿದ್ದಾಗಲೇ ಅಲ್ಲಿ ಬಿದ್ದಿದ್ದ ಮರದ ಚೂರು, ಗರಗಸದ ಪುಡಿ, ಮುರಕಲು ಕಸ ಕಡ್ಡಿ ಎಲ್ಲವನ್ನು ಗುಡಿಸಿ ಸ್ವಚ್ಛ ಮಾಡಿದ್ದೂ ಆಯಿತು - ಮೇಬೆಲ್‌ಗೆ.

ಎಲ್ಲ ಚೆನ್ನಾದಾಗ ಅವಳು ರಸ್ತೆಯ ಉದ್ದಗಲಕ್ಕೂ ಕಣ್ಣು ಹಾಯಿಸಿದಳು. ಮೂಡಿ ಬಂದಿದ್ದ ಸೂರ್ಯನ ಪ್ರಖರ ಕಿರಣಗಳು ಪಶ್ಚಿಮದ ಕಡೆಯ ಸಾಲು ಕಟ್ಟಡಗಳ ಮೇಲುಪ್ಪರಿಗೆಗಳ ಕಿಟಕಿಗಳ ಗಾಜಿನ ಬಾಗಿಲುಗಳನ್ನು ಆವರಿಸಿ ಬೆಂಕಿಯ ಆಯತಗಳಂತೆ ಹಳದಿ ಬಣ್ಣದಿಂದ ಕಣ್ಣು ಕೋರೈಸುವಂತೆ ರಾರಾಜಿಸುತ್ತಿದ್ದುವು. ಮೇಲೆ ಆಕಾಶವು ನೀಲಿ ಲೇಪನದಿಂದ ಚಿತ್ರಪಟದ ಹಿನ್ನೆಲೆಯಾಗಿ ಮೆರುಗೇರಿಸಿತ್ತು.

''ಇಂಥ ಪರಿಸರ ನನಗೆ ತುಂಬಾ ಇಷ್ಟ'' ಮೇಬೆಲ್ ಹೇಳಿದಳು. ಗೇಟಿನ ಕೀಲಿಕೈಯನ್ನು ಅವಳ ಕೈಯಲ್ಲಿಡುತ್ತಾ ನಾನೆಂದೆ- ''ಇದಂತೂ ಒಂದು ಭವ್ಯ ಬಡಾವಣೆ!''

ಮುಂದೆ ಮತ್ತೊಂದು ಶನಿವಾರ ವಿಶೇಷ ಕಾರ್ಯಕ್ರಮ ನಡೆಯಿತು. ಅದನ್ನು 'ಸಾಮೂಹಿಕ ಸ್ವಚ್ಛತಾ ಚಟುವಟಿಕೆ'' ಎನ್ನಬಹುದು. ಅದು ನನ್ನ ಪ್ರಥಮ ಭಾಗೀದಾರಿಕೆ. ಎರಡು ವಾರಗಳ ಮೊದಲು ಆ ದಿನದ ಕಾರ್ಯ ವಿವರಗಳನ್ನು ಬರೆದ ಪತ್ರಗಳನ್ನು ಬೀದಿಯ ಎಲ್ಲ ಕಂಬಗಳಿಗೆ ಅಂಟಿಸಿದ್ದಳು.

ಪತ್ರದಲ್ಲಿನ ಮೊದಲ ಆದೇಶ, - ಅನಿಶ್ಚಿತ ಶನಿವಾರ ಬಡಾವಣೆಯ ಎಲ್ಲರೂ ತಮ್ಮ ತಮ್ಮ ಕಾರುಗಳನ್ನು ಮನೆಯ ಮುಂಭಾಗದಿಂದ ಕದಲಿಸಿ ಪಾರ್ಕಿನಲ್ಲಿ ಜಮಾಯಿಸಬೇಕು. ವಿಷಯ ಎಲ್ಲರಿಗೂ ತಿಳಿಯಲೆಂದು ಒಂದು ವಾರ ಮೊದಲು ಎಲ್ಲರ ಟಪಾಲು ಪೆಟ್ಟಿಗೆಗಳೊಳಗೆ ಕರಪತ್ರಗಳನ್ನೂ ಹಾಕಿಟ್ಟಳು. ಅಷ್ಟೂ ಸಾಲದೆಂಬಂತೆ ಕಾರ್ಯಕ್ರಮದ ಮುನ್ನಾ ದಿನ ಎಂದರೆ ಶುಕ್ರವಾರ ಸಂಜೆ ಎಲ್ಲರ ಮನೆಗೂ ಭೇಟಿ ನೀಡಿ ಮರುದಿನದ ಕಾಯಕವನ್ನು ನೆನಪಿಸಿದಳು. ಶನಿವಾರ ಬಂತು. ಅಂದು ಪ್ರಾತಃಕಾಲವಿನ್ನೂ ಆಗಿರಲಿಲ್ಲ, ಅಷ್ಟರಲ್ಲೇ ಎಲ್ಲರ ಮನೆಬಾಗಿಲು ತಟ್ಟಿದ ಸದ್ದು-ಒಂದಾದ ಮೇಲೆ ಇನ್ನೊಂದು- ಕಿವಿಗೆ ಬಿತ್ತು. ನಿದ್ದೆಯಿಂದ ನಮ್ಮೆಲ್ಲರನ್ನು ಎಚ್ಚರಿಸಿದ್ದಳು ಮೇಬೆಲ್. ಅವಳ ಧ್ವನಿಯಲ್ಲಿ ದೃಢನಿರ್ಧಾರವಿತ್ತು. ಅವಳಿಗೆ ಬೆಂಬಲ ನೀಡದವರೆಲ್ಲ ದುರ್ಗಂಧ ಮತ್ತು ಕೊಳಚೆಗಳನ್ನು ಸೃಷ್ಟಿಸಿ ಪರಿಸರವನ್ನು ಕೆಡಿಸುವ ಕರಾಳ ಶಕ್ತಿಗಳ ಪಕ್ಷದವರೆಂಬ ತುಚ್ಛೀಕಾರದ ಸೂಕ್ಷ್ಮ ಇಂಗಿತವಿತ್ತು.

ನನ್ನ ಕಾರನ್ನು ಪಾರ್ಕಿನೆಡೆಗೆ ಕೊಂಡೊಯ್ದು, ಹಿಂದಿರುಗಿ ನಡೆದು ಬರುತ್ತಿದ್ದಾಗ ನೆರೆಮನೆಯ ಮೈಕ್ ಗಾರ್ಸಿಯಾ ಸಿಕ್ಕಿದ. ಮೈಕ್ ನಿದ್ದೆಗಣ್ಣಿನಲ್ಲಿದ್ದ.

''ಇಂತ ನಸುಕಿನಲ್ಲೇ ಇದನ್ನೆಲ್ಲಾ ಮಾಡಬೇಕೆ? '' ಆಕ್ಷೇಪದ ಧ್ವನಿಯಲ್ಲಿ ಪ್ರಶ್ನಿಸಿದೆ.

''ಹೂಂ, ಏಕೆಂದರೆ 'ಬಾಸ್' ಹೇಳಿದ್ದಾಳಲ್ಲಾ?'' ಮೈಕ್ ಉತ್ತರಿಸಿದ.

''ಹೌದು ಮತ್ತೆ!'' ದೊಡ್ಡದಾಗಿ ನಕ್ಕೆ ನಾನು.

ಎಲ್ಲ ಕಾರುಗಳು ಬೀದಿಯಿಂದ ಕಣ್ಮರೆಯಾದುವು. ಈಗ ಮಾರ್ಗದ ಉದ್ದಗಲಗಳೇ ಹೆಚ್ಚಾದಂತೆನಿಸಿತು. ವಿಶಾಲತೆಯ ಈ ಅಪರೂಪ ದೃಶ್ಯಕ್ಕೆ ಮೆಚ್ಚಿಕೊಳ್ಳುತ್ತಿದ್ದಂತೆ ದೃಶ್ಯಪಲ್ಲಟವಾಯಿತು. ಒಂದು ಕೊನೆಯಿಂದ ಅಗ್ನಿಶಾಮಕ ಕೊಳವೆಯ ನೀರು 'ಧೋ ಧೋ' ಎನ್ನುತ್ತಾ ರಭಸದಿಂದ ನುಗ್ಗಿ ಬರುತ್ತಿತ್ತು. ಸೇನೆಯ ಸಾಲುಗಳಂತೆ ಎಲ್ಲ ಮನೆಗಳ ಪೊರಕೆಗಳು ಕಾರ್ಯೋನ್ಮುಖವಾದುವು. ಬೀದಿಯಲ್ಲಿ ಅಂಟಿಕೊಂಡಿದ್ದ ಮಣ್ಣು, ಮರಳು, ನಿತ್ಯದ ಗುಡಿಸುವಿಕೆಗೆ ಸಿಗದೇ ಹೋಗಿದ್ದ ಹಳೆಯ ಕಚಡಾ, ಎಲ್ಲವೂ ನೀರಿನೊಂದಿಗೆ ಪೊರಕೆಗಳ ಭರಕ್ಕೆ ಹರಿದೋಡಿದುವು. ಬೀದಿ ತೊಳೆದ ಕನ್ನಡಿಯಂತಾಯಿತು. ಮೂಡಿ ಬರುತ್ತಾ ಇದ್ದ ಬಾಲಸೂರ್ಯನ ಮಂದ ಪ್ರಕಾಶದಲ್ಲಿ ನೀರಲ್ಲಿ ಮಿಂದ ನೆಲ ಇಣುಕು ಮಿಣುಕಾಗಿ ಮಿನುಗಿತು.

ಸ್ವಚ್ಛತಾ ಆಂದೋಲನ ಸಾಂಕ್ರಾಮಿಕವಾಗಿತ್ತು. ನೆರೆಹೊರೆಯ ಹಲವರು ತಮ್ಮ ಮನೆಯ ಕಿಟಕಿಗಳನ್ನು ತೊಳೆದರು ; ಇನ್ನು ಕೆಲವರು ಮುಂಬಾಗಿಲುಗಳನ್ನು ಬಾಗಿಲ ಚಾವಣಿಗಳನ್ನು ನೀರೆರಚಿ ಶುಚಿಗೊಳಿಸಿದರು. ಮೇಬೆಲ್ ಎಲ್ಲ ಕಡೆಗಳಲ್ಲಿ ಒಂದೇ ಕಾಲಕ್ಕೆ ಪ್ರತ್ಯಕ್ಷಳಾಗುತ್ತಿದ್ದಂತೆ ಕಂಡಳು ! ಹೇಗೆ ತೊಳೆಯಬೇಕು ಎಲ್ಲಿ ನೀರು ಹರಿಸಬೇಕು ಎಂದೆಲ್ಲ ನಿರ್ದೇಶಿಸಿದಳು. ಸೂರ್ಯನು ಮೇಲೇರಿ ಎಲ್ಲೆಡೆ ಬೆಳಕು ಪ್ರಖರವಾಗುತ್ತಿದ್ದಂತೆ, ಅಲ್ಲಿ ಉತ್ಸವದ ವಾತಾವರಣ ಮೂಡಿತು. ಇದುವರೆಗೆ ಬೀದಿಯಲ್ಲಿ ಓಡಾಡುವಾಗ ಒಂದಿಷ್ಟು ಮುಖ ಮಾತ್ರ ನೋಡಿ ಮುಂದುವರಿಯುತ್ತಿದ್ದವರೆಲ್ಲ ಭುಜಕ್ಕೆ ಭುಜ ಆನಿಸಿ ನಿಂತರು ! ಮನಸ್ವೀ ಹರಟೆ ಹೊಡೆದರು. ಅದುವರೆಗಿನ ನನ್ನ ಪಟ್ಟಣ

ವಾಸದಲ್ಲಿ ಒಮ್ಮೆಯೂ ಇಂತ ದೃಶ್ಯವನ್ನು ಕಂಡಿರಲಿಲ್ಲ! ನಾನೂ ಆ ದೃಶ್ಯದೊಳಗಿದ್ದೆ. ಬೀದಿಕಂಬದ ಮೇಬೆಲ್ ಹಾವರ್ಡ್, ಬ್ಲಾಕ್ ಕ್ಯಾಪ್ಟನ್ '' ಎಂದು ಬರೆದಿದ್ದ ಆ ಫಲಕವನ್ನು ಒರಸಿ ಶುಚಿ ಗೊಳಿಸುತ್ತಾ ಅಲ್ಲಿ ನಾನಿದ್ದೆ. ನೆರೆಮನೆಯ ಮೈಕನೂ ಅಲ್ಲಿದ್ದ. ಈಗ ಹುಡುಗಾಟದ ಹಾಗೆ ಒಳ್ಳೆಯ ಮಜವಾಗಿದೆ! ನೀನೇನಂತೀಯಾ?'' ನಾನು ಪ್ರಶ್ನಿಸಿದೆ. ''ಹೂಂ, ನನಗೂ ಅಷ್ಟೆ, ಬಹಳ ಖುಷಿ ಆಗ್ತಾ ಇದೆ'' ಮೈಕ್ ಉತ್ಸಾಹದಿಂದ ಹೇಳಿದ.

ಈ ವರ್ಷ ಮೇಬೆಲ್‌ಗೆ ವಯಸ್ಸು ಮೀರಿತ್ತು. ವೃದ್ಧಾಪ್ಯ ಅಡಿಇಟ್ಟಿತ್ತು. ಈಗೆಲ್ಲ ಅವಳು ಹವೆ ಚೆನ್ನಾಗಿದ್ದ ದಿನಗಳು ಮಾತ್ರ ಗುಡಿಸುತ್ತಾಳೆ. ಬೀದಿಗೆ ಈಗ ಕಷ್ಟಕಾಲ. ಮೊನ್ನೆ ಅವಳ ಮನೆಗೆ ಹೋಗಿದ್ದೆ. ನಾನು ಅವಳ ವ್ಯಾಕ್ಯೂಮ್ ಕ್ಲೀನರನ್ನು (ಕಸಹೀರುವ ನಳಿಕೆಯಂತ್ರ) ಸರಿಪಡಿಸಿ ಜೋಡಿಸ ಕೊಡಬೇಕಾಗಿತ್ತು. ''ಹಲೋ ಸ್ವೀಟೀ ಪೈ'' ಎನ್ನುತ್ತಾ ಮುಂದೆ ಬಂದು ಆಲಿಂಗಿಸಿದಳು. ಈಗ ಆಕೆ ಕೃಶಾಂಗಿಯಲ್ಲ, ಬರಿಯ ಎಲುಬಿನ ಹಂದರ!'' ಓ! ಈಗ ಪರವಾಗಿಲ್ಲ ನೀನು ಚೆನ್ನಾಗಿದ್ದೀ!'' -ಸುಳ್ಳೇ ಹೇಳಿದೆ! ಮರುದಿನ ಬೆಳಗ್ಗೆ ನನ್ನ ಮನೆಯ ಮುಖಸಾಲೆಯ ನೆಲದಲ್ಲಿ ಮೂರು ಡಾಲರ್‌ಗಳಿದ್ದ ಲಕೋಟೆ ಬಿದ್ದಿತ್ತು. ನಿಜ ಹೇಳಬೇಕೆಂದರೆ ನಾನೇ ಅವಳ ಸಾಲಗಾರನಾಗಿದ್ದೆ. ಹೀಗಿದ್ದೂ ನಾನೇನೂ ಮಾಡುವಹಾಗಿಲ್ಲ. ಬಹಳ ಹಿಂದೆಯೇ ಅವಳು ಕೊಡುತ್ತಿದ್ದ ಕೂಲಿ ಹಣವನ್ನು ಹಿಂದಿರುಗಿಸುವ ಪ್ರಯತ್ನ ನಿಲ್ಲಿಸಿಬಿಟ್ಟಿದ್ದೆನಷ್ಟೆ?

ಆ ದಿನ ಸ್ವಲ್ಪ ಕಳೆದು ಮನೆಯಿಂದ ಬೀದಿಗಿಳಿದಾಗ ಅಲ್ಲೇ ಬಿದ್ದು ಕೊಂಡಿದ್ದ ಸುತ್ತೋಲೆಗಳ ಕಂತೆ ಕಣ್ಣಿಗೆ ಬಿತ್ತು. ನೋಡ ನೋಡುತ್ತಿದ್ದಂತೆ ಬಲವಾದ ಗಾಳಿ ಬೀಸಿತು. ಕಾಗದಗಳ ಕಂತೆ ಚೆಲ್ಲಾಪಿಲ್ಲಿಯಾಯಿತು. ಬೀದಿಯಲ್ಲೆಲ್ಲಾ ಹರಡಿ ಉದ್ದಕ್ಕೂ ಹಾರಿ ಹೋದುವು. ಗಾಳಿ ನಿಂತಾಗ ರಸ್ತೆಯ ತುಂಬಾ ಕಾಗದದ ತುಣುಕುಗಳು. ಆ ದೃಶ್ಯವನ್ನು ನೋಡುವುದು ಕಷ್ಟವಾಯಿತು ನನಗೆ. ಮೇಬೆಲ್ ಈ ರಸ್ತೆಗಾಗಿ ಅದರ ಸ್ವಚ್ಛತೆಗಾಗಿ ಪಡುತ್ತಿದ್ದ ಪರಿಶ್ರಮ, ಇಂದಿನ ಅವಳ ಅನಿವಾರ್ಯತೆ! ಮನಸ್ಸು ದುಗುಡ ದಿಂದ ತುಂಬಿತು. ಅದೇ ಗುಂಗಿನಲ್ಲಿ ಮನೆಗೆ ಬಂದೆ ಅಸ್ತವ್ಯಸ್ತ ಬೀದಿಯ ದೃಶ್ಯ ಕೆಣಕುತ್ತಲೇ ಇತ್ತು. ಊಟ ಮುಗಿಸಿ ಕಸ ತುಂಬುವ ಚೀಲ ಕೈಗೆತ್ತಿಕೊಂಡೆ. ಮನೆಯ ಮೆಟ್ಟಿಲಿಳಿಯುತ್ತ ಒಮ್ಮೆ ಅಳುಕಿದೆ. ಮತ್ತೆ ಮುಂದೇನಿಲ್ಲ, ಇನ್ನೂ ಬೀಸುತ್ತಲೇ ಇದ್ದ ಗಾಳಿಯಲ್ಲಿ ರಸ್ತೆಯುದ್ದಕ್ಕೂ ಹಿಂದೆ ಮುಂದೆ ನಡೆದಾಡಿದೆ, ಓಡಿದೆ. ಕಸವನ್ನೆಲ್ಲ ಎತ್ತಿ ಚೀಲಕ್ಕೆ ತುಂಬಿದೆ.

ಒಂದು ಗುಟ್ಟಿನ ಸಂಗತಿ ಹೇಳುತ್ತೇನೆ- ನಾನು ಸ್ವಲ್ಪ ಜಂಬಗಾರನೇ. ಆದರೆ ನನ್ನ ಈ ಕೆಲಸದಿಂದ ಮೇಬೆಲ್ ಸಂತೋಷ ಪಡುತ್ತಾಳೆಂದು ನನಗೆ ಗೊತ್ತಿದೆ. ಅವಳು ನನ್ನ 'ಕ್ಯಾಪ್ಟನ್' ಎನ್ನಲು ಹೆಮ್ಮೆಯಾಗುತ್ತಿದೆ.

ನಮ್ಮ ಹೊರಗೆ ಇರುವಷ್ಟು ಜಗತ್ತು ನಮ್ಮ ಒಳಗಡೆಯೂ ಇದೆ.
ಅದನ್ನು ನೋಡಲು, ಅರಿಯಲು, ನಮ್ಮ ಆತ್ಮದ ಕಣ್ಣು
ತೆರೆಯಬೇಕು.

-ವಿನೋಬಾ

ನಂಬಿ ಕೆಟ್ಟವರಿಲ್ಲವೋ!

ಗೀತಾನಾಸತ್ಯ
೨೯, ೫ನೇ ರಸ್ತೆ ಕೊನೆ, ಸಂಜಯ ನಗರ,
ಬೆಂಗಳೂರು-೫೬೦ ೦೯೪

ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆ ಮಾತಿದೆ. ಅಪತ್ತಿನಲ್ಲಿ ಧ್ಯಾನ-ಪ್ರಾರ್ಥನೆಯಿಂದ ಪ್ರಯೋಜನವಿದೆ. ಅಷ್ಟೇ ಅಲ್ಲ. ನಿರಂತರವಾಗಿ ಅವುಗಳಲ್ಲಿ ತೊಡಗಿದರೆ ರೋಗ ನಿರೋಧಕತೆ ಅರುವುದೆಂದು ವೈದ್ಯರ ಅಭಿಪ್ರಾಯ.

ಯುವಕುಟುಂಬ ವೈದ್ಯ ಹೆರಾಲ್ಡ್ ಕೊಯ್ನಿಗ್ ಅವರನ್ನು ರೋಗಿ ರೋಸ್ ಬಾಕ್ಸ್ಟರ್ ಎಂಬಾಕೆಯ ಸ್ಥಿತಿಗತಿ ಕುರಿತು ವಿಚಾರಿಸಲಾಯಿತು. ಆಕೆಯ ಗಂಡ ಅಕಸ್ಮಾತ್ತಾಗಿ ಪಾರ್ಶ್ವವಾಯುವಿನಿಂದ ನಿಧನ ಗೊಂಡಿದ್ದ. ಅಂತ್ಯಕ್ರಿಯೆ ವೇಳೆ ಆಕೆ ಬರ್ಫದಲ್ಲಿ ಜಾರಿ ಬಿದ್ದಾಗ ಸೊಂಟದ ಮೂಳೆ ಮುರಿದಿತ್ತು. ಶಸ್ತ್ರಕ್ರಿಯೆ ಮುನ್ನ ಸರ್ಜನ್ನರು ಕುಟುಂಬ ವೈದ್ಯ ಕೊಯ್ನಿಗ್‌ರನ್ನು ವಿಚಾರಿಸಿ ದಾಗ ಸಂಗತಿ ಅರಿತು ಆಕೆಯ ನಾಜೂಕಿನ ಮನಸ್ಥಿತಿ ತಿಳಿಯಿತು. ಮನದೊಳಗೆ ದುಗುಡ ದುಮ್ಮಾನ ತುಂಬಿದ್ದ ಆ ರೋಗಿಯು ಶೀಘ್ರ ಗುಣಮುಖಿ ಳಾಗಲೆಂದು ಕೊಯ್ನಿಗ್‌ರೂ ಒಪ್ಪಿಕೊಂಡರು. ಆಕೆಯನ್ನು ನೋಡಲು ವಾರ್ಡಿಗೆ ಕೊಯ್ನಿಗ್‌ರು ತೆರಳಿದಾಗ ಬಲು ಅಚ್ಚರಿ ಕಾದಿತ್ತು. ನೋವಿನ, ದುಗುಡದ ಲವಲೇಶವೂ ರೋಗಿ ರೋಸಳ ಮುಖದಲ್ಲಿರಲಿಲ್ಲ. ಆಕೆಯ ಕಣ್ಣು ಅತ್ತು ಅತ್ತು ಕೆಂಪೇರಿರಲಿಲ್ಲ. ವಿಷಾದ ಛಾಯೆಯಂತೂ ಇರಲೇ ಇಲ್ಲ.

ರೋಸಳು ಹೇಳಿದ್ದೇನೆಂದರೆ 'ಹೌದು. 'ಬದುಕಿನ ಬಲು ದುಃಖದ ದಿನಗಳಿವು. ಆದರೆ ಭವಿಷ್ಯ ದಿನಗಳಲ್ಲಿ ಬರುವ ಸಂತಸದ ಗಳಿಗೆಗೆ ಕಾದಿರುವ ನಾನು ನನ್ನ ಕುಟುಂಬವನ್ನು ಸಂತೈಸುತ್ತಿರುವೆ. ಕುಟುಂಬ ವೈದ್ಯ ಕೊಯ್ನಿಗ್‌ರು ದಂಗಾದರು. ರೋಸಳ ಮನಃಸ್ಥಿತಿಯ ಹಿಂದಿ ರುವ ನಿಗೂಢತೆ ಅರಿಯಲು ಕಾತರರಾಗಿದ್ದ ಅವರು ತಮ್ಮ ಕುತೂಹಲಕ್ಕಾಗಿ ಪ್ರಶ್ನಿಸಿದರು ಕೂಡಾ. ಆಕೆ ಹೇಳಿದ್ದಿಷ್ಟೇ. ತಾನು ಎದ್ದಿದ್ದಾಗ ಬೈಬಲ್ಲನ್ನು ಓದುವ , ದೇವ ನೊಂದಿಗೆ ಮಾತನಾಡುವುದರಲ್ಲಿ ಕಾಲ ಕಳೆವೆನು. ಈ ಅಪಾರ ನಂಬಿಕೆಯೇ ತನ್ನ ಆಸ್ತಿ ಎಂದಳು. ಈ ಹೇಳಿಕೆ ಯಿಂದ ಪ್ರಭಾವಿತರಾದ ಕೊಯ್ನಿಗ್‌ರು ಮುಂದೆ ತಮ್ಮ ಹಲವಾರು ರೋಗಿಗಳಲ್ಲಿ ರೋಗ ಮುಕ್ತರಾಗಲು ಈ ನಂಬಿಕೆಯ ಪಾತ್ರವನ್ನರಿ ಯಲು ಕುತೂಹಲಿತ ರಾದರು. ದೈಹಿಕ ರೋಗಗೆಲ್ಲಲು ಮಾನಸಿಕ ಸ್ಥಿತಿಯಾದ ನಂಬಿಕೆಯದು ಮುಖ್ಯಪಾತ್ರವೆಂದು ಮನದಟ್ಟಾಯಿತು.

ಕೊಯ್ನಿಗ್‌ರಿಗೀಗ ನಲ್ವತ್ತಾರು ವರ್ಷ. ಅಮೆರಿಕೆಯ ಡ್ಯೂಕ್ ವಿಶ್ವವಿದ್ಯಾಲಯದಲ್ಲೀತ ಮಾನಸಿಕ ರೋಗ ತಜ್ಞ. ನಂಬಿಕೆ ಚಿಕಿತ್ಸೆಯ ಕುರಿತಾದ ವೈಜ್ಞಾನಿಕ ಅನ್ವೇಷಣೆಯಲ್ಲೀತನದು ಪ್ರಥಮ ಹೆಜ್ಜೆ. ೧೯೮೪ರಿಂದೀಚೆಗೆ ಈತನ ತಂಡವು ಅಮೆರಿಕೆಯ ಸಾವಿರಾರು ರೋಗಿಗಳ ಚಿಕಿತ್ಸೆಯಲ್ಲಿ ನಂಬಿಕೆ ಪಾತ್ರದ ಕುರಿತು ವಿಶ್ಲೇಷಣೆ ನಡೆಸುತ್ತಿದೆ.

ರೋಗಿಯು ದೇವರಲ್ಲಿ ಬೇಡಿಕೊಳ್ಳುವುದರಿಂದ ಗಂಭೀರ ರೋಗ ಗೆಲ್ಲಬಲ್ಲ ಚಿತ್ತಸ್ಥೈರ್ಯ ಹಾಗೂ ದೈಹಿಕ ಸ್ಥಿತಿ ಉಂಟಾಗುವುದೆಂದು ಡಾ. ಕೊಯ್ನಿಗ್‌ರ ಹೇಳಿಕೆ. ೪೫೫ ವಯಸ್ಕ ರೋಗಿಗಳಲ್ಲಿ ನಡೆಸಿದ ಸಮೀಕ್ಷೆ ಹೀಗಿದೆ. ಪ್ರಾರ್ಥನೆಗಾಗಿ ಮಂದಿರಕ್ಕೆ ಹೋಗುತ್ತಿದ್ದ ರೋಗಿಗಳಿಗೆ ಒಂದೇ ವಾರದೊಳಗೆ ಆರೋಗ್ಯ ಸುಧಾರಣೆ ಆಯಿತು.

ಪ್ರಾರ್ಥನೆ ಮಾಡಬಯಸದವರಿಗೆ೧೦ ರಿಂದ ೧೨ ದಿನ ತಗಲಿತು. ಈ ಹೇಳಿಕೆ ಎಲ್ಲರ ಮುಂದೆ ಆಡಿ ತೋರಿಸಿದಾಗ ಯಾರೂ ನಂಬಲಿಲ್ಲ. ಕ್ರಮೇಣ ಎಲ್ಲರೂ ಒಡಂಬಡಿಸಿದರು. ಅಳವಡಿಸಿದರೂ ಕೂಡಾ. ಅಮೆರಿಕೆಯ ಮತ್ತೊಂದು ವೈದ್ಯಕೀಯ ವಿಭಾಗದಲ್ಲಿ ಹೆಚ್ಚಿನ ಪುರಾವೆ ಒದಗಿತು. ಹೃದಯದ ಶಸ್ತ್ರಕ್ರಿಯೆ ಗೊಳಗಾದ, ದೇವರನ್ನು ನಂಬುವ ರೋಗಿಗಳ ಪೈಕಿ ೩೭ ಮಂದಿಯೂ ಜೀವಿಸಿದರು. ದೇವರಲ್ಲಿ ನಂಬುಗೆ ಇರಿಸದ ೨೧ ರೋಗಿಗಳು ಶಸ್ತ್ರಕ್ರಿಯೆಯ ಅನಂತರದ ಆರು ತಿಂಗಳೊಳಗೆ ಮರಣಿಸಿದರು.

ಇಸ್ರೇಲಿನ ಸಮೀಕ್ಷೆಯ ವರದಿ ಹೀಗಿದೆ. ೩೯೦೦ ಮಂದಿಯಲ್ಲಿ ನಡೆಸಿದ ಅಧ್ಯಯನ ವದು. ಹದಿನಾರು ವರ್ಷದ ತನಕ ಅದು ನಡೆದಿದೆ. ದೈವಭೀರುಗಳಲ್ಲಿ ಉಳಿದವರಿಗಿಂತ ಶೇಕಡಾ ೪೦ಕ್ಕಿಂತಲೂ ಕಡಿಮೆ ಮರಣ ಪ್ರಮಾಣವೆಂದು ಆ ಅಂಕಿ ಅಂಶ ತಿಳಿಸುತ್ತದೆ. ಅರ್ಬುದ, ಹೃದ್ರೋಗ ಮರಣಗಳಂತೂ ನಾಸ್ತಿಕರಲ್ಲಿ ಅತ್ಯಧಿಕ ಎಂದು ವರದಿ ತಿಳಿಸುತ್ತದೆ. ಯೇಲ್ ವಿಶ್ವವಿದ್ಯಾಲಯದ ವರದಿ ಪ್ರಕಾರ ೨೮೧೨ ಮಂದಿಗೊಡ್ಡಿದ ಪ್ರಶ್ನಾವಳಿ ಮೂಲಕ ತಿಳಿದ ಸಂಗತಿ ಹೀಗಿದೆ. ಪ್ರಾರ್ಥನಾ ಮಂದಿರಕ್ಕೆ ತೆರಳಿದವರಲ್ಲಿ ಪಾರ್ಶ್ವವಾಯು ಪೀಡಿತರ ಸಂಖ್ಯೆಯು ಪ್ರಾರ್ಥನೆಯಲ್ಲಿ ತೆರಳುವವರಿಗಿಂತ ಇಮ್ಮಡಿಯಷ್ಟು.

ಹಾರ್ವರ್ಡ್ ಪ್ರೊಫೆಸರ್ ಹರ್ಬರ್ಟ್ ಬೆನ್ಸನ್ ಪ್ರಕಾರ ಪ್ರಾರ್ಥನೆ ಹಾಗೂ ಧ್ಯಾನದಿಂದ ನಾರ್ ಅಡ್ರಿನಲೀನ್ ಮತ್ತು ಅಡ್ರಿನಲೀನ್ ಅಂತಸ್ಸ್ರಾವಕಗಳು ಸರಿಯಾಗಿ ಸುರಿಯುವಂತ ಒತ್ತಡ ರಹಿತ ಸ್ಥಿತಿ ದೇಹದಲ್ಲುಂಟಾಗುವುದಂತೆ. ಒತ್ತಡದಿಂದಲೇ ಬರುವ ಷಂಡತ್ವ, ರಕ್ತದ ಏರೋತ್ತಡ ಮತ್ತು ಹೃದ್ರೋಗ ನಿರೋಧಿಸಲು ಧ್ಯಾನ, ಪ್ರಾರ್ಥನೆ ಸಹಾಯಕ. ಉಸಿರಾಟ, ಹೃದಯಗತಿ ಮತ್ತು ಮಿದುಳಿನ ಸಹಜ ಕ್ರಿಯೆಗೆ ಪುನರಾವರ್ತಿತ ಪ್ರಾರ್ಥನೆ ಕಾರಣವಾಗುತ್ತದೆ ಎಂದು ಬೆನ್ಸನ್ ಹೇಳುತ್ತಾರೆ. ಒತ್ತಡದಿಂದ ದೇಹದ ರೋಗ ನಿರೋಧ ಶಕ್ತಿ ಏರುಪೇರು, ಬಿರಿಯೂತಕಾರಿ ಇಂಟರ್ ಲ್ಯೂಕಿನ್-೬ ಎಂಬಂಶ ಉತ್ಪನ್ನ. ಹೃದ್ರೋಗ, ಅರ್ಬುದ, ಮಧು ಮೇಹ, ಹಳೆ ಕಾಯಿಲೆ ಉಂಟುಮಾಡುವಂಥ ಈ ಅಂಶವು ಪ್ರಾರ್ಥನಾ ಮಂದಿರಕ್ಕೆ ಹೋಗದಿರುವವರ ರಕ್ತದಲ್ಲಿ ಹೆಚ್ಚಿರುವುದನ್ನು ಡಾ. ಕೊಯ್ನಿಗ್ ಪತ್ತೆ ಹಚ್ಚಿದ್ದಾರೆ. ಪ್ರಾರ್ಥನಾ ನಿರತರಲ್ಲಿ ರೋಗ ನಿರೋಧಕತೆ ಹೇರಳವಂತೆ. ಬೆನ್ಸನ್ನರ ಸಮಯ ರಹಿತ ಚಿಕಿತ್ಸೆ ಎಂಬ ಪುಸ್ತಕದಲ್ಲಿ ಮರ್ತ್ಯರಿಗೆ ಅಮರತ್ವ ಹೊಂದಿದ ದೇವನ ಬಗ್ಗೆ ಸದಾ ಚಿಂತೆ, ಕಾಳಜಿ ಇರುವುದು ಅತ್ಯಂತ ಸುಸ್ಪಷ್ಟ ಎಂದಿದ್ದಾರೆ.

ಅಮೆರಿಕೆಯಲ್ಲಿ ಡಾ. ಕೊಯ್ನಿಗ್, ಬೆನ್ಸನ್ನರ ವಾದಗಳಿಗೆ ಕ್ರಮೇಣ ಬೆಂಬಲ ದೊರೆಯುತ್ತಿದೆ. ಜಾನ್ ಹಾಪ್‌ಕಿನ್ ಇನ್ಸ್ಟಿಟ್ಯೂಟಿನಲ್ಲಿ ಇದೀಗ ನಂಬಿಕೆ-ಚಿಕಿತ್ಸೆಯ ಹೊಸ ಶಿಕ್ಷಣ ವಿಭಾಗ ಆರಂಭವಾಗಿದೆ. ಆರಂಭಿಸಿದ ವೈದ್ಯ ಕಾರ್ಸನ್ ಪ್ರಕಾರ ಈ ಶಿಕ್ಷಣ ಬಹುಜನಪ್ರಿಯವಾಗುವುದಂತೆ. ಒತ್ತಡ ರಹಿತ ಜೀವನಕ್ಕೆ ಆಹಾರ ಮತ್ತು ಧ್ಯಾನ ಹೇಗೆ ಪೂರಕ ಎಂಬುದನ್ನು ಜಗತ್ತಿಗೆ ಸಾರಿದ ಡೀನ್ ಆರ್ನಿಶ್‌ರು ನಂಬಿಕೆ ಚಿಕಿತ್ಸೆಯ ಜನಪ್ರಿಯತೆ ಸಾರುತ್ತಾರೆ. ಪ್ರೀತಿ ಮತ್ತು ಬದುಕಿನ ಉಳಿವು ಎಂಬ ಇವರ ಇತ್ತೀಚಿನ ಜನಪ್ರಿಯ ಪುಸ್ತಕದಲ್ಲಿ ನಂಬಿಕೆ ಚಿಕಿತ್ಸೆಯು ಅತ್ಯಂತ ಪ್ರಾಚೀನ. ಮರುಶೋಧನೆ ಮಾತ್ರ ಈಚೆಗೆ ಆಗುತ್ತಿರುವುದೆಂದು ಆರ್ನಿಶ್ ವಾದಿಸುತ್ತಾ ಅದು ಶಾಶ್ವತ ಆರೋಗ್ಯಕ್ಕೆ ಬಲು ಪೂರಕ ಎನ್ನುತ್ತಾರೆ.

ಪುಸ್ತಕ ವಿಮರ್ಶೆ

ಕನ್ನಡ ಹಸ್ತಪ್ರತಿ ಸೂಚಿ ಭಾಗ೧: ಪುಟಗಳು xii +57 +8 ಸಂ: ಗೌ.ಮ. ಉಮಾಪತಿ ಶಾಸ್ತ್ರಿ ಎಂ.ಎ. ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಗ್ರಂಥಮಾಲೆ ಉಜಿರೆ ಪಿನ್‌ಕೊಡು-೫೭೪೨೪೦, ಪ್ರಕಟಣೆ ಜನವರಿ ೨೦೦೦, ಬೆಲೆ ರೂ.೬೫

ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಮುದ್ರಿತ ಗ್ರಂಥ ಭಂಡಾರವಾಗಲೀ ಹಸ್ತ ಪ್ರತಿ ಸಂಗ್ರಹವಾಗಲೀ ಅವನ್ನು ಅಚ್ಚುಕಟ್ಟಾಗಿ ರಕ್ಷಿಸಿಕೊಂಡು ಬರುತ್ತಿರುವ ಮುಖ್ಯಸ್ಥರಾದ ಕನ್ನಡ, ಹಿಂದಿ ಸಂಸ್ಕೃತ ಭಾಷಾತಜ್ಞರಾದ ಪ್ರೊ.ಗೌ.ಮ. ಉಮಾಪತಿಶಾಸ್ತ್ರಿಗಳ ಕರ್ತವ್ಯನಿಷ್ಠೆ ದಕ್ಷತೆಗಳನ್ನು ಖಂಡಿತ ಮೆಚ್ಚಬೇಕು. ಒಬ್ಬ ವ್ಯಕ್ತಿ ಈ ಕೆಲಸದ ಬಗ್ಗೆ ಈ ಕಾಲದಲ್ಲಿ ಇಷ್ಟೊಂದು ಆಸಕ್ತಿಯನ್ನು ವಹಿಸಿರುವುದನ್ನು ಕಂಡರೆ ಆಶ್ಚರ್ಯವೆನಿಸುತ್ತದೆ. ಕೇವಲ ಗ್ರಂಥಗಳ ರಕ್ಷಣೆ ಮಾತ್ರವಲ್ಲ ಜೊತೆಗೆ ಅವುಗಳಿಗೆ ಸೂಚಿಯನ್ನು ಅಭ್ಯಾಸಪೂರ್ಣವಾಗಿ ರಚಿಸಿರುವುದನ್ನು ಕಂಡಾಗ ಪ್ರಶಂಸನೀಯವೆನಿಸುತ್ತದೆ. ಇನ್ನೊಂದು ಅಂಶ- ಅವರ ಆಸಕ್ತಿ ಇದಕ್ಕೆ ಸೀಮಿತವಾಗದೆ ಹಸ್ತಪ್ರತಿಗ್ರಂಥಗಳ ಸಂಗ್ರಹದಲ್ಲಿಯೂ ಮೇಲುಗೈಯೆನಿಸಿದ್ದಾರೆ. ಹಸ್ತಪ್ರತಿಗಳ ಸೂಚಿಗಳನ್ನು ಪ್ರಕಟಿಸಿರುವುದರಲ್ಲಿ ಯಕ್ಷಗಾನ: ಕನ್ನಡ ಹಸ್ತಪ್ರತಿಗಳ ವಿವರಣ ಸೂಚಿ. (ಸಂ.೧). ೧೯೯೩ರಲ್ಲಿ ಮೊಟ್ಟ ಮೊದಲು ಪ್ರಕಟವಾದ ಉಪಯುಕ್ತ ಹಾಗೂ ಸಂಶೋಧನಾತ್ಮಕ ಸೂಚಿ. ಇದರ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಪ್ರಶಂಸಿದ್ದಾರೆ. ಸಾಮಾನ್ಯ ಗ್ರಂಥ ಸೂಚಿಗಳಿಗಿಂತ ಭಿನ್ನವಾದದ್ದು, ಯಕ್ಷಗಾನ ಸಂಶೋಧಕರಿಗಂತೂ ಅಚ್ಚುಮೆಚ್ಚಿನ ಸೂಚಿಯಾಗಿದೆ.

ಇನ್ನು ಉಮಾಪತಿಶಾಸ್ತ್ರಿಗಳು ತಮ್ಮ ಎರಡನೆಯ ಸೂಚಿಗ್ರಂಥವಾದ ಪ್ರಸ್ತುತ ಕನ್ನಡ ಹಸ್ತಪ್ರತಿ (ಭಾಗ-೧) ಯು ಮೊದಲು ಪ್ರಕಟಿಸಿರುವ ಸೂಚಿಯಷ್ಟೇ ಉಪಯುಕ್ತವಾಗಿದೆ. ಎಂದು ಗ್ರಂಥಾವಲೋಕನದಿಂದ ಹೊರಹೊಮ್ಮುತ್ತದೆ. ಅಲ್ಲಿ ಹಸ್ತಪ್ರತಿಗಳ ಬಗ್ಗೆ ವಿಮರ್ಶಾತ್ಮಕ ಹಾಗೂ ಸಂಕ್ಷಿಪ್ತ ವಿವರಣೆಗಳನ್ನೂ ಆ ಪ್ರತಿಗಳಿಗೆ ಸಂವಾದಿಯಾಗಿ ಇತರ ಹಸ್ತಪ್ರತಿಗಳ ತುಲನಾತ್ಮಕ ಅಂಶಗಳನ್ನೂ ಗುರುತಿಸಿದ್ದರೆ ಇಲ್ಲಿ ಪ್ರತಿ ಹಸ್ತಪ್ರತಿಗಳ ಅನುಕ್ರಮಸಂಖ್ಯೆ ಮೊದಲುಗೊಂಡು ಹಸ್ತಪ್ರತಿ ಕ್ರಮಸಂಖ್ಯೆ, ಕೃತಿಯ ಹೆಸರು, ಗ್ರಂಥಕರ್ತೃ, ಕವಿಯಕಾಲ, ಯಾವ ಛಂದಸ್ಸಿನಲ್ಲಿ ಗ್ರಂಥ ರಚಿತವಾಗಿದೆ ಇವೇ ಮೊದಲಾದ ಅಂಶಗಳನ್ನು ಗುರುತಿಸಿದ್ದಾರೆ ; ಆದರೆ ಇಲ್ಲಿ ಒಂದಂಶವನ್ನು ಬಿಟ್ಟಿರುವುದು ಕಂಡು ಬರುತ್ತದೆ. ಅದೇನೆಂದರೆ ಕೃತಿಯು ಸಮಗ್ರವಾಗಿದೆಯೆ ಅಥವಾ ಅಸಮಗ್ರವಾಗಿದೆಯೇ ಎಂಬುದು ನೀಡಿರುವ ವಿವರಣೆಯಲ್ಲಿ ತಿಳಿದು ಬರುವುದಿಲ್ಲ. ಹಾಗಾಗಿ ಅವುಗಳನ್ನು ಪರೀಕ್ಷಿಸಿಯೇ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹಸ್ತಪ್ರತಿ ಕ್ರಮಸಂಖ್ಯೆಯ ಪ್ರಾರಂಭದಲ್ಲಿ ತಾ (ಎಂದರೆ ತಾಳೆ ಗ್ರಂಥ), ಕಾ(ಎಂದರೆ ಕಾಗದ) ಎಂದು ಪ್ರಾರಂಭದಲ್ಲಿಯೇ ಗುರುತಿಸಿರುವುದು ಸೂಕ್ತವಾಗಿದೆ. ಇನ್ನು ಸೂಚಿಯನ್ನು ಸಿದ್ಧಪಡಿಸಿದ ಮೇಲೆ ಆಯಾ ಕೃತಿಗಳ ವಿಷಯವನ್ನು ಅನುಸರಿಸಿ ವಿನಿಲ್ಲಾವೆಂದರೂ ಇಪ್ಪತ್ತು ವಿಬಾಗಗಳಾಗಿ ವಿಭಜಿಸಿರುವುದರಿಂದ ಆಯಾ ವಿಭಾಗಗಳಲ್ಲಿ

ಸಂಶೋಧಿಸುವವರಿಗೆ ಬಹು ಉಪಯುಕ್ತ ಅಂಶವೆನಿಸಿದೆ ಹಾಗೂ ಮಾರ್ಗದರ್ಶಿಯಾಗಿದೆ. ಕೊನೆಯ ವಿಷಯವಾದ 'ವಿವಿಧ' ದಲ್ಲಿ ವೈದಿಕ, ವೀರಶೈವ, ಜೈನ ಕೃತಿಗಳಾಗಿದ್ದು ಶೀರ್ಷಿಕೆಗೆ ತಕ್ಕ ಹಾಗೆ ಇದೆ. ಸಂಕೀರ್ಣವೆಂದು ಬೇಕಾದರೆ ಕರೆಯಬಹುದಿತ್ತು. ವಿಷಯಗಳ ವಿಭಾಗದಲ್ಲಿರುವ ಕೃತಿಗಳ ಅಕಾರಾದಿಯನ್ನು ಕೊಟ್ಟಿದ್ದಾರೆ, ಆದರೆ ಎಲ್ಲಾ ವಿಷಯಗಳಲ್ಲಿರುವ ಕೃತಿಗಳನ್ನು ಒಟ್ಟಾಗಿ ಸೇರಿಸಿ, ಕೊನೆಯ ಪುಟಗಳಲ್ಲಿ ಅವುಗಳ ಸಮಗ್ರ ಅಕಾರಾದಿಯನ್ನು ನೀಡಿದ್ದರೆ ಇನ್ನೂ ಉಪಯುಕ್ತವಾಗುತ್ತಿತ್ತು.

ಇನ್ನೊಂದು ಸಂದಿಗ್ಧವಾಗಿರುವ ಅಂಶವೆಂದರೆ ಮೇಲಿನ ಕೃತಿಗಳಿಗೆ ಸಂವಾದಿಯಾಗಿ ಆಯಾ ಪುಟಗಳ ಅಡಿ ಟಿಪ್ಪಣಿಯಲ್ಲಿ ಕೆಲವು ಹಸ್ತಪ್ರತಿಗಳ ಸಂಖ್ಯೆಗಳಿವೆ, ಅವುಗಳು ಏನು? ಯಾವುವು? ಆ ಸಂಖ್ಯೆಗಳು ತಾಳೆ ಗ್ರಂಥ ಕಾಗದದ ಹಸ್ತಪ್ರತಿಗಳ ಅನುಕ್ರಮ ಸಂಖ್ಯೆಯಾಗಿರಬಹುದು; ಆದರೆ ಅವು ಮುಂಬರುವ ಸೂಚಿ ಸಂಪುಟಗಳಿಗೆ ಅನ್ವಯಿಸುವುದೊ ಸ್ಪಷ್ಟವಿಲ್ಲ. ಒಟ್ಟಿನಲ್ಲಿ ಈ ಕನ್ನಡ ಹಸ್ತಪ್ರತಿ ಸೂಚಿ ಭಾಗ ೧, ಹಸ್ತಪ್ರತಿಗಳನ್ನು ಅಭ್ಯಸಿಸುವವರಿಗೆ, ಸಂಶೋಧಕರಿಗೆ ಉಪಯುಕ್ತವಾಗಿದೆ. ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ಸೂಚಿಗಳು ವಿಶ್ವವಿದ್ಯಾನಿಲಯದ ಅನೇಕ ಸಂಶೋಧನಾ ಕೇಂದ್ರಗಳಲ್ಲಿವೆ. ಕೆಲವು ಖಾಸಗೀ ಸಂಸ್ಥೆಗಳಲ್ಲಿವೆ. ಆ ಎಲ್ಲಾ ಸೂಚಿಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ಹಸ್ತಪ್ರತಿಗಳೆಲ್ಲಕ್ಕೂ ಸೂಚಿಯನ್ನು ಒಂದೆಡೆ ಕ್ರೋಢೀಕರಿಸಿ ಪ್ರಕಟಿಸಿದಲ್ಲಿ ಬೃಹತ್ ಹಸ್ತ ಪ್ರತಿಗಳ ಸೂಚಿಯೆನಿಸುವುದರಲ್ಲಿ ಯಾವ ಸಂಶಯವಿರುವುದಿಲ್ಲ.

ಕೆ.ಆರ್.ಶೇಷಗಿರಿ
ಎಂ.ಹೆಚ್. ೩೧, ಆರನೇ ವಿಭಾಗ,
ಕುವೆಂಪು ನಗರ, ಸರಸ್ವತಿಪುರಂ,
ಮೈಸೂರು-೫೭೦ ೦೦೯

ಎಚ್.ಕೆ. ವೀರಣ್ಣಗೌಡ: ಸಂಕ್ಷಿಪ್ತ ಜೀವನ ಚರಿತ್ರೆ ಲೇ: ಪ್ರೊ.ಡಿ. ಲಿಂಗಯ್ಯ, ಎಚ್.ಕೆ. ವಿರಣ್ಣಗೌಡ ಸ್ಮಾರಕ ಪ್ರತಿಷ್ಠಾನ, ನಂ.೩, ವಿನೋದ ನಿಲಯ, ೧೦ನೇ ತಿರುವು, ಹನುಮಂತನಗರ, ಬೆಂಗಳೂರು-೧೯ ಪ್ರಕಟಣೆ: ೧೯೯೯, ಪುಟ-೧೩೮, ಬೆಲೆ: ರೂ.೪೦.೦೦

ಹಿರಿಯ ಸ್ವಾತಂತ್ರ್ಯಯೋಧ, ಧೀಮಂತ ಪತ್ರಕರ್ತ, ಸಮಾಜ ಸುಧಾರಕ, ರೈತರ ಹಿತಸಂರಕ್ಷಕರಾಗಿ ನಾಡಿನ ಜನಮನದಲ್ಲಿ ಇಂದಿಗೂ ಹಸಿರಾಗಿ ಉಳಿದಿರುವ ಶ್ರೀ ಎಚ್.ಕೆ. ವೀರಣ್ಣಗೌಡರ ಜನ್ಮಶತಾಬ್ದಿಯ ನೆನಪಿಗಾಗಿ ಹೊರತಂದಿರುವ ಈ ಕಿರುಹೊತ್ತಿಗೆ ಕೇವಲ ಎಂಟು ದಿನಗಳ ವಿಶೇಷ ಪರಿಶ್ರಮದಿಂದ ಮೂಡಿಬಂದಿದೆಯೆಂದು ಲೇಖಕರೇ ಅರಿಕೆ ಮಾಡಿಕೊಂಡಿದ್ದಾರೆ. ಬಹುಮುಖ ಪ್ರತಿಭೆಯ ಮಹಾನ್ ಚೇತನವೊಂದರ ಸಮಗ್ರ ಜೀವನವನ್ನು ಅವಲೋಕಿಸಿ ಬರೆಯಲು ಈ ಅವಧಿ ಏನೇನೂ ಅಲ್ಲ ಎಂಬುದು ನಿಜವಾದರೂ ಆ ಕ್ಲುಪ್ತ ಕಾಲದಲ್ಲೇ ಸಾಕಷ್ಟು ಯಶಸ್ವಿಯಾಗಿಯೇ ಈ ಕೆಲಸ ನಿರ್ವಹಿಸಿರುವ ಲೇಖಕರು ಅಭಿನಂದನಾರ್ಹರಾಗಿದ್ದಾರೆ.

ಅನುಕೂಲತೆಯ ದೃಷ್ಟಿಯಿಂದ ಈ ಕೃತಿಯಲ್ಲಿ ಹನ್ನೊಂದು ವಿಭಾಗಗಳನ್ನು

ಮಾಡಿಕೊಂಡು ಅವುಗಳಿಗೆ ಜನನ ಬಾಲ್ಯ ವಿದ್ಯಾಭ್ಯಾಸ, ಶಿಕ್ಷಕ, ಪತ್ರಿಕೋದ್ಯಮಿ ಸಂಸಾರಿ, ರೈತ ಚಳವಳಿಯ ಪ್ರವರ್ತಕ, ಕಾಂಗ್ರೆಸ್ ಕಾಯಕ, ಸೆರೆಮನೆ ಶಿಕ್ಷೆ, ದೈವಭಕ್ತ, ಸಾಹಿತಿ, ಶಿಕ್ಷಣ ಪಕ್ಷಪಾತಿ, ವ್ಯಕ್ತಿತ್ವ ವಿವೇಚನೆ ಎಂಬ ಹೆಸರುಗಳನ್ನು ಕೊಟ್ಟು ವಿವರಿಸಿದ್ದಾರೆ.

೧೮೯೯ನೇ ಇಸವಿ ಮೇ ಒಂದರಂದು ಚನ್ನಪಟ್ಟಣ ತಾಲ್ಲೂಕಿನ ಪ್ರತಿಷ್ಠಿತ ಮನೆತನದ ಕೆಂಚೇಗೌಡ ದಂಪತಿಗಳಿಗೆ ಹುಟ್ಟಿದ ವೀರಣ್ಣಗೌಡರು ಬಾಲ್ಯದಿಂದಲೂ ರೂಢಿಸಿಕೊಂಡಿದ್ದ ಮೇಧಾಶಕ್ತಿಯನ್ನೂ ಹೋರಾಟ ಮನೋಭಾವಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ವಿಶಿಷ್ಟತೆಯನ್ನೂ ಮೊದಲ ವಿಭಾಗದಲ್ಲಿ ಗುರುತಿಸಿದರೆ ಎರಡನೇ ವಿಭಾಗದಲ್ಲಿ ತಮಗೆ ಬಂದಿದ್ದ ಶೇಕದಾರ ಹುದ್ದೆಯನ್ನು 'ತಾಬೆ' ಕೆಲಸ ಎಂದು ದೂರೀಕರಿಸಿ ಹಳ್ಳಿಯ ಮಕ್ಕಳಿಗೆ ಉನ್ನತ ಧ್ಯೇಯಧೋರಣೆಗಳನ್ನು ಬೋಧಿಸಿ ಉತ್ತಮ ಜನಾಂಗವನ್ನಾಗಿ ರೂಪಿಸುವ ಬಯಕೆಯಿಂದ ಮುಖ್ಯೋಪಾಧ್ಯಾಯ ವೃತ್ತಿಯನ್ನು ಆರಿಸಿಕೊಂಡ ಅವರ ಉನ್ನತ ಧ್ಯೇಯಾದರ್ಶವನ್ನೂ, ಆ ಕ್ಷೇತ್ರದಲ್ಲಿ ಅವರು ಯಶಸ್ವಿ ಯಾಗುತ್ತಿದ್ದ ಪರಿಯನ್ನೂ ವಿವರಿಸಿದ್ದಾರೆ. ಮೂರನೇ ವಿಭಾಗವು ವೀರಣ್ಣಗೌಡರ ಬದುಕಿಗೆ ಮಹತ್ತರ ತಿರುವನ್ನು ತಂದುಕೊಟ್ಟು ಪತ್ರಿಕೋದ್ಯಮವು ಸರಳ ಆದರ್ಶವಾದಿಯನ್ನು ಸಂಕೀರ್ಣ ಹೋರಾಟಕ್ಕೆ ಸಿದ್ಧಪಡಿಸಿದ ಬಗೆಯನ್ನು ತೆರೆದಿಡುತ್ತದೆ. 'ಒಕ್ಕಲಿಗರ ಪತ್ರಿಕೆ'ಯ ಸಂಪಾದಕರಾಗಿ ತಮ್ಮ ಹರಿತ ಲೇಖನಿಯಿಂದ ಜನಾನುರಾಗ ಗಳಿಸಿಕೊಂಡು, ಅನ್ಯರ ಮರ್ಜಿಗೆ ಒಳಗಾಗಲು ಇಷ್ಟಪಡದೆ ಸ್ವತಃ "ಚಿತ್ರಗುಪ್ತ" ಎಂಬ ನಿರ್ಭಯ, ನಿಷ್ಪಕ್ಷಪಾತ, ನಿರ್ದಾರಣ್ಯ ಕನ್ನಡ ದಿನಪತ್ರಿಕೆ ಆರಂಭಿಸಿ ಅಲ್ಲೂ ಸಾಕಷ್ಟು ನೋವುನಲಿವುಗಳನ್ನುಂಡು ಪತ್ರಿಕಾಕ್ಷೇತ್ರ ನಡೆದು ಬಂದ ದಾರಿಯಲ್ಲಿ ಸ್ಪಷ್ಟ ಹೆಜ್ಜೆಗುರುತು ಮೂಡಿಸಿ ಅಮರರಾದ ಬಗೆಯನ್ನು ಸವಿವರವಾಗಿ ಇಲ್ಲಿ ವರ್ಣಿಸಲಾಗಿದೆ.

ನಾಲ್ಕನೇ ವಿಭಾಗದಲ್ಲಿ ಬಾಲವಿಧವೆ ತಾಯಮ್ಮರನ್ನು ಶಾಸ್ತ್ರೋಕ್ತವಾಗಿ ವಿವಾಹ ಮಾಡಿಕೊಂಡು ಸಾಧಿಸಿದ ಕ್ರಾಂತಿಯನ್ನು, ಸೋದರ ಸೋದರಿಯರನ್ನು ಆಪ್ತತೆಯಿಂದ, ಆತ್ಮೀಯತೆಯಿಂದ ನೋಡಿಕೊಂಡ ಪರಿಯನ್ನೂ ಐದನೇ ವಿಭಾಗದಲ್ಲಿ ರೈತ ಚಳವಳಿಯ ಪ್ರವರ್ತಕರಾಗಿ ಇರ್ವಿನ್ ನಾಲಾ (ಈಗಿನ ವಿಶ್ವೇಶ್ವರಯ್ಯ ನಾಲೆ) ಬಯಲಿನ ರೈತರು ಮಿತಿಮೀರಿದ ಕಂದಾಯ, ವಂತಿಗೆ ಕೊಡುವುದನ್ನು ತಪ್ಪಿಸಲು, ಕ್ಷೇತ್ರ ವಿಧಾನದಲ್ಲಿ ಬೇಸಾಯ ಮಾಡಬೇಕೆಂಬ ನಿಯಮವನ್ನು ಒಪ್ಪದಿರಲು, ರೈತರ ಕಷ್ಟಕಾರ್ಪಣ್ಯಗಳನ್ನು ಸರಕಾರದ ಗಮನಕ್ಕೆ ತರಲು ಕೈಗೊಂಡ ಅಭೂತಪೂರ್ವ ಚಳವಳಿ ನಾಲ್ಕು ಸಾವಿರ ರೈತರ ತಂಡವನ್ನು ಮದ್ದೂರಿನಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗಿ ಬಂದ ಯಶೋಗಾಥೆ, ಮೈಸೂರು ಪ್ರದೇಶದ ರೈತ ಮತ್ತು ರೈತ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಮಾಡಿದ ಹೋರಾಟ ಇತ್ಯಾದಿ ವಿವರಗಳನ್ನು ತುಂಬಿಕೊಡಲಾಗಿದೆ. ಆರನೆ ವಿಭಾಗ ಕಾಂಗ್ರೆಸ್ ಸದಸ್ಯರಾಗಿ ಶ್ರೀ ವೀರಣ್ಣಗೌಡರು ಸಾಧಿಸಿದ ಅಪೂರ್ವ ಸಾಧನೆಗಳನ್ನು ವರ್ಣಿಸುತ್ತದೆ. ಅದರಲ್ಲಿ ೧೯೩೮ನೇ ಏಪ್ರಿಲ್ ೧೧,೧೨,೧೩ರಂದು ಶಿವಪುರದಲ್ಲಿ ನಡೆಸಿದ ಬೃಹತ್ ಸಮಾವೇಶದ ವ್ಯವಸ್ಥೆ ಅತ್ಯಂತ ಪ್ರಮುಖವಾದುದು. ಹಾಗೆಯೇ ಸ್ವಾತಂತ್ರ್ಯಾನಂತರ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ, ನ್ಯಾಯವಿಧಾಯಕ ಸಭಾ ಸದಸ್ಯರಾಗಿ, ವಿಧಾನಸಭಾ ಸದಸ್ಯರಾಗಿ, ಸಚಿವರಾಗಿ, ಲೋಕಸಭಾ

ಸದಸ್ಯರಾಗಿ ಅನೇಕ ಗಣ್ಯರೀತಿಯ ಕೆಲಸಗಳನ್ನು ಯಶಸ್ವಿಯಾಗಿ ನಿಭಾಯಿಸಿ ಕಡೆಗೆ ತಾವು ಮೈಸೂರಿನಲ್ಲಿ ಕಟ್ಟಿದ ಆ ಕಾಂಗ್ರೆಸ್ಸಿಗೇ ರಾಜಿನಾಮೆ ನೀಡಿ ಹೊರಬಂದ ವಿಪರ್ಯಾಸ ವನ್ನು ಕಟ್ಟಿಕೊಡುತ್ತದೆ.

ಏಳನೇ ವಿಭಾಗವು ಪ್ರಾಮಾಣಿಕ ಸತ್ಯಾಗ್ರಹಿಯಾದ ವೀರಣ್ಣಗೌಡರು ಒಟ್ಟು ಸುಮಾರು ಎರಡು ವರುಷಗಳ ಕಾಲ ಜೈಲುಶಿಕ್ಷೆ ಅನುಭವಿಸಿ ಪಡೆದ ವಿಶಿಷ್ಟ ಅನುಭವಗಳ ಕಡೆಗೆ ಬೆಳಕು ಹಾಯಿಸಿದರೆ ಎಂಟನೇ ವಿಭಾಗದಲ್ಲಿ ದೈವಭಕ್ತ ವೀರಣ್ಣಗೌಡರ ಭಕ್ತಿಪರವಶತೆಯನ್ನು ಕುರಿತು ಹೇಳಿದೆ. ಒಂಬತ್ತನೇ ವಿಭಾಗದಲ್ಲಿ ಸಾಹಿತಿಯಾಗಿ ವೀರಣ್ಣಗೌಡರು ಬೆಳೆದು ಬಂದ ಬಗೆಯ ಚಿತ್ರಣ ಇದೆ. ಇಲ್ಲಿ ಅವರ ಸಾಹಿತ್ಯದಲ್ಲಿ ದಟ್ಟವಾದ ಸಾಹಿತ್ಯಾಂಶಕ್ಕಿಂತ, ರಸಾಂಶಕ್ಕಿಂತ ವೈಚಾರಿಕ, ವಿವರಣಾತ್ಮಕ ವಿಶ್ಲೇಷಣೆ, ಬಿಚ್ಚು ಮನಸ್ಸಿನ ಅಭಿವ್ಯಕ್ತಿ ಲಘುಹಾಸ್ಯ, ಖಾರವಾದ ದಾಟಿ, ಸರಿಯೆನಿಸಿದ್ದಕ್ಕೆ ಅಂಟಿಕೊಳ್ಳುವ ಜಿಗುಟುತನ, ವಿಪುಲವಾದ ಲೋಕಾನುಭವ ವಿಶೇಷವಾಗಿ ಕಾಣುವ ಬಗೆಯನ್ನು ಅವರ ಸಂಪಾದಕೀಯಗಳು ಮತ್ತು ವಿಶೇಷ ಲೇಖನ ಗಳ ಹಿನ್ನೆಲೆಯಲ್ಲಿ ರೂಪಿಸಲಾಗಿದೆ.

ಹತ್ತನೇ ವಿಭಾಗದಲ್ಲಿ ಶಿಕ್ಷಣ ಪಕ್ಷಪಾತಿ ಯಾದ ವೀರಣ್ಣಗೌಡರು ಶೈಕ್ಷಣಿಕ ಅಭಿವೃದ್ಧಿಗೆ ಮಾಡಿದ ಯತ್ನಗಳ ವಿವರಣೆಯಿದ್ದರೆ ಹನ್ನೊಂದನೇ ವಿಭಾಗವು ವೀರಣ್ಣ ಗೌಡರ ಬಗೆಗೆ ಎಸ್.ನಿಜಲಿಂಗಪ್ಪ, ಕಡಿದಾಳು ಮಂಜಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವಿ.ವೆಂಕಟಪ್ಪ, ವಿ.ಎಸ್. ನಾರಾಯಣರಾವ್, ಪಿ.ಎನ್.ಜವರಪ್ಪ ಗೌಡ, ಎ.ಸಿ.ಮಾದೇಗೌಡ, ತಗಡೂರು ರಾಮಚಂದ್ರರಾವ್, ಕೆ.ಪಟ್ಟಾಭಿರಾಮನ್, ಬಿ.ಶಿವಮೂರ್ತಿಶಾಸ್ತ್ರಿ ಎಚ್.ವಿ. ಸುಬ್ಬರಾಮಯ್ಯ, ದೇಜಗೌ ಮುಂತಾದ ಮಹನೀಯರು ನೀಡಿರುವ ಜ್ವಲಂತ ಅಭಿಪ್ರಾಯಗಳನ್ನೊಳಗೊಂಡಿದೆ.

ಈ ಕೃತಿಯಲ್ಲಿ ಉಲ್ಲೇಖಗಳು, ಉದ್ಧೃತ ಭಾಗಗಳು ವಿಶೇಷವಾಗಿಯೇ ಬರುತ್ತವಾದರೂ ಅವೂ ಕೃತಿಗೆ ಒಂದು ರೀತಿಯ ಶೋಭೆಯನ್ನೇ ಕೊಟ್ಟಿವೆ. ಎಚ್.ಕೆ. ವೀರಣ್ಣಗೌಡರಂಥ ಮರೆಯಲಾಗದ ದಿವ್ಯಚೇತನದ ಪರಿಪೂರ್ಣ ಚಿತ್ರಣವನ್ನು, ಆ ಚೇತನದ ಅಪೂರ್ವ ಸಾಧನೆ ಗಳನ್ನು ಸವಿವರವಾಗಿ ನೀಡುವುದರ ಮೂಲಕ ಆ ಮಹನೀಯರು ಸದಾ ಸ್ಮರಣೀಯ ರಾಗುವಂತೆ ಮಾಡುವಲ್ಲಿ ಈ ಕೃತಿ ಯಶಸ್ವಿ ಯಾಗಿದೆ ಎಂದೂ ಹೇಳಬಹುದು.

• • • •

ಸ್ನೇಹಮಯಿ ವ್ಯಾಕ್ಸೀನ್‌ಗಳು: ಡಾ.ಬಾಳಪ್ಪೋಂಡ್ಕೆ, ಕನ್ನಡ ರೂಪಾಂತರ: ಡಾ.ಪಿ.ಆರ್. ಚಂದ್ರಶೇಖರ, ನವಕರ್ನಾಟಕ ಪ್ರಕಾಶನ, ಮೊದಲ ಮುದ್ರಣ ೧೯೯೪, ಬೆಲೆ: ರೂ ೪೫.೦೦ ಪುಟಗಳು : ೧೨೬

೧೪ ವರ್ಷದ ಜೇಮ್ಸ್ ಫಿಲಿಪ್ ವೈದ್ಯ ಎಡ್ವರ್ಡ್ ಜೆನ್ನರ್‌ನ ಪ್ರಯೋಗಕ್ಕೆ ಒಪ್ಪಿ ಕೊಂಡು ತನ್ನ ತೋಳಿಗೆ ಮೊದಲಿಗೆ ದನದ ಸಿಡುಬಿನ ರೋಗರಸವನ್ನು ನಂತರ ದೊಡ್ಡ

ಸಿಡುಬಿನ ರೋಗರಸವನ್ನು ಚುಚ್ಚಿಸಿಕೊಂಡಾಗ ಆರಂಭವಾದ 'ವ್ಯಾಕ್ಸೀನ್‌ಗಳ' ಚರಿತ್ರೆಯನ್ನು ಕಥನಾತ್ಮಕವಾಗಿ, ಉಪಕಥೆಗಳನ್ನು ಜೋಡಿಸಿಕೊಂಡು ಕುತೂಹಲಕ್ಕೆ ಸಾಣೆ ಹಿಡಿಯುವಂತೆ ವರ್ಣಿಸಿರುವ ಶೈಲಿ ಸೊಗಸಾಗಿದೆ.

ಒಟ್ಟು ಹತ್ತು ಅಧ್ಯಾಯಂಗರುವ ಈ ಪುಸ್ತಕದಲ್ಲಿ ಒಂದೊಂದು ಅಧ್ಯಾಯವೂ ಕ್ರಮಬದ್ಧವಾಗಿ, ಸೂತ್ರವತ್ತಾಗಿ, ಅರ್ಥಪೂರ್ಣವಾಗಿ ವಾಕ್ಸಿನ್‌ಗಳ ಬಗೆಗಿನ ಸಮಗ್ರ ಮಾಹಿತಿಯನ್ನು ಕಟ್ಟಿಕೊಡಲು ಶ್ರಮಿಸುತ್ತದೆ. ಮೊದಲ ಅಧ್ಯಾಯ 'ಸಂಕೀರ್ಣ ಅದ್ಭುತ ವ್ಯವಸ್ಥೆಯಲ್ಲಿ ವ್ಯಾಕ್ಸಿನ್ ರೂಪಿಸಲು ಸಹಾಯಕವಾದ ಘಟನೆಗಳನ್ನು ವಿವರಿಸುತ್ತ ಮಾನವ 'ರೋಗ ನಿರೋಧಕ ವ್ಯವಸ್ಥೆ'ಯ ಬಗೆಗೆ ಅದರಲ್ಲೂ ಲಿಂಫೋಸೈಟ್‌ಗಳ ಬಗೆಗೆ ಸಮಗ್ರ ಮಾಹಿತಿಯನ್ನು ನೀಡಿ ಅದರ ಕಾರ್ಯವ್ಯವಸ್ಥೆಯ ರೀತಿಯನ್ನು ವಿವರಿಸಿದರೆ ಎರಡನೇ ಅಧ್ಯಾಯ 'ದೈತ್ಯ ಜ್ಞಾಪಕ ಶಕ್ತಿ'ಯಲ್ಲಿ ರೋಗ ನಿರೋಧ ವ್ಯವಸ್ಥೆಯ ಆಧಾರಸ್ತಂಭ 'ಲಿಂಫ್ ಕಣಗಳು' ಎಂದು ಸಾಬೀತು ಪಡಿಸಿದ ಜೇಮ್ಸ್ ಗೋವಾನ್ಸ್ ಪ್ರಯೋಗದ ಬಗೆಗೆ ವಿವರಿಸಿ ಪ್ರತಿಜನಕವನ್ನು ದೇಹ ಮೊದಲೇ ಕಂಡಿದ್ದರೆ ಎರಡನೆಯ ಪ್ರತಿಕ್ರಿಯೆ ತೀವ್ರವಾಗಿ ಮತ್ತು ವೇಗವಾಗಿ ವ್ಯಕ್ತವಾಗುತ್ತದೆ, ಜೈವಿಕ ಪರಸ್ಪರ ಪ್ರತಿಕ್ರಿಯೆಗಳಲ್ಲಿ ಈ' ರೋಗನಿರೋಧಕ ಜ್ಞಾಪಕ ಶಕ್ತಿ' ಬಲವಾಗಿದ್ದು ಬಹಳ ಸಲ ವ್ಯಕ್ತಿಯ ಜೀವನ ಪರ್ಯಂತ ಉಳಿದುಕೊಂಡು ಸಾಂಕ್ರಾಮಿಕ ರೋಗಗಳ ವಿರುದ್ಧ ರಕ್ಷಣೆ ಕೊಡುತ್ತವೆ. ರೋಗ ನಿರೋಧಕ ಚುಚ್ಚುಮದ್ದುಗಳು ತಮ್ಮ ಯಶಸ್ಸಿಗಾಗಿ ಈ ಜ್ಞಾಪಕಶಕ್ತಿಯ ಕೋಶಗಳನ್ನು ಅವಲಂಬಿಸುತ್ತವೆ' ಎಂಬ ವಿವರಣೆಯ ಮೂಲಕ ವ್ಯಾಕ್ಸಿನ್‌ಗಳ ಕಾರ್ಯನಿರ್ವಹಣಾ ರೀತಿಯನ್ನು ಬಹಳ ಸ್ಫುಟವಾಗಿ ನೀಡುತ್ತಾರೆ. ಮೂರನೇ ಅಧ್ಯಾಯ 'ಪ್ರಚಲಿತ ಅಭ್ಯಾಸ ರೂಢಿಗಳು' ಲೂಯಿ ಪಾಶ್ಚರ್ ದ್ರಾಕ್ಷಾರಸದ ಸೂಕ್ಷ್ಮಾಣುಜೀವಿಗಳು , ರೇಷ್ಮೆ ರೋಗ, ಕೋಳಿ ಕಾಲರ, ರೇಬೀಸ್ ಈ ರೋಗಗಳ ವ್ಯಾಕ್ಸಿನ್ ಕಂಡುಹಿಡಿದ ಬಗೆಯನ್ನು ವಿವರಿಸಿದರೆ ನಾಲ್ಕನೆಯದಾದ 'ಗಂಭೀರವಾದ ಕೊರತೆಗಳು' ಅಧ್ಯಾಯವು ಸಿಡುಬನ್ನು ಸಂಪೂರ್ಣ ಹೊರಗಟ್ಟಿದರೂ ಇನ್ನೂ ಹಲವಾರು ಮಾರಕ ರೋಗಗಳು ಜನತೆಯನ್ನು ಕಾಡುತ್ತಿರುವುದನ್ನು ವಿವರಿಸಿ ಕ್ಷಯ, ದಡಾರ, ಧನುರ್ವಾಯು, ಗಂಟಲಮಾರಿ, ನಾಯಿಕೆಮ್ಮು, ಪೋಲಿಯೋ ಇಂಥ ರೋಗಗಳಿಗೆ ವ್ಯಾಕ್ಸಿನ್‌ಗಳು ಲಭ್ಯವಿದ್ದರೂ ಕೂಡ ಅವುಗಳು ಒಂದೇ ಸಲ ಕ್ರಿಯಾತ್ಮಕವಾಗಿ ಕೆಲಸ ಮಾಡದೇ ಇರುವುದನ್ನು ಲಕ್ಷಿಸಿ ಮತ್ತು ಈ ರೀತಿಯ ಪ್ರಾಯೋಗಿಕ ಸಮಸ್ಯೆಗಳನ್ನು ಚರ್ಚಿಸುತ್ತದೆ. ಮುಂದಿನ ಅಧ್ಯಾಯ' ಭವಿಷ್ಯಕ್ಕಾಗಿ ಸ್ನೇಹಮಯಿ ವ್ಯಾಕ್ಸೀನ್' ಕಡಿಮೆ ಬೆಲೆಯ , ಸುರಕ್ಷಿತ, ಶಕ್ತಿಯುತ, ಜೀವನ ಪರ್ಯಂತ ರೋಗ ನಿರೋಧಕ ಶಕ್ತಿ ಕೊಡುವಂಥ, ಒಂದೇ ಸಲ ಕೊಡುವಂಥ, ಬಾಯಿಯ ಮೂಲಕ ಕೊಡುವಂಥ ನಿರ್ದಿಷ್ಟ ವ್ಯಾಕ್ಸೀನ್‌ಗಳನ್ನು ಎಲ್ಲಾ ರೀತಿಯ ರೋಗಗಳಿಗೆ ಕಂಡುಹಿಡಿಯುವಂತಾಗಬೇಕು ಎಂದು ಬಯಸುತ್ತದೆ.

'ಯುಕ್ತಿಯ ಆಸರೆ ' ಅಧ್ಯಾಯದಲ್ಲಿ ವ್ಯಾಕ್ಸೀನ್‌ಗಳ ಸಾಮರ್ಥ್ಯವನ್ನು ಹೆಚ್ಚಿಸುವ ಷಡ್ಯಂತ್ರ ಯುಕ್ತಿಗಳನ್ನು ಅಭಿವೃದ್ಧಿಪಡಿಸಲು ದುಡಿಯುತ್ತಿರುವ ವಿಜ್ಞಾನಿಗಳ ಸಾಧನೆಯ ಬಗೆಗೆ ಚರ್ಚೆ ಇದ್ದರೆ, 'ಕೇಡಿಗ ಮಲೇರಿಯಾ' ಹಾಗೂ 'ಚಂಚಲ ಪ್ರವೃತ್ತಿಯ ಕಾಲರಾ' ಅಧ್ಯಾಯಗಳು ಮಲೇರಿಯಾ ಮತ್ತು ಕಾಲರಾಗಳ ಭೀಕರತೆಯನ್ನು, ಅವುಗಳನ್ನು ನಿವಾರಿಸಲು ಮಾಡುತ್ತಿರುವ ವಿಫಲಯತ್ನಗಳನ್ನು, ಈ ರೋಗಗಳಿಗೆ ವ್ಯಾಕ್ಸೀನ್ ಕಂಡುಹಿಡಿಯಲೇ

ಬೇಕಾಗಿರುವ ಅನಿವಾರ್ಯತೆಯನ್ನು ಒತ್ತಿ ಹೇಳಿದರೆ, 'ಆಧುನಿಕ ವಿಪತ್ತು' ಅಧ್ಯಾಯದಲ್ಲಿ ನೈಸರ್ಗಿಕ ರಕ್ಷಣಾ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋಗುವ 'ಏಡ್ಸ್' ಮಾರಕ ರೋಗದ ಬಗೆಗೆ ಈ ರೋಗದ ವಿರುದ್ಧ ವ್ಯಾಕ್ಸೀನ್‌ಗಳನ್ನು ಕಂಡುಹಿಡಿಯಲು ಮಾಡುತ್ತಿರುವ ದೃಢ ಪ್ರಯತ್ನಗಳ ಬಗೆಗೆ ವರ್ಣಿಸಿದರೆ, ಕೊನೆಯ ಅಧ್ಯಾಯ 'ನವೋತ್ಸಾಹವನ್ನುಂಟು ಮಾಡುವ ವಿಸ್ತರಣೆಗಳು' ಕ್ಯಾನ್ಸರ್‌ಗೂ ಕೂಡ ವ್ಯಾಕ್ಸೀನ್‌ಗಳನ್ನು ಕಂಡುಹಿಡಿಯಲು ಮಾಡುತ್ತಿರುವ ಪ್ರಯೋಗಗಳ ಬಗೆಗೆ ವಿವರಿಸಿ ಒಟ್ಟಾರೆಯಾಗಿ ವ್ಯಾಕ್ಸೀನ್‌ಗಳ ಉಪಯುಕ್ತತೆಯ ಸ್ಥೂಲ ಚಿತ್ರಣವನ್ನು ನೀಡಲಾಗಿದೆ.

ಈ ಅಮೂಲ್ಯ ಪುಸ್ತಕವನ್ನು ಕನ್ನಡಕ್ಕೆ ರೂಪಾಂತರಿಸಿಕೊಟ್ಟಿರುವ ಡಾ. ಸಿ. ಆರ್. ಚಂದ್ರಶೇಖರ್ ಅವರ ಭಾಷಾಶೈಲಿ ಕೂಡ ಅತ್ಯಂತ ಸರಳವಾಗಿದ್ದು, 'ಇದು ಅನುವಾದ ಕೃತಿ' ಎಂಬ ಭಾವನೆಯೇ ಬರದ ಹಾಗೆ ವಿಷಯಗಳನ್ನು ಸುಲಲಿತವಾಗಿ ಮನ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ. ಇಂಥ ಒಂದು ಉತ್ತಮ ವೈದ್ಯವಿಜ್ಞಾನ ಪುಸ್ತಕವನ್ನು ಕನ್ನಡಕ್ಕೆ ಕೊಟ್ಟ ಎಲ್ಲಾ ಮಹನೀಯರೂ ಅಭಿನಂದನಾರ್ಹರು.

ಡಾ. ಮಂಜುಳಾ ಹುಲ್ಲಹಳ್ಳಿ
ವಾಣಿಜ್ಯ ತೆರಿಗೆ ಕಾರ್ಯಾಲಯ
ವೇಗಮಾರ್ಗ, ೩೧ನೇ ಮಹಡಿ
ಗಾಂಧೀನಗರ, ಬೆಂಗಳೂರು-೫೬೦ ೦೦೯



ಮತ ಎಂದರೆ ದೇವರನ್ನು ಕುರಿತು ನಂಬಿಕೆ ಮತ್ತು ಅನುಸಾರವಾದ ನಡೆವಳಿಕೆ.

- ಡಿ. ವಿ. ಜಿ.

ಓದುಗರ ಅನಿಸಿಕೆ

ಮಾನ್ಯ ಸಂಪಾದಕರಿಗೆ,

ಹೃದಯಪೂರ್ವಕ ನಮನಗಳು. ಏಪ್ರಿಲ್ ತಿಂಗಳ 'ಪುಸ್ತಕ ಪ್ರಪಂಚ'ದಲ್ಲಿ ಡಾ.ಸ.ಜ. ನಾಗಲೋಟಿಮಠ ಅವರು ಬರೆದ ನಾಲ್ಕು ವೈದ್ಯಕೀಯ ಲೇಖನಗಳು ಅಂತೆಯೇ ಮಾರ್ಚ್ ತಿಂಗಲ ಸಂಚಿಕೆಯಲ್ಲಿ ಬಂದ 'ಮನಗೆಲಸದವಳ ಬಗ್ಗೆ ಎಚ್ಚರವಿರಲಿ' ಲೇಖನ ಚೆನ್ನಾಗಿ ಮೂಡಿಬಂದಿದೆ. ಅದೇ ರೀತಿ ಹೊಸ ಹೊಸ ಲೇಖನಗಳನ್ನು ಪುಸ್ತಕ ಪ್ರಪಂಚ ಹೊರತರಲಿ,ಎಂದು ಆಶಿಸೋಣ. ಸಂಪಾದಕ ಮಂಡಲಿಗೆ ಭಗವಂತ ಆಶೀರ್ವದಿಸಲಿ.

ಬಸವರಾಜ.ಶಿ.ಚನ್ನೂರ
ಬಸವೇಶ್ವರ ಹೋಂ ಇಂಡಸ್ಟ್ರೀಸ್
ನೆಗಳೂರು, ಹಾವೇರಿ ತಾಲ್ಲೂಕು

ಮಾನ್ಯ ಸಂಪಾದಕರಿಗೆ,

ಏಪ್ರಿಲ್ ೨೦೦೦ದ 'ಪುಸ್ತಕ ಪ್ರಪಂಚ' ಸಂಚಿಕೆ ಕೈಸೇರಿತು. ಇದರಲ್ಲಿ ಪ್ರಕಟವಾದ ಡಾ.ವಿಶ್ವನಾಥ ರವರು ಬರೆದ ಕತ್ತಲು ಎಂಬ ಕಥೆ ತುಂಬಾ ಅರ್ಥಪೂರ್ಣವಾಗಿ ಬಂದಿದೆ. ಅದರಲ್ಲಿ ಒಬ್ಬ ತಂದೆ ಎಂಟು ಮಕ್ಕಳ ನಡುವಿನ ಕಷ್ಟ ಕೋಟಲೆಗಳನ್ನು 'ಕತ್ತಲು' ಕತೆಯಲ್ಲಿ ಚೆನ್ನಾಗಿ ಬಂದಿದೆ. ಈ ರೀತಿ ಕತೆಗಳನ್ನು ಪ್ರಕಟಿಸಿರುವುದಕ್ಕೆ ಅಭಿನಂದನೆಗಳು. ಇದೇ ರೀತಿ ಉತ್ತಮ ಬರಹಗಳು ಮುಂದೆ ಪ್ರಕಟವಾಗಲಿ ಎಂದು ಆಶಿಸುತ್ತೇನೆ.

ಸುಭಾಶ್.ಚ.ಮೂಗನೂರು
ಮಂಜು.ಪ.ಬ್ಯಾನಿಗೌಡ್ರ
ನೆಗಳೂರು , ಹಾವೇರಿ ತಾಲ್ಲೂಕು

೧೩.೪.೨೦೦೦

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮುಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ॥ ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ

(ಬೆಲೆ : ರೂ. ೫೨–೦೦)

ನಾಡಿನ ಖ್ಯಾತಕಲಾವಿದರಾದ ದಿ॥ ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್ ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:
ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬

Licence No 21. Reg. No. KA/SK/Mys-56
Licenced to Post with payment at Mysore, R. M. S/II



71 ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to:
KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006